ಸಂಸ್ಕಾರ ತರಂಗಿಣೀ

ಪುಷ್ಪ – 8

ಉಪಾಕರ್ಮ –

ಪ್ರಾಯಶ್ಚಿತ್ತ ಪ್ರಕರಣಂ –

ಪತಿಪತ್ನೀ ಅನ್ಯೋನ್ಯ ವಿಚಾರಃ –

ಕ್ಷಯ ಕುಷ್ಠಾದಿ ರೋಗ

ನಿವಾರಣಾ ವಿಚಾರಃ –

ಶೀಘ್ರ, ಸುಲಭ,

ಪ್ರಸವ ವಿಚಾರಃ

ಮೊದಲ ಬಾರಿಗೆ ಕನ್ನಡದಲ್ಲಿ

(ಕಪರ್ದಿಕಾರಿಕಾ–ಆಪಸ್ತಂಬ

ಗೃಹ್ಯಸೂತ್ರಂ–ಯಾಜುಷ ಪ್ರಯೋಗಃ

ಪ್ರತಿ ವಾಕ್ಯಕ್ಕೂ ಕನ್ನಡದಲ್ಲಿ ಅರ್ಥ)

ಅಕ್ಷರ ಜೋಡಣೆ

ಶ್ರೀಮತಿ ಭಾರತೀ ಶರ್ಮಾ

ಅನುವಾದಕ ಲೇಖಕರು

ಮತ್ತು ಪ್ರಕಾಶಕರು

ವೇ॥ಬ್ರ॥ ಶ್ರೀ

ಎ.ಸಿ. ಶಕ್ತಿಧರ ಶರ್ಮಾ

ಸಲಹೆಗಾರರು

ವಿದ್ವಾನ್ ವೇ॥ಬ್ರ॥ ಶ್ರೀ

ಚಂದ್ರಶೇಖರ ಶರ್ಮಾ ಅವಧಾನಿಗಳ

ಪ್ರಧಾನ ಮಾರ್ಗದರ್ಶಕರು

ವಿದ್ವಾನ್ ವೇ॥ಬ್ರ॥ ಶ್ರೀ

ಶಿವಕುಮಾರ ಅವಧಾನಿಗಳು

ಪ್ರಧಾನ ಮಾರ್ಗದರ್ಶಕರು

ವಿದ್ವಾನ್ ವೇ॥ಬ್ರ॥ ಶ್ರೀ

ಕಿರಣ ಅವಧಾನಿಗಳು

ಸಲಹೆಗಾರರು

ವಿದ್ವಾನ್ ವೇ॥ಬ್ರ॥ ಶ್ರೀ

ವೇಂಕಟೇಶ ಅವಧಾನಿಗಳು

ಅಕ್ಷರ ಜೋಡಣೆ

ವೇ॥ಬ್ರ॥ ಶ್ರೀ ಶ್ರೀನಿವಾಸ ಶಾಸ್ತ್ರೀ

ಚಿತ್ರಕೂಟ ಮುದ್ರಣ ಮಾಲೀಕರು

ಶ್ರೀ ಹೆಚ್.ಆರ್. ಶ್ರೀನಿವಾಸ

ಸಂಸ್ಕಾರ ತರಂಗಿಣೀ

ಪುಷ್ಪ – 8

ಉಪಾಕರ್ಮ –
ಪ್ರಾಯಶ್ಚಿತ್ತ ಪ್ರಕರಣಂ –
ಪತಿಪತ್ನೀ ಅನ್ಯೋನ್ಯ ವಿಚಾರಃ –
ಕ್ಷಯ ಕುಷ್ಠಾದಿ ರೋಗ
ನಿವಾರಣಾ ವಿಚಾರಃ –
ಶೀಘ್ರ ಸುಲಭ ಪ್ರಸವ ವಿಚಾರಃ

ಮೊದಲ ಬಾರಿಗೆ ಕನ್ನಡದಲ್ಲಿ

(ಕಪರ್ದಿಕಾರಿಕಾ–ಆಪಸ್ತಂಬ ಗೃಹ್ಯಸೂತ್ರಂ–ಯಾಜುಷ ಪ್ರಯೋಗ ಕ್ರಮಃ–ಪ್ರತಿ ವಾಕ್ಯಕ್ಕೂ ಕನ್ನಡದಲ್ಲಿ ಅರ್ಥಸಹಿತ)

ವಿಷಯಾನುಕ್ರಮಣಿಕೆ

1. ಗ್ರಂಥನಾಮ 1

2. ವಿಷಯಸೂಚಿ 2

3. ಗುರುವಂದನೆ 3

4. ಕೃತಜ್ಞತೆಗಳು 4

5. ಸಂಪಾದಕೀಯ 5

6. ನಮ್ಮ ಪ್ರಕಟಣೆಗಳು 6–7

7. ಪುಸ್ತಕಗಳು ದೊರೆಯುವ ಸ್ಥಳಗಳು 8

8. ಹಿರಿಯರ ನುಡಿ 9–11

9. ಪ್ರಸ್ತಾವನೆ 12–16

10. ಚಿಂತನ 17–19

11. ಉಪಾಕರ್ಮ

ಅ) ಕಪರ್ದಿಕಾರಿಕಾ 20–21

ಆ) ಆಪಸ್ತಂಬ ಗೃಹ್ಯಸೂತ್ರಂ 21

ಇ) ಪ್ರಯೋಗಃ 21–38

12. ಪ್ರಾಯಶ್ಚಿತ್ತ ಪ್ರಕರಣಂ

ಅ) ಕಪರ್ದಿಕಾರಿಕಾ 38–61

13. ಪತಿ ಪತ್ನೀ ಅನ್ಯೋನ್ಯ ವಿಚಾರಃ

ಅ) ಆಪಸ್ತಂಬ ಗೃಹ್ಯಸೂತ್ರಂ 61–67

14. ಕ್ಷಯ ಕುಷ್ಠ ರೋಗ ನಿವಾರಣಾ ವಿಚಾರಃ

ಅ) ಆಪಸ್ತಂಬ ಗೃಹ್ಯಸೂತ್ರಂ 67

15. ಶೀಘ್ರ ಸುಲಭ ಪ್ರಸವ ವಿಚಾರಃ

ಅ) ಆಪಸ್ತಂಬ ಗೃಹ್ಯಸೂತ್ರಂ 67–71

16. ವಿಶೇಷ ವಿಚಾರಃ 71–77

॥ ಓಂ ಶ್ರೀ ॥

ಯಜ್ಞದೇಹ ಯಜುಶ್ಶಾಖಾ ಕಲ್ಪಸೂತ್ರ ಪ್ರವರ್ತಕ: ।
ಸಕಲಾಮ್ನಾಯವಿಜ್ಞೇಯಾತ್ ಆಪಸ್ತಂಬೋ ಮಹಾಮುನಿ: ॥
ಬೋಧಾಯನೋ ಯಂ ಭಗವಾನ್ ಮುಖ್ಯಶಿಷ್ಯಮಚೀಕರತ್
ವಿಪಶ್ಚಿದ್ದಾಶತಾನ್ ಮೇಧಾಂ ಆಪಸ್ತಂಬ: ಸ ಮೇ ಮುನಿ: ।
ಸಂತ: ತತ್ಸೂತ್ರಗಂಭೀರ ವ್ಯಾಖ್ಯಾಪ್ರಖ್ಯಾತ ವೈಭವಾ:
ಕಪರ್ದಿ ಧೂರ್ತಸ್ವಾಮ್ಯಾದ್ಯಾ: ಜೇಜೀಯಂತಾಂ ವಿಮತ್ಸರಾ: ॥
ಪ್ರಾಚೀನೇಷು ನಿಬಂಧನೇಷು ಗಹನಾನ್ ಸಂಗೃಹ್ಯಚಾರ್ಥಾನ್ ಬಹೂನ್
ಅಲ್ಪಜ್ಞೇನ ವಿಧಾಸ್ಯತೇ ಪರಮಯಂ ವಿದ್ವಜ್ಜನಾನುಗ್ರಹಾತ್ ।
ಧೀರಾ ಗ್ರಂಥಮಿಮಂ ವಿಲೋಕ್ಯ ಸುಧಿಯೋ ದೋಷಾನಪಾಸ್ಯಾದರಾತ್
ನೀರಕ್ಷೀರನಯೇನ ಸದ್ಗುಣಗಣಾನ್ ಗೃಹ್ಣಂತ್ವಿತಿ ಪ್ರಾರ್ಥಯೇ ॥
ಜಗದ್ಗುರೂಣಾಂ ಕರುಣಾ ಅವಧೂತಾನುಗ್ರಹಶ್ಚಿರಂ ।
ಧನ್ಯೋಸ್ಮಿ ಶಕ್ತಿಧರೋಽಹಂ ಸುಲಬ್ಧೌಯುಗಪದ್ಮಯಾ ॥

॥ ಅವಧೂತ ಶ್ರೀ ಚಂದ್ರಶೇಖರ ಭಾರತೀ ಪರಮಹಂಸ ಜಗದ್ಗುರವೇ ನಮಃ ॥

॥ ಪೂಜ್ಯ ಶ್ರೀ ಭಾರತೀತೀರ್ಥ ಜಗದ್ಗುರು ಸಾರ್ವಭೌಮಾಯ ನಮಃ ॥

ಜಗದ್ಗುರು ಶ್ರೀ ಆದಿಶಂಕರಾಚಾರ್ಯ ಮಹಾಸಂಸ್ಥಾನಮ್,
ಶಾರದಾ ಪೀಠಮ್, ಶೃಂಗೇರಿ

॥ ವಾತ್ಸಲ್ಯ ನಿಧಿ ಅವಧೂತ ಶ್ರೀ ವೇಂಕಟಾಚಲ ಸದ್ಗುರವೇ ನಮಃ ॥
(ಎಲ್ಲವೂ ನಿನ್ನದಯ್ಯ ನನ್ನದೇನೂ ಇಲ್ಲವಯ್ಯಾ ಗುರುನಾಥ)

॥ ಶ್ರೀ ಗುರುಭ್ಯೋ ನಮಃ ಹರಿಃ ಓಂ ॥

ಕೃತಜ್ಞತೆಗಳು

ಪವಿತ್ರವಾದ ಈ ಕೈಂಕರ್ಯದಲ್ಲಿ ಸದಾ ನಮ್ಮೊಂದಿಗಿದ್ದು ಪ್ರೋತ್ಸಾಹಿಸುತ್ತಾ ಧಾರ್ಮಿಕ ಶ್ರದ್ಧೆಯೊಂದಿಗೆ, ಸಾಮಾಜಿಕ ಕಳಕಳಿಯ ಬದ್ಧತೆಯನ್ನು ತೋರುತ್ತಿರುವ ಈ ಮಹನೀಯರನ್ನು ಸ್ಮರಿಸುವುದು ನಮ್ಮ ಕರ್ತವ್ಯವಾಗಿದೆ . ಇವರೆಲ್ಲರಿಗೂ ಶ್ರೀ ಗುರುನಾಥರ ಸಾನ್ನಿಧ್ಯದ ಅನುಭೂತಿಯು ಸದಾಕಾಲ ಸಿಗುತ್ತಿರಲೆಂದು ನಾವು ಪ್ರಾರ್ಥಿಸುತ್ತೇವೆ.

1. **ಶ್ರೀಯುತ ವಿ.ಆರ್. ಗೌರೀಶಂಕರ್, ಆಡಳಿತಾಧಿಕಾರಿಗಳು, ಜಗದ್ಗುರು ಶಾರದಾ ಪೀಠ ಮಹಾ ಸಂಸ್ಥಾನಮ್,** ಶೃಂಗೇರಿ.
2. **ಡಿವೈನ್ ಲೈಫ್ ಸೊಸೈಟಿ,** ಶಿವಾನಂದ ಆಶ್ರಮ, ಹೃಷೀಕೇಶ .
3. **ಬಾಡಿ ಟೆಂಪಲ್ ಯೋಗಾಸೆಂಟರ್,** ಶಿವಮೊಗ್ಗ .
4. **ಶ್ರೀಯುತ ವಿದ್ವಾನ್, ಮಾರ್ಕಂಡೇಯ ಅವಧಾನಿಗಳು,** ಬೃಹಸ್ಪತ್ಯಾಚಾರ್ಯರು, ಮತ್ತೂರು.
5. **ಶ್ರೀಯುತ ವಿದ್ವಾನ್ ಡಾ॥ ಸುಬ್ರಾಯ ವಿ. ಭಟ್ ,** ಮೀಮಾಂಸಾ ಶಾಸ್ತ್ರ ಪ್ರಾಧ್ಯಾಪಕರು, ರಾಜೀವ್‌ಗಾಂಧಿ ಕೇಂದ್ರೀಯ ಸಂಸ್ಕೃತ ವಿದ್ಯಾಪೀಠ, ಶೃಂಗೇರಿ.
6. **ಶ್ರೀಯುತ ಸುಬ್ರಹ್ಮಣ್ಯ ಪ್ರಸಾದ್‌ರವರು ,** ಎಸ್.ಎಲ್.ಎನ್. ರೇಡಿಯೋಸ್, ಶಿವಮೊಗ್ಗ .
7. **ಶ್ರೀಯುತ ರಾಮಪ್ರಸಾದ್, ಸಹೋದರರು,** ಅಶ್ವಿನಿ ಡಿಜಿಟಲ್ ಆಡಿಯೋಸ್, ಬೆಂಗಳೂರು .
8. **ಶ್ರೀಯುತ ಪ್ರವೀಣ್‌ರವರು,** ಬೆಂಗಳೂರು .
9. **ವೇದಬ್ರಹ್ಮ ಶ್ರೀಯುತ ಭಾನುಪ್ರಕಾಶ ಶರ್ಮರು,** ಶ್ರೀರಂಗಪಟ್ಟಣ .
10. **ಶ್ರೀಯುತ ಶರಚ್ಚಂದ್ರರವರು,** ಡಿ.ಐ.ಜಿ. (ಗುಪ್ತದಳ), ಬೆಂಗಳೂರು .
11. **ಶ್ರೀಯುತ ಡಾ॥ ಮಧುಕೇಶ್ವರ್‌ರವರು,** ತಹಶೀಲ್ದಾರ್, ಭಟ್ಕಳ.
12. **ಶ್ರೀಯುತ ವಿದ್ವಾನ್ ಕಣ್ಣನ್‌ರವರು,** ಹಿರೇಮಗಳೂರು .
13. **ಶ್ರೀಯುತ ಗಣೇಶ್‌ರವರು,** ಎಲ್.ಐ.ಸಿ. ಡೆವಲಪ್ ಮೆಂಟ್ ಆಫೀಸರ್, ಬೆಂಗಳೂರು.
14. **ಶ್ರೀಯುತ ಪ್ರಭಾಕರ್‌ರವರು,** ಇನ್‌ಫರ್‌ಮೇಷನ್ ಟೆಕ್ನಾಲಜಿ ವಿಭಾಗದ ಮುಖ್ಯಸ್ಥರು, ಮಲ್ನಾಡ್ ಇಂಜಿನಿಯರಿಂಗ್ ಕಾಲೇಜ್, ಹಾಸನ.

ಸಂಪಾದಕರು, ಅನುವಾದಕ ಲೇಖಕರು ಮತ್ತು ಪ್ರಕಾಶಕರು

ವೇದಬ್ರಹ್ಮ ಶ್ರೀ ಎ.ಸಿ. ಶಕ್ತಿಧರ ಶರ್ಮಾ

ದೂ : 9686497982, 08175225445

ಅಕ್ಷರಜೋಡಣೆ : ವೇ॥ಬ್ರ॥ಶ್ರೀ ಸಿ. ಶ್ರೀನಿವಾಸ ಶಾಸ್ತ್ರೀ, ಶೃಂಗೇರಿ. ಮತ್ತು ಶ್ರೀಮತಿ ಭಾರತೀ ಶರ್ಮಾ. ವೇ॥ಬ್ರ॥ ಶ್ರೀ ಶಕ್ತಿಧರ ಶರ್ಮಾ

ವರ್ಷ : ಫೆಬ್ರವರಿ 2013 (ನಂದನ ಸಂವತ್ಸರ, ಮಾಘ ಮಾಸ)

ಪ್ರತಿಗಳು : 1,000

ಪುಟಗಳು : 78 + 4

ಹಕ್ಕುಗಳು : ಲೇಖಕರದ್ದು©

ಮೌಲ್ಯ : **ಅಮೂಲ್ಯ**

ಪ್ರೋತ್ಸಾಪಯುತ ಕಾಣಿಕೆ :

ಮುದ್ರಕರು : ಚಿತ್ರಕೂಟ ಪ್ರಿಂಟರ್ಸ್, ಶಿವಮೊಗ್ಗ
ಮೊ : 9448449664

ಪ್ರಧಾನ ಮಾರ್ಗದರ್ಶಕರು : **ವೇ॥ ಬ್ರ॥ ಶ್ರೀ॥ ವಿದ್ವಾನ್ ಶಿವಕುಮಾರ ಅವಧಾನಿಗಳು,** ಮತ್ತೂರು.

ವೇ॥ ಬ್ರ॥ ಶ್ರೀ॥ ವಿದ್ವಾನ್ ಕಿರಣ ಅವಧಾನಿಗಳು, ಮತ್ತೂರು.

ಸಲಹೆಗಾರರು : ವೇ॥ಬ್ರ॥ ಶ್ರೀ ವಿದ್ವಾನ್ ಚಂದ್ರಶೇಖರ ಶರ್ಮಾ ಅವಧಾನಿಗಳು, ಅಗ್ರಹಾರ.

ವೇ॥ಬ್ರ॥ ಶ್ರೀ ವಿದ್ವಾನ್ ವೇಂಕಟೇಶ ಅವಧಾನಿಗಳು, ರಾಮನಾಥಪುರ.

ಈ ಪುಸ್ತಕ ಹೊರಬರಲು ಕಾರಣರಾದ ಎಲ್ಲಾ ಮಹನೀಯರಿಗೂ ಕೃತಜ್ಞತೆಗಳು

ಶ್ರೀ ಚೈತನ್ಯ ಗುರುನಾಥ ಪ್ರಕಾಶನದವರ ಪ್ರಕಟಣೆಗಳು

1 ಅನುಷ್ಠಾನ ತರಂಗಿಣೀ

(ನಿತ್ಯ ಪೂಜಾವಿಧಿ, ಯತಿ ಆರಾಧನಾ ಪ್ರಯೋಗ ಮತ್ತು ಅವಧೂತ ಗೀತೆ ಶ್ಲೋಕ ಮತ್ತು ಅರ್ಥಸಹಿತ)

2. ಸಂಸ್ಕಾರ ತರಂಗಿಣೀ ಪುಷ್ಪ–1 (ಪುಂಸವನ ಮತ್ತು ಸೀಮಂತೋನ್ನಯನ)

3. ಸಂಸ್ಕಾರ ತರಂಗಿಣೀ ಪುಷ್ಪ–2 (ಜಾತಕರ್ಮ, ನಾಮಕರಣ, ಉಪನಿಷ್ಕ್ರಮಣ ಮತ್ತು ಅನ್ನಪ್ರಾಶನ)

4. ಸಂಸ್ಕಾರ ತರಂಗಿಣೀ ಪುಷ್ಪ–3 (ಚೂಡಾಕರ್ಮ, ಅಕ್ಷರಾರಂಭ ಮತ್ತು ಉಪನಯನ)

5. ಸಂಸ್ಕಾರ ತರಂಗಿಣೀ ಪುಷ್ಪ–4 (ಸಖರಾಯಪಟ್ಟಣದ ಪೂಜ್ಯ ಅವಧೂತ ಶ್ರೀ ವೇಂಕಟಾಚಲ ಸದ್ಗುರುನಾಥ ಮಹಾತ್ಮರ ಅಮೃತವಾಣಿ, ಭಗವದ್ಗೀತೆಯಲ್ಲಿ ಕರ್ಮ ಭಾಗದ ವಿಚಾರ, ವ್ರತಚತುಷ್ಟಯ, ಸಮಾವರ್ತನ, ವಿವಾಹ, ಗರ್ಭಾಧಾನ)

6. ಸಂಸ್ಕಾರ ತರಂಗಿಣೀ ಸರಣಿಯ ಪುಷ್ಪ–5

ಅನುಷ್ಠಾನ ತರಂಗಿಣೀ–ದ್ವಿತೀಯ ಮುದ್ರಣ

(ಸಖರಾಯಪಟ್ಟಣದ ಪೂಜ್ಯ ಅವಧೂತ ಶ್ರೀ ವೇಂಕಟಾಚಲ ಸದ್ಗುರುನಾಥ ಮಹಾತ್ಮರ ಅಮೃತವಾಣಿ, ನಿತ್ಯ ಪೂಜಾವಿಧಿ, ಗುರುಗೀತಾ ಪಾರಾಯಣ ಕ್ರಮ ಅರ್ಥಸಹಿತ, ಯತಿ ಆರಾಧನಾ ಪ್ರಯೋಗ ಮತ್ತು ಅವಧೂತ ಗೀತೆ ಶ್ಲೋಕ ಮತ್ತು ಅರ್ಥಸಹಿತ)

7. ಪ್ರಪ್ರಥಮ ಬಾರಿಗೆ ಧ್ವನಿಸುರುಳಿಯಲ್ಲಿ ಕೃಷ್ಣಯಜುರ್ವೇದ ತೈತ್ತಿರೀಯ ಶಾಖೆಯ ಬ್ರಾಹ್ಮಣ, ಆರಣ್ಯಕ, ಸಂಹಿತೆ, ಕ್ರಮ, ಘನ, ಉದಕಶಾಂತಿ ಮಂತ್ರಗಳು ಹಾಗೂ ದೇವರನಾಮ, ಕೀರ್ತನೆಗಳು.

8. ಸಂಸ್ಕಾರ ತರಂಗಿಣೀ ಪುಷ್ಪ–6

(ಅನುಜ್ಞೆ ಸಂಕಲ್ಪ, ಪುಣ್ಯಾಹ, ನಾಂದೀ, ಅಂಕುರಾರೋಪಣ, ರಕ್ಷಾಬಂಧನ, ಅಗ್ನಿಮುಖ {ಹೋಮ})

9. ಸಂಸ್ಕಾರ ತರಂಗಿಣೀ ಪುಷ್ಪ–7

(ಸ್ನಾನ, ಸರಳ ಶಾಸ್ತ್ರೀಯ ಸಂಧ್ಯಾವಂದನೆ, ಅಗ್ನಿಪುನಸ್ಸಂಧಾನ, ಔಪಾಸನ, ಬ್ರಹ್ಮಯಜ್ಞ, ವೈಶ್ವದೇವ, ವಿಧುರಾಗ್ನಿ ಸಂಧಾನ, ತರ್ಪಣ ಕ್ರಮ, ಯಜ್ಞೋಪವೀತ ಧಾರಣ ಕ್ರಮ, ಭೋಜನ ಪರಿಷೇಚನ ಕ್ರಮ)

10. ಸಂಸ್ಕಾರ ತರಂಗಿಣೀ ಪುಷ್ಪ–1, 2 ದ್ವಿತೀಯ ಮುದ್ರಣ

(ಪುಂಸವನ, ಸೀಮಂತೋನ್ನಯನ, ಜಾತಕರ್ಮ, ನಾಮಕರಣ, ಉಪನಿಷ್ಕ್ರಮಣ ಮತ್ತು ಅನ್ನಪ್ರಾಶನ)

11. ಸಂಸ್ಕಾರ ತರಂಗಿಣೀ ಪುಷ್ಪ–3 ದ್ವಿತೀಯ ಮುದ್ರಣ

(ಚೂಡಾಕರ್ಮ, ಅಕ್ಷರಾರಂಭ ಮತ್ತು ಉಪನಯನ)

12.ಸಂಸ್ಕಾರ ತರಂಗಿಣೀ ಪುಷ್ಪ – 8 (ಉಪಾಕರ್ಮ, ಪ್ರಾಯಶ್ಚಿತ್ತ ಪ್ರಕರಣ, ಆಪಸ್ತಂಬ ಗೃಹ್ಯಸೂತ್ರದಲ್ಲಿ ಬರುವ ಪತಿಪತ್ನಿಯರ ಅನ್ಯೋನ್ಯವಿಚಾರ, ಶೀಘ್ರ ಮತ್ತು ಸುಲಭ ಪ್ರಸವವಿಚಾರ, ಕುಷ್ಠ, ಕ್ಷಯಾದಿರೋಗ ನಿವಾರಣಾ ವಿಚಾರ ಹಾಗೂ ಇನ್ನಿತರ ವಿಶೇಷ ವಿಚಾರಗಳು)

ಮುಂದಿನ ಪ್ರಕಟಣೆಗಳು

1. **ಸಂಸ್ಕಾರ ತರಂಗಿಣೀ ಪುಷ್ಪ – 9** (ಆಪಸ್ತಂಬೋಕ್ತ ಗೃಹನಿರ್ಮಾಣ – ಗೃಹ ಪ್ರವೇಶ, ವೈಶ್ವದೇವ, ಬಲಿಹರಣ, ಪಂಚಮಹಾಯಜ್ಞಗಳಲ್ಲಿ ಬರುವ ಮಂತ್ರಗಳು ಮತ್ತು ಅವುಗಳಿಗೆ ಭಾಷ್ಯಾರ್ಥ ಹಾಗೂ ವಿಶೇಷ ವಿಚಾರಗಳು)
2. **ಸಂಸ್ಕಾರ ತರಂಗಿಣೀ ಪುಷ್ಪ – 10** (ಹದಿನಾರು ಸಂಸ್ಕಾರಗಳಲ್ಲಿ ಬರುವ ಅಷ್ಟೂ ಮಂತ್ರಗಳಿಗೆ ಭಾಷ್ಯಾರ್ಥ ಕನ್ನಡದಲ್ಲಿ)
3. **ಸಂಸ್ಕಾರ ತರಂಗಿಣೀ ಪುಷ್ಪ – 11** (ಶ್ರಾದ್ಧ)
4. **ಸಂಸ್ಕಾರ ತರಂಗಿಣೀ ಪುಷ್ಪ – 12** (ಪಿತೃಮೇಧ ಸಂಸ್ಕಾರ [ಅಂತ್ಯೇಷ್ಟಿ])
5. **ಸಂಸ್ಕಾರ ತರಂಗಿಣೀ ಪುಷ್ಪ – 13**
   (ರುದ್ರ – ಚಮಕ – ಆಶೀರ್ವಾದ ಮಂತ್ರಗಳ ಘನಪಾಠ)
6. **ಸಂಸ್ಕಾರ ತರಂಗಿಣೀ ಪುಷ್ಪ – 14** (ಮಾರ್ಕಂಡೇಯ ಪುರಾಣದಲ್ಲಿ ಬರುವ ದುರ್ಗಾ ಸಪ್ತಶತಿಯ ಶ್ಲೋಕಗಳು ಮತ್ತು ಅರ್ಥ (ಕನ್ನಡದಲ್ಲಿ)
7. **ಸಂಸ್ಕಾರ ತರಂಗಿಣೀ ಪುಷ್ಪ – 15** (ಮಹಾವಿದ್ಯಾ ಮಂತ್ರ ಮಹಾರಾಜ್ಞೀಯಮ್)

ಪ್ರತಿಗಳು ದೊರೆಯುವ ಸ್ಥಳಗಳು :

1. ವೇ॥ ಬ್ರ॥ ಶ್ರೀ ಎ.ಸಿ. **ಶಕ್ತಿಧರ ಶರ್ಮಾ**, ಶಿವಮೊಗ್ಗ ಮೊ. : 9686497982
2. **ಶ್ರೀಮಠ ಪುಸ್ತಕಾಲಯ**, ಶಾರದಾಪೀಠಮ್, ಶೃಂಗೇರಿ
3. **ಶೃಂಗೇರಿ ಸ್ಟೋರ್ಸ್**, ಮಾರಿಕಾಂಬ ಗದ್ದುಗೆ ಎದುರು, ಕೋಟೆ ರಸ್ತೆ, ಶಿವಮೊಗ್ಗ
4. **ಉಡುಪಿ ಸ್ಟೋರ್ಸ್**, ಗಾಂಧಿ ನಗರ, ಶಿವಮೊಗ್ಗ
5. **ರಾಜಾರಾಮ್ ಬುಕ್ ಹೌಸ್**, ಶಿವಮೊಗ್ಗ
6. **ಸಪ್ನಾ ಬುಕ್ ಹೌಸ್**, ಮೈಸೂರು
7. **ಕರ್ನಾಟಕ ಪುಸ್ತಕ ಪ್ರದರ್ಶನ**, ಸಹ್ಯಾದ್ರಿ ಥಿಯೇಟರ್ ಪಕ್ಕ, ಹಾಸನ
8. **ಪ್ರಚೇತಾ ಬುಕ್ ಹೌಸ್**, ಹೋಟೆಲ್ ಶಾಂತಿ ಸಾಗರ್ ಬಿಲ್ಡಿಂಗ್, ಬುಲ್‌ಟೆಂಪಲ್ ರಸ್ತೆ, ಬೆಂಗಳೂರು
9. **ವೇದಾಂತ ಬುಕ್ ಹೌಸ್**, ಉಮಾ ಟಾಕೀಸ್ ಹತ್ತಿರ, ಬೆಂಗಳೂರು
10. **ಸಾಹಿತ್ಯ ಗಂಗಾ**, ರಾಷ್ಟ್ರೋತ್ಥಾನ ಪರಿಷತ್, ಕೇಶವ ಶಿಲ್ಪ, ಉಮಾ ಟಾಕೀಸ್ ಹತ್ತಿರ, ಬೆಂಗಳೂರು
11. **ಸಪ್ನಾ ಬುಕ್ ಹೌಸ್**, ಗಾಂಧಿನಗರ, ಬೆಂಗಳೂರು
12. **ಶೃಂಗೇರಿ ಶಂಕರ ಮಠ**, ಉಮಾ ಟಾಕೀಸ್ ಹತ್ತಿರ, ಬೆಂಗಳೂರು
13. **ನ್ಯೂ ವೇದಾಂತ ಬುಕ್‌ಹೌಸ್**, ಈಸ್ಟ್‌ಪಾರ್ಕ್ ರಸ್ತೆ, ಮಲ್ಲೇಶ್ವರಂ, ಬೆಂಗಳೂರು
14. **ಬುಕ್ ಹೌಸ್**, ಸರ್ಕಾರಿ ಬಸ್‌ನಿಲ್ದಾಣ, ಚಿತ್ರದುರ್ಗ
15. **ಸಪ್ನ ಬುಕ್ ಹೌಸ್**, ಮಂಗಳೂರು

ಹಿರಿಯರ ನುಡಿ

ಶ್ರೀ ಶಾರದಾ ಗುರು ಅನುಗ್ರಹ ಪಡೆದ ಶ್ರೀ ಶಕ್ತಿಧರ ಶರ್ಮ ನಮ್ಮ ನಾಡಿನ ಒಂದು ಶಕ್ತಿಯೇ ಸೈ. ಅವರ ಪರಿಶ್ರಮದಿಂದ ಪುರೋಹಿತರಿಗೆ ಮತ್ತು ಪ್ರಯೋಕ್ತೃಗಳಿಗೆ ಹಾಗೂ ಕರ್ಮ ಭಾಗದಲ್ಲಿ ಶ್ರದ್ಧೆಯಿರುವ ಎಲ್ಲರಿಗೂ ಸಂಸ್ಕಾರ ತರಂಗಿಣೀ ಎಂಬ ಪೂರ್ವ ಪ್ರಯೋಗ ಪುಸ್ತಕ ಬಂದದ್ದು ತುಂಬಾ ಉಪಕಾರವಾಗಿದೆ. ಈ ಕೈಪಿಡಿಯು ಜೊತೆಯಲ್ಲಿದ್ದರೆ ಗುರುವೇ ಜೊತೆಯಲ್ಲಿದ್ದಂತೆ. ನಿಮಗೆ ಯಾವ ವಿಷಯ ಬೇಕು ? – ಋಷಿ ವಾಕ್ಯ ಬೇಕೇ, ಕಪರ್ದಿ ಮುನಿಯ ಕಾರಿಕೆ ಇದೆ . ಸೂತ್ರಕಾರರ ವಾಕ್ಯ ಬೇಕೇ , ಆಪಸ್ತಂಬ ಗೃಹ್ಯಸೂತ್ರ ವಾಕ್ಯ ಇದೆ . ಪ್ರಯೋಗ ಬೇಕೇ, ಅಜಸ್ರಾಗ್ನಿ ಧಾರಕರೂ ಹಾಗೂ ಕರ್ಮಠರೂ ನಡೆಸಿಕೊಂಡು ಬಂದಿರುವ, ಸರಳಮಂತ್ರಾನುಪೂರ್ವಿ ಪ್ರಯೋಗ ಇದೆ. ಅಲ್ಲದೆ ಕಪರ್ದಿಕಾರಿಕೆ – ಅದರ ಕನ್ನಡ ಅರ್ಥ...., ಆಪಸ್ತಂಬ ಗೃಹ್ಯಸೂತ್ರ – ಅದರ ಕನ್ನಡ ಸರಳ ಅನುವಾದ ...., ಪ್ರಯೋಗ – ಅದರ ತಿಳಿ ಕನ್ನಡ ಅರ್ಥ . ಈ ರೀತಿಯ ಶೈಲಿ ಇವರ ಎಲ್ಲಾ ಪುಸ್ತಕಗಳಲ್ಲೂ ಬಂದಿರುವುದೇ ವಿಶೇಷತೆಯ ಲಕ್ಷಣವಾಗಿದೆ .

ಈಗಾಗಲೇ ಪುಂಸವನ, ಸೀಮಂತ, ಜಾತಕರ್ಮ, ನಾಮಕರಣ, ಉಪನಿಷ್ಕ್ರಮಣ, ಅನ್ನಪ್ರಾಶನ, ಚೂಡಾಕರ್ಮ, ಅಕ್ಷರಾರಂಭ, ಉಪನಯನ, ವ್ರತಚತುಷ್ಟಯ, ಸಮಾವರ್ತನ, ವಿವಾಹ, ಗರ್ಭಾಧಾನ, ಸರಳ ಪೂಜಾಕ್ರಮ, ವಿಸ್ತಾರ ಪೂಜಾಕ್ರಮ, ಅವಧೂತಗೀತೆ, ಗುರುಗೀತೆ, ಯತಿ ಆರಾಧನಾಪ್ರಯೋಗ, ಸಂಕಲ್ಪ, ಪುಣ್ಯಾಹ, ನಾಂದಿ, ಅಂಕುರಾರೋಪಣ, ರಕ್ಷಾಬಂಧನ, ಅಗ್ನಿಮುಖ (ಹೋಮ), ಸ್ನಾನ, ಸರಳ ಶಾಸ್ತ್ರೀಯ ಸಂಧ್ಯಾವಂದನೆ, ಔಪಾಸನ, ಅಗ್ನಿಪುನಸ್ಸಂಧಾನ, ಬ್ರಹ್ಮಯಜ್ಞ, ವೈಶ್ವದೇವ, ತರ್ಪಣಕ್ರಮ, ಭೋಜನವಿಷಯ, ಯಜ್ಞೋಪವೀತ ಧಾರಣ ವಿಚಾರ ಇಷ್ಟೂ ಕರ್ಮಗಳನ್ನು ಒಳಗೊಂಡಂತಹ ಏಳು ಗ್ರಂಥಗಳು ಸಮಾಜಕ್ಕೆ ಬಂದಾಗಿದೆ. ಹಾಗೂ ಇವುಗಳಲ್ಲಿ ಮೊದಲ ನಾಲ್ಕು ಪುಸ್ತಕಗಳು ದ್ವಿತೀಯ ಮುದ್ರಣವನ್ನೂ ಕಂಡಿವೆ.

ಮತ್ತೂ ಮುಂದಿನವುಗಳಲ್ಲಿ ಉಪಾಕರ್ಮ, ಗೃಹಪ್ರವೇಶ, ಪ್ರಾಯಶ್ಚಿತ್ತ ಪ್ರಕರಣ, ಅಂತ್ಯೇಷ್ಟಿ, ಶ್ರಾದ್ಧ, ಷೋಡಶ ಸಂಸ್ಕಾರಗಳಲ್ಲಿ ಬರುವ ಅಷ್ಟೂ

ಮಂತ್ರಗಳಿಗೆ ಕನ್ನಡದಲ್ಲಿ ಭಾಷ್ಯ ಮತ್ತು ಅರ್ಥ ಇಷ್ಟೂ ಪುಸ್ತಕಗಳು ಬರಲಿಕ್ಕಿವೆ. ಇದಲ್ಲದೆ ಪ್ರಪ್ರಥಮ ಬಾರಿಗೆ ಸುವ್ಯವಸ್ಥಿತ (ಡಿಜಿಟಲ್ ಸ್ಟುಡಿಯೋ ರೆಕಾರ್ಡಿಂಗ್) ಡಿ.ವಿ.ಡಿ. ಧ್ವನಿಸುರುಳಿಗಳಲ್ಲಿ ಕೃಷ್ಣಯಜುರ್ವೇದ ತೈತ್ತಿರೀಯ ಶಾಖೆಯ ಸಂಪೂರ್ಣ ಬ್ರಾಹ್ಮಣ – ಆರಣ್ಯಕ – ೭ ಕಾಂಡಗಳಿಂದ ೧೦೨ ಸಂಹಿತಾ ಅನುವಾಕ – ಅವುಗಳಿಗೆ ಕ್ರಮಪಾಠ – ೧೦೦ ಕ್ಕೂ ಹೆಚ್ಚು ಮಂತ್ರಗಳಿಗೆ ಘನಪಾಠ - ಶರ್ಮರ ಮಡದಿಯಾದ ಚಿ.ಸೌ. ಭಾರತಿಯವರ ಭಾವ ಪ್ರಧಾನವಾದ ಉತ್ತಮ ಶಾರೀರದಿಂದ ೭೦ ಕ್ಕೂ ಹೆಚ್ಚು ಭಜನೆ, ದೇವರನಾಮಗಳನ್ನು – 'ವೇದನಾದ ಸಂಗಮ' ಎಂಬ ಹೆಸರಿನಿಂದ ಶರ್ಮಾ ದಂಪತಿಗಳು ಹೊರತಂದು, ವೇದ ನಾದಗಳನ್ನು ಹೇಳುವವರಿಗೆ ಮಾತ್ರವಲ್ಲದೆ ಕೇಳುವವರಿಗೂ 'ಶ್ರುತಂ ಹರತಿ ಪಾಪಾನಿ ತಥಾ ಆರೋಗ್ಯಂ ಪ್ರಯಚ್ಛತಿ' ಎಂಬ ಸ್ಮೃತಿ ವಾಕ್ಯದಂತೆ ಆರೋಗ್ಯ ಹಾಗೂ ಯಶಸ್ಸನ್ನು ಪಡೆಯುವ ಉತ್ತಮ ಅವಕಾಶವನ್ನು ಒದಗಿಸಿದ್ದಾರೆ.

ಇದಲ್ಲದೆ ಶೃಂಗೇರಿ ಶಾರದಾಪೀಠ ಸಂಸ್ಥಾನದವರು ಕನ್ನಡ, ತೆಲಗು, ತಮಿಳು, ಇಂಗ್ಲೀಷ್ ಭಾಷೆಗಳಲ್ಲಿ ಬಿಡುಗಡೆ ಮಾಡಿರುವ, ಶಂಕರಾಚಾರ್ಯರ ಜೀವನಚರಿತ್ರೆಯನ್ನು ನಿಖರವಾಗಿ ತಿಳಿಸುವ 'ಸಾಕ್ಷ್ಯಚಿತ್ರ'ದಲ್ಲಿ ಶಂಕರಾಚಾರ್ಯರ ಪಾತ್ರವನ್ನು ಶರ್ಮರು ಅಚ್ಚುಕಟ್ಟಾಗಿ ನಿರ್ವಹಿಸಿರುತ್ತಾರೆ. ಹಾಗೂ ಶ್ರೀಮಠದವರು ಸಮಾಜದ ಸಮಸ್ತ ಜನರಿಗೂ ಕಲಿಕೆಗೆ ಅನುಕೂಲವಾಗುವಂತೆ ಹೊರತಂದಿರುವ 'ಶ್ರೀ ಲಲಿತಾಸಹಸ್ರನಾಮ', 'ಶ್ರೀ ವಿಷ್ಣು ಸಹಸ್ರನಾಮ' ಧ್ವನಿಸುರುಳಿಗಳಲ್ಲೂ ಮತ್ತು ನಿತ್ಯ ಪೂಜೆಗಳಿಗೆ ಅಗತ್ಯವಾಗಿ ಬೇಕಾದ ಮಂತ್ರ ಭಾಗಗಳಾದ ರುದ್ರ, ಚಮಕ, ಪುರುಷಸೂಕ್ತ, ಶ್ರೀಸೂಕ್ತ, ನಾರಾಯಣಸೂಕ್ತ, ದುರ್ಗಾಸೂಕ್ತಗಳಿರುವ ಧ್ವನಿಸುರುಳಿಗಳಲ್ಲೂ ಶರ್ಮರು ತಮ್ಮ ಸ್ಪಷ್ಟ ಹಾಗೂ ಸುಶ್ರಾವ್ಯ ಕಂಠಸಿರಿಯನ್ನು ಒದಗಿಸಿರುತ್ತಾರೆ.

ಅಲ್ಲದೆ ಬೆಂಗಳೂರಿನ ಪ್ರತಿಷ್ಠಿತ ಶ್ರೀ ಸೀತಾರಾಮಾಂಜನೇಯ ವೇದಪಾಠಶಾಲೆಯವರು, ಶೃಂಗೇರಿ ಜಗದ್ಗುರು ಮಹಾಸ್ವಾಮಿಗಳವರ ಆದೇಶ ಹಾಗೂ ಸೂಚನೆಯಂತೆ ಕೊಡಲ್ಪಡುವ ಗೌರವ ಸನ್ಮಾನಕ್ಕೆ ೨೦೦೪ರಲ್ಲಿ ಶ್ರೀಯುತ ಶರ್ಮರು **'ವೇದಭೂಷಣ'** ಎಂಬ ಬಿರುದಿನೊಂದಿಗೆ ಭಾಜನಾಗಿರುತ್ತಾರೆ ಹಾಗೂ ೨೦೧೨ರಲ್ಲಿ ಶಿವಮೊಗ್ಗ ನಗರದ ವೈದಿಕ ಪರಿಷತ್ ವತಿಯಿಂದಲೂ ಮತ್ತು ದೆಹಲಿಯ ಭಾರತೀಯ ಜ್ಯೋತಿರ್ವಿಜ್ಞಾನ ಸಂಸ್ಥೆಯಿಂದಲೂ ಸನ್ಮಾನಕ್ಕೆ ಭಾಜನರಾಗಿರುತ್ತಾರೆ

ಈ ಎಲ್ಲಾ ಸಾಹಸ ಕೆಲಸಗಳಿಗೆ ಪ್ರೇರಕ ಶಕ್ತಿ ಯಾವುದೋ ನಾನರಿಯೇ? ಬಹುಶ: ಈ ಪುಸ್ತಕ ಕಾರ್ಯಗಳಲ್ಲಿ ಕಂಡುಬರುವ ಗುರು ನಿಷ್ಠೆ-ಭಕ್ತಿಗಳೇ ಆಂತರ್ಯದ ಶಕ್ತಿಯಾಗಿರಬೇಕು. ಇವನ್ನೆಲ್ಲಾ ಮಾಡುತ್ತಿರುವುದು ಸಾಹಸೀ, ತರುಣ, ಜಾಣ ವೇ.ಬ್ರ.ಶ್ರೀ. ಎ.ಸಿ. ಶಕ್ತಿಧರ ಶರ್ಮ. ಇವರ ಶ್ರಮಕ್ಕೆ ಬೆಲೆ ಕಟ್ಟಲಾರೆ. ಈ ಕಾರ್ಯಕ್ಕೆ ಶ್ರೀಮಾನ್ ಚಂದ್ರಶೇಖರಶರ್ಮಾರವರು ಅಗ್ರಹಾರ (ಶ್ರೀಯುತ ಶರ್ಮರ ತಂದೆಯವರು), ಶ್ರೀಮಾನ್ ವೇಂಕಟೇಶ ಅವಧಾನಿಗಳು ರಾಮನಾಥಪುರ ಇವರುಗಳ ಸಲಹೆ ಪಡೆದಿದ್ದಾರೆ. ಅಲ್ಲದೇ ಮತ್ತೂರಿನ ತರುಣ ಅಧ್ವರ್ಯು ಶ್ರೀಮಾನ್ ಶಿವಕುಮಾರ ಅವಧಾನಿ, ತರುಣ ವಿದ್ವಾನ್ ಶ್ರೀಮಾನ್ ಕಿರಣ ಅವಧಾನಿ ಇವರುಗಳ ಪ್ರೀತಿ, ವಾತ್ಸಲ್ಯ ಯುಕ್ತ ಅಮೂಲ್ಯ ಮಾರ್ಗದರ್ಶನ ಪಡೆದಿದ್ದಾರೆ.

ಪುರೋಹಿತರ ಅಭಾವದಲ್ಲಿ, ಮಂತ್ರಾಧ್ಯಯನ ಆದವರೆಲ್ಲಾ ಈ ಪುಸ್ತಕಗಳ ಸಹಾಯದಿಂದ, ಒದಗಿಬರುವ ಸಂಸ್ಕಾರ ಮಂಗಳ ಕಾರ್ಯಗಳನ್ನು (ಶಾಸ್ತ್ರಂ ಪ್ರಮಾಣಂ ತೇ ಕಾರ್ಯಾಕಾರ್ಯ ವ್ಯವಸ್ಥಿತೌ) ಎಂಬಂತೆ ಶಾಸ್ತ್ರೀಯ ತಿಳುವಳಿಕೆಯನ್ನು ಪಡೆದು ಯಥಾ ವಿಧಿಯಂತೆ ನಡೆಸಬಹುದಾಗಿದೆ . ಪ್ರತಿಯೊಬ್ಬರ ಮನೆಯಲ್ಲೂ ಈ ಸಂಸ್ಕಾರ ತರಂಗಿಣೀ ಪುಸ್ತಕಗಳಿದ್ದರೆ ಪ್ರತಿ ಮನೆಯಲ್ಲೂ ಒಬ್ಬ ಪುರೋಹಿತರು ಇದ್ದಂತೆ, ಏಕೆಂದರೆ ಕರ್ಮಾಚರಣೆಯ ವಿಚಾರದಲ್ಲಿ, ಪ್ರತಿಯೊಬ್ಬರೂ ಶಾಸ್ತ್ರೀಯ ತಿಳುವಳಿಕೆಯನ್ನು ಹೊಂದುವುದು ಅತ್ಯಂತ ಅವಶ್ಯಕವೂ, ಅಧಿಕಾರಯುತವೂ ಆಗಿದೆ. ಈ ದೃಷ್ಟಿಯಲ್ಲಿ ಈ ಪುಸ್ತಕಗಳು ತ್ರಿಮತಸ್ಥ ಬ್ರಾಹ್ಮಣರಿಗೂ ಅವಶ್ಯ ಸಂಗ್ರಾಹ್ಯವೇ ಆಗಿದೆ.

ಶ್ರೀ ಶಕ್ತಿಧರ ಶರ್ಮರು ಶೃಂಗೇರಿ ಗುರುಪೀಠದಲ್ಲಿ ಇದ್ದುಕೊಂಡು ಅಧ್ಯಯನ ಮಾಡಿದವರು, ಇವರಿಂದ ಇನ್ನೂ ಅನೇಕ ಜನೋಪಕಾರಕ ಪುಸ್ತಕಗಳು ಬರಲೀ ಎಂದು ಆಶೀರ್ವದಿಸುತ್ತೇನೆ.

–ಇತಿ ಶಮ್–

ತಾ–೫–೧–೨೦೧೩

ಸುಪ್ರೀತ ,

ಕ. ನಾ. ಮಾರ್ಕಂಡೇಯ ಅವಧಾನಿ.

ಮತ್ತೂರು ಸಂಸ್ಕೃತ ಗ್ರಾಮ, ಶಿವಮೊಗ್ಗ .

ಪ್ರಸ್ತಾವನೆ

ವಿದ್ವಾನ್, ವೇದಬ್ರಹ್ಮಶ್ರೀ, ಡಾ – ಸುಬ್ರಾಯ ವಿ ಭಟ್
ಪ್ರಾಧ್ಯಾಪಕರು, ಮೀಮಾಂಸಾಶಾಸ್ತ್ರ ವಿಭಾಗ,
ರಾಜೀವಗಾಂಧಿ ಕೇಂದ್ರೀಯ ಸಂಸ್ಕೃತ ವಿದ್ಯಾಪೀಠಂ, ಶೃಂಗೇರಿ.

ಭಾರತೀಯ ಸನಾತನ ವೈದಿಕ ಸಂಸ್ಕೃತಿಯ ಜೀವಾಳವೇ ವೇದಗಳು. ಧರ್ಮ, ಅರ್ಥ, ಕಾಮ, ಮೋಕ್ಷಗಳೆಂಬ ೪ ಪುರುಷಾರ್ಥಗಳಲ್ಲಿ ಮೊದಲಿನ ೩ ಸಾಧನಗಳು ಹಾಗೂ ಕೊನೆಯದಾದ ನಿತ್ಯ ನಿರತಿಶಯ ಸುಖ ಸ್ವರೂಪವಾದ ಮೋಕ್ಷವು ಸಾಧಿಸಲ್ಪಡಬೇಕಾದದ್ದು, ಅದನ್ನು ಸಾಧಿಸಿದಾಗಲೇ ಮನುಷ್ಯ ಜೀವನ ಸಾರ್ಥಕವಾಗುವುದು. ಅದಕ್ಕೆ ಧರ್ಮವೇ ಮೂಲ ಎಂಬುದಾಗಿ ಬೋಧಿಸಿ, ಅವುಗಳ ಸ್ವರೂಪ ಹಾಗೂ ಪ್ರಾಪ್ಯುಪಾಯವನ್ನು ತಿಳಿಸಿ ಮನುಷ್ಯನನ್ನು ಅಧ್ಯಾತ್ಮದೆಡೆಗೆ ಒಯ್ಯುವ ಏಕಮಾತ್ರ ಸಾಧನವಾಗಿರುವುದರಿಂದ ವೇದಗಳು ಪರಮ ಪೂಜನೀಯವಾದವುಗಳು.

ವೇದವಿಹಿತವಾದ ಯಾಗಾದಿ ಕರ್ಮಗಳೇ ಧರ್ಮ. ಧರ್ಮವೇ ಶ್ರೇಯಸ್ಸಾಧನ. ವೇದದಲ್ಲಿ ತಿಳಿಸಿದ ಈ ಯಜ್ಞಯಾಗಾದಿಗಳನ್ನು ಅರ್ಥಜ್ಞಾನ ಸಹಿತವಾಗಿ ಶ್ರದ್ಧೆಯಿಂದ ಕ್ರಮವಾಗಿ ಅನುಷ್ಠಾನ ಮಾಡಿದಾಗ ವಿಹಿತವಾದ ಫಲವನ್ನು ದೊರಕಿಸಿಕೊಡುತ್ತದೆ ಎಂಬುದು ಆರ್ಷ ಸಿದ್ಧಾಂತ.

ವೇದದ ತಾತ್ಪರ್ಯಾರ್ಥವನ್ನೇ ನಿರ್ಣಯಿಸಲು ಹೊರಟ ಪೂರ್ವಮೀಮಾಂಸಾಶಾಸ್ತ್ರದಲ್ಲಿ ಸೂತ್ರಕಾರರಾದ ಜೈಮಿನೀ ಮಹರ್ಷಿಗಳೂ ಸಹ 'ಚೋದನಾ ಲಕ್ಷಣೋऽರ್ಥೋ ಧರ್ಮಃ' ಎಂಬುದಾಗಿ ವೇದದಲ್ಲಿ ತಿಳಿಸಿದ ಶ್ರೇಯಸ್ಸಾಧನೀಭೂತವಾದ ಯಾಗಾದಿಗಳೇ ಧರ್ಮವೆಂದು ತಿಳಿಸಿ, ವೇದದ ತಾತ್ಪರ್ಯಾರ್ಥವನ್ನೇ ಬಹು ವಿಸ್ತಾರವಾಗಿ ವಿಮರ್ಶಿಸಿದ್ದಾರೆ. ಮೀಮಾಂಸಾ

ಭಾಷ್ಯಕಾರರಾದ ಶಬರ ಸ್ವಾಮಿಗಳೂ ಸಹ 'ಸ ಹಿ ನಿಶ್ರೇಯಸೇನ ಪುರುಷಂ ಸಂಯುನಕ್ತೀತಿ ಪ್ರತಿಜಾನೀಮಹೇ' ಎಂಬುದಾಗಿ ಧರ್ಮವೇ ಐಹಿಕ ಮತ್ತು ಆಮುಷ್ಮಿಕ ಸುಖ ಸಾಧನವೆಂದು ಸ್ಪಷ್ಟಪಡಿಸಿದ್ದಾರೆ.

ವೇದದಲ್ಲಿ ವಿಹಿತವಾದ ಧರ್ಮವೆಂಬುದಾಗಿ ಪ್ರಚುರಪಡಿಸಿದ ಯಾಗಾದಿ ರೂಪವಾದ ಕರ್ಮಗಳನ್ನು ಪ್ರಧಾನವಾಗಿ ನಿತ್ಯ, ನೈಮಿತ್ತಿಕ, ಮತ್ತು ಕಾಮ್ಯವೆಂಬುದಾಗಿ ೩ ವಿಧವಾಗಿ ವಿಭಾಗಿಸಿದ್ದಾರೆ. ರಾಜಾಜ್ಞೆಯಂತೆ ನಿಯಮೇನ ಮಾಡಲೇಬೇಕಾದದ್ದಾಗಿ ವಿಹಿತವಾದ ಕರ್ಮಗಳು – ನಿತ್ಯಕರ್ಮಗಳು. ಉದಾ– ಸಂಧ್ಯಾವಂದನೆ, ಔಪಾಸನೆ, ಅಗ್ನಿಹೋತ್ರಾದಿಗಳು. ಪಾಪಕ್ಷಯವೇ ಈ ಕರ್ಮಗಳ ಫಲ.

ನಿಮಿತ್ತ ಒದಗಿದಾಗ ನಿಯಮೇನ ಮಾಡಲೇಬೇಕಾದ ಕರ್ಮಗಳು – ನೈಮಿತ್ತಿಕ ಕರ್ಮಗಳು. ಉದಾ– ಗ್ರಹಣ ಪ್ರಯುಕ್ತವಾದ ಸ್ನಾನಾದಿಗಳು, ಮಗು ಹುಟ್ಟಿದಾಗ ಮಾಡಬೇಕಾದ ವೈಶ್ವಾನರೇಷ್ಟಿ ಮೊದಲಾದ ಶ್ರೌತಸ್ಮಾರ್ತ ಕರ್ಮಗಳು, ಈ ಕರ್ಮಗಳಿಗೂ ಪಾಪಕ್ಷಯವೇ ಫಲ.

ಪಶುಪುತ್ರಾದಿ ಐಶ್ವರ್ಯ ಕಾಮನೆಯಿಂದ ಅನುಷ್ಠಾನ ಮಾಡುವ ಕರ್ಮಗಳು – ಕಾಮ್ಯಕರ್ಮಗಳು. ಉದಾ– ಸೋಮಯಾಗ, ಕಾರೀರೀಷ್ಟಿ, ಪೌಷ್ಟಿಕಾದಿ ಸ್ಮೃತ್ಯುಕ್ತಕರ್ಮಗಳು, ಇವುಗಳಿಗೆ ಆಯಾವಿಧಿ ವಾಕ್ಯಗಳಲ್ಲಿ ಅಥವಾ ಪ್ರಕರಣಗಳಲ್ಲಿ ತಿಳಿಸಿದ ಸ್ವರ್ಗಾದಿಗಳೇ ಫಲ.

ಈ ಎಲ್ಲವನ್ನೂ ಅರ್ಥಜ್ಞಾನ ಪುರಸ್ಸರ, ವಿಧಿವತ್ತಾಗಿ ಆಚರಿಸಿದಾಗಲೇ ವಿಹಿತವಾದ ಫಲ ದೊರಕುವುದು. ಆಗಲೇ ಅಧ್ಯಯನ ಮಾಡಿದ ವೇದವು ಸಫಲವಾಗುವುದು. ಅಂದರೆ ಮೊದಲು ವೇದಾಧ್ಯಯನ, ನಂತರ ಅಧ್ಯಯನ ಮಾಡಿದ ವೇದದ ಅರ್ಥಜ್ಞಾನ, ಅರ್ಥಜ್ಞಾನ ತಿಳಿದು ಕರ್ಮಾನುಷ್ಠಾನ, ಅದರಿಂದ ಪಾಪಕ್ಷಯ, ಸ್ವರ್ಗಾದಿ ಸಿದ್ಧಿ. ಹಾಗಾಗಿಯೇ ವೇದಗಳ ಅರ್ಥಜ್ಞಾನ, ಉಚ್ಚಾರಣೆ,

ವೇದವಿಹಿತ ಕರ್ಮಾನುಷ್ಠಾನದ ಸ್ವರೂಪ ಪರಿಚಯಾದಿಗಳಿಗೆ ಅನಿವಾರ್ಯವಾದ ವೇದದ ೬ ಅಂಗಗಳನ್ನು ಅಧ್ಯಯನ ಮಾಡಬೇಕೆಂದು, 'ನಿಷ್ಕಾರಣೋ ಷಡಂಗೋ ವೇದೋ ಅಧ್ಯೇಯೋಜ್ಞೋಯಶ್ಚ' ಇತ್ಯಾದಿ ಶ್ರುತಿಗಳು ತಿಳಿಸುತ್ತಿವೆ. ಶಿಕ್ಷಾ, ವ್ಯಾಕರಣ, ಛಂದಸ್ಸು, ನಿರುಕ್ತ, ಜ್ಯೌತಿಷ, ಕಲ್ಪ ಇವು ವೇದದ ೬ ಅಂಗಗಳು.

ಯಜ್ಞಗಳ ಅನುಷ್ಠಾನ ವಿಧಾನವನ್ನು(ಸ್ವರೂಪ) ತಿಳಿಸುವ ಗ್ರಂಥವೇ ಕಲ್ಪ. ಯಾಗಗಳ ಪ್ರಯೋಗ(ಅನುಷ್ಠಾನ)ವನ್ನೇ ತಿಳಿಸುವುದರಿಂದ ಈ ಗ್ರಂಥಗಳಿಗೂ ಪ್ರಯೋಗ ಗ್ರಂಥಗಳು ಎಂದು ಹೆಸರು ಬಂದಿದೆ. ಸಂಜ್ಞಾ, ಪರಿಭಾಷಾದಿಗಳಿಂದ ಅವುಗಳ(ಯಾಗಗಳ) ಲಕ್ಷಣವನ್ನು ತಿಳಿಸುವ ಸೂತ್ರಗಳಿಗೆ ಕಲ್ಪಸೂತ್ರಗಳು ಎಂದು ಹೆಸರು.

ಈ ಕಲ್ಪಗಳು ಬೇರೆ ಬೇರೆ ವೇದ ಶಾಖೆಗಳಲ್ಲಿ ಬೇರೆ ಬೇರೆಯಾಗಿವೆ, ಹಾಗೆಯೇ ಒಂದೇ ಶಾಖೆಯಲ್ಲೂ ಅನೇಕ ಸೂತ್ರಗಳು ಕಾಣಸಿಗುತ್ತವೆ. ಋಕ್ ಶಾಖಾನುಯಾಯಿಗಳಿಗೆ – ಆಶ್ವಲಾಯನ ಕಲ್ಪಸೂತ್ರ, ಸಾಮವೇದಿಗಳಿಗೆ – ದ್ರಾಹ್ಯಾಯಣ ಸೂತ್ರ, ಯಜುರ್ವೇದದಲ್ಲೂ ಶುಕ್ಲ ಯಜುಶ್ಶಾಖೆಯಲ್ಲಿ ಭಿನ್ನ ಸೂತ್ರಗಳು ಹಾಗೂ ತೈತ್ತಿರೀಯ ಯಜುಶ್ಶಾಖೆಯಲ್ಲಿ – ಬೋಧಾಯನೀಯ, ಆಪಸ್ತಂಬೀಯ, ಹಿರಣ್ಯಕೇಶೀಯ ಕಲ್ಪಸೂತ್ರಗಳು ಈಗ ಪ್ರಚಲಿತವಿರುವ ಮುಖ್ಯ ಕಲ್ಪಸೂತ್ರಗಳು. ಈ ಕಲ್ಪಸೂತ್ರಗಳ ಪರಂಪರೆಯನ್ನೇ ಗೋತ್ರಪ್ರವರವನ್ನು ಉಚ್ಚರಿಸುವಾಗ ಹೇಳುವ ಸೂತ್ರಗಳು ತಿಳಿಸುತ್ತವೆ.

ಶ್ರೌತಸೂತ್ರ, ಗೃಹ್ಯಸೂತ್ರ, ಧರ್ಮಸೂತ್ರ ಮತ್ತು ಯಜುರ್ವೇದ ಕಲ್ಪದಲ್ಲಿ ಶುಲ್ಬಸೂತ್ರ – ಇವುಗಳ ಸಮುದಾಯವನ್ನೇ ಕಲ್ಪಸೂತ್ರ ಎಂದು ಕರೆದಿದ್ದಾರೆ. ಶ್ರೌತಸೂತ್ರಗಳು, ಸಾಕ್ಷಾತ್ ಶ್ರೌತಕರ್ಮಗಳ ಅನುಷ್ಠಾನ ಪ್ರಕಾರವನ್ನು ಮತ್ತು ಸಂಬಂಧಿಸಿದ ಮಂತ್ರವಿನಿಯೋಗಾದಿಗಳನ್ನು ತಿಳಿಸುತ್ತವೆ. ಗೃಹ್ಯಸೂತ್ರಗಳು, ಗೃಹಸ್ಥರು ಅನುಷ್ಠಾನಮಾಡಬೇಕಾದ ಯಾಗಗಳನ್ನು, ಔಪಾಸನಾಗ್ನಿಯಲ್ಲಿ ಮಾಡುವ

ಕರ್ಮಗಳನ್ನು, ಮತ್ತು ಉಪನಯನವೇ ಮೊದಲಾದ ಸಂಸ್ಕಾರಗಳ ಅನುಷ್ಠಾನ ಕ್ರಮವನ್ನು ತಿಳಿಸುತ್ತವೆ. ಧರ್ಮಸೂತ್ರಗಳು, ಯಜಮಾನ–ಋತ್ವಿಜರುಗಳಿಗೆ ಸಂಬಂಧಿಸಿದ ನಿಯಮಗಳನ್ನು, ಬ್ರಾಹ್ಮಣ–ಕ್ಷತ್ರಿಯಾದಿ ವರ್ಣಗಳಿಗೆ ಸಂಬಂಧಿಸಿದ ಧರ್ಮಪಾಲನೆಯ ಬಗ್ಗೆ, ಬ್ರಹ್ಮಚರ್ಯಾದಿ ಆಶ್ರಮ ಧರ್ಮಗಳು ಮತ್ತು ಸಮಸ್ತ ಮನುಕುಲಕ್ಕೆ ಸಂಬಂಧಿಸಿದ ಎಲ್ಲಾ ಸಾಮಾನ್ಯಧರ್ಮ ವಿಚಾರಗಳನ್ನೂ ತಿಳಿಸುತ್ತವೆ. ಶುಲ್ಬಸೂತ್ರಗಳು, ಯಜ್ಞಾನುಷ್ಠಾನಕ್ಕೆ ಉಪಯುಕ್ತವಾದ ಯಜ್ಞಶಾಲಾ ನಿರ್ಮಾಣ ಸಂಬಂಧಿ ವಿಚಾರಗಳನ್ನು ತಿಳಿಸುತ್ತವೆ. ಹೀಗೆ ಈ ಎಲ್ಲಾ ವಿಭಾಗಗಳೂ ಸಾಕ್ಷಾತ್ತಾಗಿ, ಅಥವಾ ಪರಂಪರೆಯಿಂದ ಯಜ್ಞಗಳ ಅನುಷ್ಠಾನದ ಸಂಬಂಧವನ್ನು ಹೊಂದಿವೆ, ಹಾಗಾಗಿಯೇ ಇವುಗಳಿಗೆ ಏಕವಾಕ್ಯತೆ ಇದೆ.

ಆಪಸ್ತಂಬ ಕಲ್ಪಸೂತ್ರದಲ್ಲಿ ಹೇಳುವುದಿದ್ದರೆ – ಮೊದಲನೇ ಪ್ರಶ್ನೇ ಸರ್ವಕರ್ಮಸಾಧಾರಣ ಪರಿಭಾಷಾ ಸೂತ್ರಗಳು. ಎರಡರಿಂದ ಇಪ್ಪತ್ತನಾಲ್ಕನೇ ಪ್ರಶ್ನೆಗಳವರೆಗೆ(೨೩ ಪ್ರಶ್ನೆಗಳು) ಶ್ರೌತಸೂತ್ರಗಳು. ಮುಂದಿನ ೩ ಪ್ರಶ್ನೆಗಳು(೨೫,೨೬,೨೭) ಗೃಹ್ಯಸೂತ್ರಗಳು. ಈ ಮೂರರಲ್ಲಿ ಕೊನೆಯದು(೨೭ನೇ ಪ್ರಶ್ನೆ) ಪಿತೃಮೇಧ ಸೂತ್ರಗಳು. ೨೮,೨೯ ನೇ ಪ್ರಶ್ನೆಗಳು ಧರ್ಮಸೂತ್ರಗಳು. ೩೦ನೇ ಪ್ರಶ್ನೆ ಶುಲ್ಬಸೂತ್ರಗಳು. ಹೀಗೆ ಒಟ್ಟಿಗೆ ೩೦ ಪ್ರಶ್ನಾತ್ಮಕವಾದದ್ದು ಆಪಸ್ತಂಬ ಕಲ್ಪಸೂತ್ರ.

ಅವುಗಳಲ್ಲಿ ಸ್ಮಾರ್ತಕರ್ಮಗಳೂ ಮತ್ತು ಏಕಾಗ್ನಿಸಾಧ್ಯವಾದ (ಔಪಾಸನಾಗ್ನಿಯಲ್ಲಿ ನಿರ್ವಹಿಸುವ), ಉಪನಯನಾದಿ ಸಂಸ್ಕಾರಗಳ ಪ್ರಯೋಗವನ್ನು, ಸಂಬಂಧಿಸಿದ ಸೂತ್ರ ಮತ್ತು ಕಪರ್ದಿಕಾರಿಕೆಗಳನ್ನು ಸಂಗ್ರಹಿಸಿ ಕನ್ನಡದಲ್ಲಿ ಭಾವಾನುವಾದವನ್ನು ತಿಳಿಸಿ, ಸಂಸ್ಕಾರ ತರಂಗಿಣೀ ಎಂಬ ಹೆಸರಿನಲ್ಲಿ ಗ್ರಂಥವನ್ನು ಪ್ರಕಟಿಸಿ ಹೊರತರುತ್ತಿದ್ದಾರೆ ನಮ್ಮ ವೇದಬ್ರಹ್ಮ ಶ್ರೀಯುತ ಶಕ್ತಿಧರ ಶರ್ಮರು. ಸ್ಮಾರ್ತಕರ್ಮಗಳಿಗೆಲ್ಲಾ ಮೂಲ ಆಧಾರ ಗೃಹ್ಯಸೂತ್ರಗಳು. ಕಪರ್ದಿಸ್ವಾಮಿಗಳು

ಕಾರಿಕಾರೂಪದಲ್ಲಿ ಪ್ರಯೋಗವನ್ನು ತಿಳಿಸಿದ್ದಾರೆ. ಇವುಗಳ ಆಧಾರದ ಮೇಲೆ ವಿಧಿವತ್ತಾಗಿ ಪ್ರಯೋಗವನ್ನೂ ತಿಳಿಸಿ ಅನುಷ್ಠಾನ ಮಾಡುವ ಕ್ರಮವನ್ನೂ ಈ ಗ್ರಂಥಗಳಲ್ಲಿ ತಿಳಿಸಿಕೊಟ್ಟಿದ್ದಾರೆ.

ಆಪಸ್ತಂಬ ಪ್ರಯೋಗ ಗ್ರಂಥವು ಬೇರೆ ಬೇರೆ ವಿದ್ವಾಂಸರಿಂದ ಅನೇಕ ಪ್ರಕಾಶನಗಳಲ್ಲಿ ಉಪಲಬ್ಧವಿದ್ದರೂ, ಆಯಾ ಪ್ರಕರಣಗಳಿಗೆ ಸಂಬಂಧಿಸಿದ ಕಾರಿಕೆ, ಮೂಲ ಗೃಹ್ಯಸೂತ್ರ ಸಹಿತವಾಗಿ ಪ್ರಕಟಿತವಾದ ಪ್ರಯೋಗಗ್ರಂಥ ಇಲ್ಲವೇಇಲ್ಲ ಎಂಬುವಷ್ಟು ಅತಿವಿರಳ. ಇದೇ ಈ ಗ್ರಂಥಮಾಲಿಕೆಯ ವಿಶೇಷ ಲಕ್ಷಣವಾಗಿದೆ. ಗೃಹ್ಯಸೂತ್ರಗಳ ಅಧ್ಯಯನ ಕ್ರಮವೂ ಈಗ ನಮ್ಮಲ್ಲಿಲ್ಲ, ಹೀಗಿರುವಾಗ ಶ್ರೀಯುತ ಶರ್ಮರು ಈ ವಿಶಿಷ್ಟವಾದ ಪ್ರಕಾಶನಕ್ಕೆ ವಹಿಸಿದ ಶ್ರಮವು ಅತ್ಯಮೂಲ್ಯ.

ಇದು ವೈದಿಕ ಸಮಾಜಕ್ಕೆ ತುಂಬಾ ಉಪಯುಕ್ತವಾದದ್ದು. ವೈದಿಕರಿಗೆ, ಪ್ರಯೋಗದ ಮೂಲಪ್ರಮಾಣವಾದ ಸೂತ್ರ, ಕಾರಿಕೆಗಳನ್ನು ತಿಳಿದುಕೊಳ್ಳಲು ಆಸಕ್ತರಾದ ಜಿಜ್ಞಾಸುಗಳಿಗೆ, ವಿದ್ಯಾರ್ಥಿಗಳಿಗೆ, ಸಮಸ್ತ ಆಸ್ತಿಕ ಬಂಧುಗಳಿಗೆ ಈ ಗ್ರಂಥಗಳು ತುಂಬಾ ಉಪಯುಕ್ತವಾಗಿವೆ. ಕರ್ಮಜ್ಞಾನವನ್ನು ಹೊಂದಿ, ಅನುಷ್ಠಾನವನ್ನು ಮಾಡಿದಾಗ ಮಾತ್ರ ಆ ವೈದಿಕ ಕರ್ಮ ವಿಶೇಷಫಲವನ್ನೇ ಕೊಡುವುದೆಂದು ಶಾಸ್ತ್ರಗಳೇ ತಿಳಿಸುತ್ತಿವೆ.

ಇವರಿಂದ ಇನ್ನೂ ಹೆಚ್ಚಿನ ಸನಾತನ ಪರಂಪರೆಯ ಸೇವೆ ನಡೆಯಲು, ಇವರಿಗೆ ಹಾಗೂ ಈ ವಿಷಯದಲ್ಲಿ ಅಮೂಲ್ಯ ಮಾರ್ಗದರ್ಶನ ನೀಡುತ್ತಿರುವ ಮಹನೀಯರಾದ ವಿದ್ವಾನ್, ಶ್ರೀಮಾನ್ ಶಿವಕುಮಾರ ಅವಧಾನಿಗಳಿಗೂ ಮತ್ತು ವಿದ್ವಾನ್, ಶ್ರೀಮಾನ್ ಕಿರಣ ಅವಧಾನಿಗಳಿಗೂ ಆಯುಷ್ಯ, ಆರೋಗ್ಯ ಮತ್ತು ಭಾಗ್ಯವನ್ನು ಅನುಗ್ರಹಿಸಲೆಂದು ವೇದಮಾತೆಯಾದ ಶಾರದಾಂಬೆ ಮತ್ತು ಜಗದ್ಗುರುಗಳ ಸನ್ನಿಧಿಯಲ್ಲಿ ಪ್ರಾರ್ಥಿಸುತ್ತೇನೆ.

ಚಿಂತನ .....

ಈ ಎಲ್ಲ ವಿಚಾರಗಳಿಗೂ ಆಧಾರ – ಕರ್ಮಭಾಗದ ಪಿತೃಗಳಾದ ಋಷಿಗಳೇ ಹೊರತು, ದೇಹಭಾವದ ಅಂದರೆ ಶರೀರವನ್ನು ಕೊಟ್ಟಂತಹ ಪಿತೃಗಳಲ್ಲ. ಏಕೆಂದರೆ ನಮಗಿಂತ ಮೊದಲು ಭೂಮಿಗೆ ಬಂದಿರುತ್ತಾರಾದ್ದರಿಂದ ಹಾಗೂ ನಮ್ಮ ದೇಹವು ಭೂಮಿಗೆ ಬರಲು ಅವಕಾಶ ಮಾಡಿರುತ್ತಾರಾದ್ದರಿಂದ ಅವರು ನಮಗೆ ಹಿರಿಯರು, ಪಿತೃಗಳು, ಆದರಣೀಯರಾಗಿರುತ್ತಾರೆಯೇ ವಿನ: ಅವರೆಂದಿಗೂ ಅತ್ಯಂತ ಸೂಕ್ಷ್ಮವಾದ, ಗೂಢವಾದ, ವಿಸ್ತಾರವಾದ ಜ್ಞಾನದ ರಾಶಿಯ ಕರ್ತೃವಾಗಲೂ, ಆಧಾರವಾಗಲೂ ಸಾಧ್ಯವಿಲ್ಲ, ಏಕೆಂದರೆ ಅವರುಗಳೂ ಸಹ ಅವರವರ ಜನ್ಮಾಂತರದ ಪಾಪಪುಣ್ಯಗಳ ಫಲಗಳನ್ನು ಅನುಭವಿಸಲು ಬಂದಿರುವವರೇ ಆಗಿರುತ್ತಾರೆ. ಹಾಗಾಗಿಯೇ ನಾವುಗಳು ನಮಸ್ಕಾರ ಮಾಡುವಾಗ ಹೇಳುವ ಪ್ರವರದಲ್ಲಿ, ಜನ್ಮಕ್ಕೆ ಕಾರಣರಾದ ತಂದೆ, ಅಜ್ಜ, ಮುತ್ತಜ್ಜರ ಹೆಸರುಗಳನ್ನು ಹೇಳುವುದಿಲ್ಲ!, ಬದಲಿಗೆ ಕರ್ಮಭಾಗದ ಪಿತೃಗಳಾದ, ನಮ್ಮ ಪರಂಪರೆಯ ಮಹರ್ಷಿಗಳ ಹೆಸರುಗಳನ್ನು(ನಾವು ಅವರ ಪರಂಪರೆಯವರು ಎಂದು) ಹೇಳುವುದು. ಹಾಗಾಗಿ ಇಂದು ನಾವುಗಳು ನೋಡುತ್ತಿರುವ, ಹಾಗೆಯೇ ಕೇಳುತ್ತಿರುವ ಅನೇಕ ರೀತಿಯ ಸಮುದಾಯಗಳ ಭಿನ್ನ ಭಿನ್ನ ನಡವಳಿಕೆಗಳನ್ನು 'ಇದೇ ನಮ್ಮ ಸಂಪ್ರದಾಯ – ಆಚಾರ' ಎಂಬ ಬ್ರಹ್ಮಾಸ್ತ್ರದಂತಹ ! ವಾಕ್ಯಗಳಿಂದ ಅವರುಗಳು ಮಾಡಿಕೊಳ್ಳುವ ಯಾವ ಸಮರ್ಥನೆಗೂ ಬೆಲೆಯಿಲ್ಲ.

ಏಕೆಂದರೆ, ಕರ್ಮಭಾಗದ ಪಿತೃಗಳಾದ, ಸಹಸ್ರ ಸಹಸ್ರ ವರ್ಷಗಳು ಭಗವಂತನನ್ನು ಧ್ಯಾನಿಸಿ, ಮಂತ್ರದ್ರಷ್ಟಾರರಾದ ಋಷಿಪುಂಗವರು ಶಾಸ್ತ್ರಗ್ರಂಥಗಳನ್ನು ಭಗವಂತನ ಸೂಚನೆಯಂತೆ ರಚಿಸಿ, ಸಮಸ್ತ ಲೋಕಕ್ಕೆ ಏನನ್ನು ಆದೇಶಿಸಿ ಉಪದೇಶಿಸಿದ್ದಾರೋ ಆ ನಡವಳಿಕೆಗಳನ್ನು, ಆ ನಿಯಮಗಳನ್ನು ಮನುಷ್ಯರು ತಲತಲಾಂತರ ವರ್ಷಗಳಿಂದ ಅವಿಚ್ಛಿನ್ನವಾಗಿ ಚಾಚೂತಪ್ಪದೆ ಅನುಸರಿಸುವಂತಹ ಪ್ರಕ್ರಿಯೆಗೇ – ಅಂತಹ ವ್ಯವಸ್ಥಿತವಾದ ನಡವಳಿಕೆಗೇ **ಸಂಪ್ರದಾಯ – ಆಚಾರ** ಎಂದು ಹೆಸರೇ ಹೊರತು, ನಾವು ನೀವು ಮಾಡುವಂತಹ, ಆಚರಿಸುವಂತಹ,

ಶಾಸ್ತ್ರಗಳಲ್ಲಿಲ್ಲದಿರುವ, ಶಾಸ್ತ್ರಗಳಿಗೆ ಪೂರಕವಲ್ಲದ ಹಾಗೂ ಶಾಸ್ತ್ರವಿರೋಧವಾದ ಯಾವ ಕ್ರಿಯೆಗಳಿಗೂ ಸಂಪ್ರದಾಯ ಎಂದು ಹೇಳಲು ಬರುವುದಿಲ್ಲ!!. ಭಗವಂತನು ತನ್ನ ಮೂಲಕ ರಚಿತವಾಗಿರುವ ಶಾಸ್ತ್ರಗಳನ್ನು ಕೇವಲ ಅನುಸರಿಸಲು ಮಾತ್ರ ಮನುಷ್ಯರಿಗೆ ಅವಕಾಶವನ್ನು ಕೊಟ್ಟಿದ್ದಾನೆಯೇ ಹೊರತು ಅದನ್ನು ಮೀರಲು ಅವಕಾಶ ಕೊಟ್ಟಿಲ್ಲ. ಹಾಗಾಗಿಯೇ ಗೀತೆಯಲ್ಲಿ ಕೃಷ್ಣನು – ತಸ್ಮಾತ್ ಶಾಸ್ತ್ರಂ ಪ್ರಮಾಣಂತೇ ಕಾರ್ಯಾಕಾರ್ಯ ವ್ಯವಸ್ಥಿತೌ । ಜ್ಞಾತ್ವಾ ಶಾಸ್ತ್ರ ವಿಧಾನೋಕ್ತಂ ಕರ್ಮಕರ್ತುಮಿಹಾರ್ಹಸಿ ॥ ಎಂದು ಹೇಳಿರುವುದು. ಹಾಗೆಯೇ,

ವೇದೋಕ್ತ: ಪ್ರಥಮೋ ಧರ್ಮೋ ಧರ್ಮಶಾಸ್ತ್ರೇಷು ಚಾಪರ: । ಶಿಷ್ಟಾಚಾರ ಸ್ಮೃತೀಯಸ್ತು ತ್ರಿವಿಧಂ ಧರ್ಮಲಕ್ಷಣಂ ॥

ಅಂದರೆ – ವೇದಗಳಲ್ಲಿ ಹೇಳಿದ ಧರ್ಮವೇ ಮುಖ್ಯ, ಅದಕ್ಕೇ ಮೊದಲ ಪ್ರಾಶಸ್ತ್ಯ । ಧರ್ಮಶಾಸ್ತ್ರಗಳಲ್ಲಿ ಹೇಳಿರುವುದಕ್ಕೆ ೨ನೇ ಆದ್ಯತೆ । ಶಿಷ್ಟಾಚಾರಕ್ಕೆ ೩ನೇ ಆದ್ಯತೆ, ಅದೂ ಶ್ರುತಿ, ಸ್ಮೃತಿ, ಪುರಾಣಾದಿಶಾಸ್ತ್ರಗಳು ಒಪ್ಪುವಂತಹ(ವಿರೋಧವಲ್ಲದ) ಶಿಷ್ಟಾಚಾರಕ್ಕೆ ೩ನೇ ಆದ್ಯತೆ ॥ ಮತ್ತೂ, ವೇದೋನಿತ್ಯಮಧೀಯತಾಂ ತದುದಿತಃ ಕರ್ಮಸ್ವಾನುಷ್ಠೀಯತಾಮ್ ಎಂದು ಶಂಕರಾಚಾರ್ಯರು ಆದೇಶಿಸಿದ್ದಾರೆ. ಇದರ ಅರ್ಥ ವೇದವನ್ನು ಮೊದಲು ಅಧ್ಯಯನ ಮಾಡಿ ಅರ್ಥಜ್ಞಾನವನ್ನು ತಿಳಿಯಿರಿ ಹಾಗೂ ಅದರಲ್ಲಿ ಹೇಳಿರುವಂತೆಯೇ ಕರ್ಮಗಳನ್ನು (ಕೆಲಸ) ಆಚರಿಸಿರಿ ॥ ಹಾಗೆಯೇ

ಯಸ್ಯ ನಾಸ್ತಿ ಸ್ವಯಂ ಪ್ರಜ್ಞಾ ಶಾಸ್ತ್ರಂ ತಸ್ಯ ಕರೋತಿ ಕಿಮ್ । ಲೋಚನಾಭ್ಯಾಂ ವಿಹೀನಸ್ಯ ದರ್ಪಣ: ಕಿಂ ಕರಿಷ್ಯತಿ ॥

ಅಂದರೆ, ಯಾವಾತನಿಗೆ ಸ್ವಯಂ ಪ್ರಜ್ಞೆ ಇರುವುದಿಲ್ಲವೋ, ಅವನಿಗೆ ಶಾಸ್ತ್ರವು ಏನನ್ನು ತಾನೇ ಮಾಡುತ್ತದೆ. ೨ ಕಣ್ಣುಗಳೂ ಇಲ್ಲದವನಿಗೆ ಕನ್ನಡಿಯು ತಾನೇ ಏನನ್ನು ಮಾಡುತ್ತದೆ. ಮನುಷ್ಯನಿಗೆ ಶಾಸ್ತ್ರಜ್ಞಾನವು ಅತ್ಯವಶ್ಯಕ, ಸ್ವಂತ ಬುದ್ಧಿಯಿಂದ ಶಾಸ್ತ್ರವನ್ನು ವಿವೇಚಿಸಿ, ಮುಕ್ತವಾಗಿ ಒಪ್ಪಿಕೊಳ್ಳುವಂತಹ ಮನೋಧರ್ಮವನ್ನು ಬೆಳಸಿಕೊಳ್ಳಬೇಕು. ಶಾಸ್ತ್ರಗಳು ಮನುಷ್ಯರಿಗೆ ಒಳಿತನ್ನು

ಮಾಡುವುದಕ್ಕಾಗಿಯೇ ಹೊರಟಿವೆ. ಶಾಸ್ತ್ರಗ್ರಂಥಗಳು ಋಷಿಗಳ ತಪಸ್ಸಿನ ಫಲರೂಪಗಳು. ಮುಮುಕ್ಷುಗಳಿಗೆ ಇವು ದಾರಿದೀಪಗಳಾಗಿವೆ. ಮೋಕ್ಷವು ಒಂದೆರಡು ಜನ್ಮಗಳಲ್ಲಿ ಸಿದ್ಧಿಸುವಂತಹದ್ದಲ್ಲ, ಮನುಷ್ಯನು ಅದನ್ನು ಪಡೆಯಲು ಪ್ರತಿಜನ್ಮದಲ್ಲಿಯೂ ಪ್ರಯತ್ನಶೀಲನಾಗಿರಬೇಕು. ಹೀಗೆ ಪ್ರಯತ್ನಶೀಲನಾಗಬೇಕಾದರೆ ಶಾಸ್ತ್ರಗಳು ಅತ್ಯವಶ್ಯಕ. ಅವುಗಳನ್ನು ಧಿಕ್ಕರಿಸಿದರೆ, ಕುರುಡನು ಕನ್ನಡಿಯನ್ನು ತಿರಸ್ಕರಿಸಿದಂತೆ ಆಗುತ್ತದೆ. ಸರ್ವಸ್ಯ ಲೋಚನಂ ಶಾಸ್ತ್ರಂ – ಎನ್ನುವಂತೆ ನಮ್ಮ ಬದುಕಿನ ಸಾರ್ಥಕತೆಗೆ ಶಾಸ್ತ್ರವೆಂಬ ಕಣ್ಣು ಬೇಕು, ಅದಿಲ್ಲದಿದ್ದರೆ ಅವನು ಕುರುಡನೇ ಸರಿ.

ಕೊನೆಯದಾಗಿ

ಅವಶ್ಯಂ ಪಿತರಾಚಾರಂ!, ಹೌದು ಕರ್ಮಮಾರ್ಗದ ವಿಷಯದಲ್ಲಿ ಅವಶ್ಯವಾಗಿ ನಮ್ಮ ಪಿತೃಗಳ ಆಚಾರವನ್ನು, ನಡವಳಿಕೆಗಳನ್ನು ಅನುಸರಿಸಬೇಕು, ಅದೇ ಸಂಪ್ರದಾಯ-ಆಚಾರ. ಆದರೆ ಯಾವ ಪಿತೃಗಳ?, ಅಂದರೆ ಕರ್ಮಪಿತೃಗಳಾದ ಋಷಿಗಳ ವಚನಗಳನ್ನು ಮೊದಲು ಅಧ್ಯಯನ ಮಾಡಿ, ಹಾಗೆಯೇ ಅರ್ಥಜ್ಞಾನ ತಿಳಿದು, ನಂತರ ನಿಷ್ಕಾಮವಾಗಿ ಕರ್ಮಾಚರಣೆಯನ್ನು ಮಾಡಿದರೆ, ಅದರಿಂದ ಚಿತ್ತಶುದ್ಧಿ, ತನ್ಮೂಲಕ ಬ್ರಹ್ಮಜ್ಞಾನ(ಸಚ್ಚಿದಾನಂದ ಸ್ವರೂಪ) ಪ್ರಾಪ್ತಿಯಾಗುತ್ತದೆ.

ಪ್ರಸ್ತುತ, ಈ ಸಂಚಿಕೆಯನ್ನೂ ಹಿಂದಿನ ಸಂಚಿಕೆಗಳಂತೆಯೇ ಸ್ವೀಕರಿಸಿ ಪ್ರೋತ್ಸಾಹಿಸಬೇಕೆಂದು ವಿನಂತಿಸುತ್ತೇವೆ.

ವೇದಬ್ರಹ್ಮ ಶ್ರೀ ಎ.ಸಿ ಶಕ್ತಿಧರ ಶರ್ಮಾ.

ಉಪಾಕರ್ಮ – ಕಪರ್ದಿಕಾರಿಕಾ

ಶ್ರವಣಂ ಪೌರ್ಣಮಾಸೀ ಚ ಸಂಗವಸ್ಪೃಶಮಾಚರೇತ್ । ತಥೈವೋದ್ವೇಕಂ ಗ್ರಾಹ್ಯಂ ನಾನ್ಯಥೋದಯಿಕಂ ಭವೇತ್ । ಕುರ್ಯಾನ್ನೈಮಿತ್ತಿಕಂ ಕರ್ಮ ಅನಂತರಂ ನಿತ್ಯಕರ್ಮಣಃ । ಪ್ರಾತಸ್ಸಂಗವನಂ ಪರ್ವಶ್ರಾವಣೇ ಪೂರ್ವಮುತ್ತಮಃ । ಉಪಾಕರ್ಮಣಿ ಚೋತ್ಸರ್ಗೇ ಸೀಮಂತೇಷು ಸಮಾಪನೇ । ಕೇಶಶ್ಮಶ್ರ್ವಾದಿ ವಪನಂ ನಖಾನಾಂ ಚ ನಿಕೃಂತನಮ್ । ಯದ್ಯರ್ಧರಾತ್ರಾ ದರ್ವಾಕ್ ಸಂಕ್ರಾತೇತೌ ಗ್ರಹಣೇಽಪಿ ವಾ । ಉಪಾಕರ್ಮಣಿ ಕರ್ತವ್ಯಂ ಪರ್ವತಶ್ಚೇನ್ನ ದೋಷಭಾಕ್ । ಅನುಕ್ತಾಬೀಜೇ ನೃಪತಾ ಪ್ರನಷ್ಟೇಭಾನೌ ಕುಳೀರಪ್ಯಥ ಸಂಕ್ರಮೇಣ । ಉತ್ಸರ್ಜನೋಪಾಕರಣೇ ನ ಕುರ್ಯಾತ್ ಮೂಢೇ ಚ ಶುಕ್ರೇ ಗ್ರಹಣೇ ಚ ಚಂದ್ರೇ । ಶ್ರವಣೇನ ತು ಯತ್ಕರ್ಮ ಉತ್ತರಾಷಾಢ ಸಂಯುತೇ । ಸಂವತ್ಸರ ಕೃತೋಧ್ಯಾಯಃ ತತ್ ಕ್ಷಣಾದೇವ ನಶ್ಯತಿ ॥

ಶ್ರಾವಣ ಹುಣ್ಣಿಮೆಯಲ್ಲಿ, ಎಂದರೆ ಸಂಗವ ಕಾಲದಲ್ಲಿ ಹುಣ್ಣಿಮೆ ಇದ್ದರೆ ಎಂದರ್ಥ ಹಾಗೆಯೇ ಉದಯದಲ್ಲಿ ಹುಣ್ಣಿಮೆ ಇದ್ದರೆ ಎಂದು ತಿಳಿಯಬೇಕು । ಬೇರೇ ತಿಥಿ ಉದಯಕ್ಕೆ ಬಂದರೆ ಮಾಡಬಾರದು । ನೈಮಿತ್ತಿಕ ಕರ್ಮವನ್ನು ಮಾಡಿದ ನಂತರ ನಿತ್ಯಕರ್ಮ ಮಾಡಬೇಕು । ಸಂಗವ ಕಾಲದಲ್ಲಿ ಶ್ರಾವಣ ಹುಣ್ಣಿಮೆ ತಿಥಿಯು ಅಥವಾ ಪ್ರಾತಃಕಾಲದಲ್ಲಿ ಶ್ರಾವಣ ಹುಣ್ಣಿಮೆ ತಿಥಿಯು ಇದ್ದರೆ ಆಗ ಉಪಾಕರ್ಮ ಮಾಡುವುದು ಉತ್ತಮ । ಉಪಾಕರ್ಮ, ಉತ್ಸರ್ಗ, ಸೀಮಂತ, ಸಮಾಪನ ಇವುಗಳಲ್ಲಿ ಕೇಶ ಶಿಖೆ ತೆಗೆಯುವಿಕೆ ಉಗುರು ತೆಗೆಯುವುದು ಕರ್ಮಾಂಗವಾಗಿ ಮಾಡಿಸಿ ಕೊಳ್ಳಬೇಕು । ಹಿಂದಿನ ಅರ್ಧರಾತ್ರಿಗಿಂತ ಮುಂಚೆ ಸಂಕ್ರಾಂತಿ ಅಥವಾ ಗ್ರಹಣಗಳಿದ್ದರೆ ಉಪಾಕರ್ಮವನ್ನು ಮಾಡಬೇಕು । ಉಪಾಕರ್ಮವಾದ ದಿನದ ನಂತರ ಗ್ರಹಣಗಳಿದ್ದರೆ ಅದು ದೋಷವಲ್ಲ । ಬರಗಾಲ

ಬಂದಾಗ, ಗುರು ಅಸ್ತನಾದಾಗ, ಕಟಕ ಸಂಕ್ರಮಣವಿದ್ದಾಗ, ಶುಕ್ರಾಸ್ತವಾದಾಗ, ಚಂದ್ರಗ್ರಹಣವಿದ್ದಾಗ ಉತ್ಸರ್ಜನ, ಉಪಾಕರಣಗಳನ್ನು ಮಾಡಬಾರದು। ಶ್ರಾವಣ ಹುಣ್ಣಿಮೆಯಲ್ಲಿ ಮಾಡುವ ಉಪಾಕರ್ಮದ ದಿವಸದಲ್ಲಿ ಉತ್ತರಾಷಾಢ ನಕ್ಷತ್ರವಿದ್ದರೆ ಆ ಸಂವತ್ಸರ ಮಾಡಿದ ಪೂರ್ತಿ ಅಧ್ಯಯನವನ್ನೂ ಅದು ನಾಶಪಡಿಸುತ್ತದೆ ಎಂದು ಹೇಳುತ್ತಾರೆ ॥

ಉಪಾಕರ್ಮ – ಆಪಸ್ತಂಬ ಗೃಹ್ಯಸೂತ್ರಂ

೧ ಉಪಾಕರಣೇ ಸಮಾಪನೇ ಚ ಋಷಿಃ ಯಃ ಪ್ರಜ್ಞಾಯತೇ ॥

ವ್ರತೋಪಕ್ರಮ(ವ್ರತಚತುಷ್ಟಯ/ಉಪಾಕರ್ಮ), ವ್ರತೋತ್ಸರ್ಜನ ಕರ್ಮಗಳಲ್ಲಿ – ಯಾವ ಋಷಿಗಳೋ ಅವರೇ ಆ ಕರ್ಮದಲ್ಲಿ ದೇವತೆಗಳು ॥

೨ ಸದಸಸ್ಪತಿರ್ದ್ವಿತೀಯಃ ॥

ಸದಸಸ್ಪತಿಯು ಎರಡನೇ(ಸ್ವಿಷ್ಟಕೃತ್) ದೇವತೆಯು ॥

ಉಪಾಕರ್ಮ – ಪ್ರಯೋಗಃ

ಆಚಾರ್ಯಃ ಸಶಿಷ್ಯಃ ನದ್ಯಾದೌ ಸ್ನಾತ್ವಾ। ದೇವಾಲಯಂ ಗತ್ವಾ, ಸರ್ವೈಃ ಪರಿವೃತಃ ಆಚಾರ್ಯಃ ಆಚಮನಂ – ಆಸನವಿಧಿಂ – ಪವಿತ್ರಧಾರಣಂ – ಘಂಟಾನಾದಂ – ಪ್ರಾಣಾಯಾಮಂ – ದೀಪಪೂಜಾಂಚ ಕೃತ್ವಾ ॥

ಆಚಾರ್ಯರು ಶಿಷ್ಯರೊಡನೆ ನದೀ ಸ್ನಾನ ಮಾಡಿ । ದೇವಾಲಯಕ್ಕೆ ಹೋಗಿ, ಎಲ್ಲರೊಡನೆ ಕುಳಿತವರಾಗಿ, ಆಚಾರ್ಯರು ಆಚಮನ – ಆಸನವಿಧಿ – ಪವಿತ್ರಧಾರಣೆ – ಘಂಟಾನಾದ – ಪ್ರಾಣಾಯಾಮ – ದೀಪಪೂಜೆಗಳನ್ನು ಸಹ ಮಾಡಿ ॥

ಪ್ರಾರಿಪ್ಸಿತಸ್ಯ ಕರ್ಮಣಃ ನಿರ್ವಿಘ್ನೇನ ಪರಿಸಮಾಪ್ತ್ಯರ್ಥಂ, ಮಹಾಗಣಪತಿ ಪೂಜಾಂ ತದಾದೌ ಕಲಶಪೂಜಾಂ ಚ ಕರಿಷ್ಯೇ ಇತಿ ಸಂಕಲ್ಪ್ಯ – ಕೃತ್ವಾ ॥

ಮುಂದೆ ಮಾಡಲಿರುವ ಕರ್ಮದ ನಿರ್ವಿಘ್ನತೆಗಾಗಿ, ಗಣಪತಿಪೂಜೆಯನ್ನು ಅದಕ್ಕೆ ಮೊದಲು ಕಲಶ ಪೂಜೆಯನ್ನು ಸಹ ಮಾಡುತ್ತೇನೆ ಎಂದು ಸಂಕಲ್ಪಿಸಿ – ಕಲಶಪೂಜೆ ಮತ್ತು ಗಣಪತಿ ಪೂಜೆಗಳನ್ನು ಮಾಡುವುದು ॥

ಉತ್ಸರ್ಜನ ಸಂಕಲ್ಪಃ

ಸರ್ವೈಃ ಸಹ ಪ್ರಾಣಾಯಾಮಂ ಕುರ್ಯಾತ್ । ಸರ್ವೈಃ ಸಹ ಸಂಕಲ್ಪಮುಚ್ಚಾರ್ಯ । ಶ್ರೀ ಕೃಷ್ಣ ಕೃಷ್ಣಾದ್ಯಾ, ಓಂ ನಮೋ ಭಗವತೇ ವಾಸುದೇವಾಯ ಮಹಾಪುರುಷಸ್ಯ ಶ್ರೀ ವಿಷ್ಣೋರಾಜ್ಞಯಾ ಪ್ರವರ್ತಮಾನಸ್ಯ ಅದ್ಯ ಬ್ರಹ್ಮಣಃ ದ್ವಿತೀಯ ಪರಾರ್ಧೇ..... ಪ್ರೀತ್ಯರ್ಥಂ, ತೈಷ್ಯಾಂ ಪೌರ್ಣಮಾಸ್ಯಾಂ ಕರ್ತವ್ಯ ಉತ್ಸರ್ಜನ ಅಭಾವೇ ಅದ್ಯ ಶ್ರಾವಣ್ಯಾಂ ಪೌರ್ಣಮಾಸ್ಯಾಂ ಉತ್ಸರ್ಜನ ಪ್ರತ್ಯಾಮ್ನಾಯತ್ವೇನ ಷೋಡಶ ಪ್ರಾಣಾಯಾಮಾನ್ ಧಾರಯಿಷ್ಯೇ ಇತಿ ಸಂಕಲ್ಪ್ಯ ॥ ತದಾದೌ ಶುದ್ಧ್ಯರ್ಥಂ ಪುಣ್ಯಾಹವಾಚನಂ ಕರಿಷ್ಯೇ – ಇತಿ ಸಂಕಲ್ಪ್ಯ, ಪುಣ್ಯಾಹಂ ಕೃತ್ವಾ । ಷೋಡಶ ವಾ ಅಷ್ಟಾಚತ್ವಾರಿಂಶತ್ ವಾರಂ ಸಪ್ತ ವ್ಯಾಹೃತಿ ಪೂರ್ವಕಂ ಗಾಯತ್ರೀಂ ಜಪೇತ್ ॥

ಎಲ್ಲರೂ ಪ್ರಾಣಾಯಾಮವನ್ನು ಮಾಡಿ । (ಎಲ್ಲರೂ ಸಂಕಲ್ಪವನ್ನು ಹೇಳುವುದು) ಸಂಕಲ್ಪದಲ್ಲಿ..... ಪುಷ್ಯಮಾಸದ ಹುಣ್ಣಿಮೆಯಲ್ಲಿ ಮಾಡಬೇಕಿದ್ದ ಉತ್ಸರ್ಜನ ಕರ್ಮವನ್ನು ಮಾಡದಿರುವುದಕ್ಕೆ ಪ್ರಾಯಶ್ಚಿತ್ತವಾಗಿ, (ವಾಸ್ತವವಾಗಿ ಶ್ರಾವಣ ಹುಣ್ಣಿಮೆಯಲ್ಲಿ ಉಪಾಕರ್ಮವನ್ನು ಮಾಡಿಕೊಂಡು, ವೇದಾಧ್ಯನವನ್ನು ಆರಂಭಿಸಿ ಪುಷ್ಯ ಹುಣ್ಣಿಮೆಯವರೆಗೆ ಮಾಡಿ, ಪುಷ್ಯ ಹುಣ್ಣಿಮೆಯಂದು ಉತ್ಸರ್ಜನ ಕರ್ಮವನ್ನು ಮಾಡಿಕೊಂಡು ಅಂದರೆ ವೇದಾಧ್ಯನವನ್ನು ತಾತ್ಕಾಲಿಕವಾಗಿ ನಿಲ್ಲಿಸಿ ಪುಷ್ಯ ಹುಣ್ಣಿಮೆಯಿಂದ ಮತ್ತೆ ಶ್ರಾವಣ ಹುಣ್ಣಿಮೆಯವರೆಗೆ ಶಾಸ್ತ್ರಾಧ್ಯಯನವನ್ನು ಮಾಡಬೇಕು. ಇದು ಶಾಸ್ತ್ರೀಯ ವಿಧಾನ. ಆದರೆ ಈಗ ಪುಷ್ಯ ಹುಣ್ಣಿಮೆಯಲ್ಲಿ ಉತ್ಸರ್ಜನ ಕರ್ಮವನ್ನು ಯಾರು ಮಾಡುತ್ತಿಲ್ಲ. ಅದು ಮಾಡದಿದ್ದರೆ ದೋಷವೇ) ಉಪಾಕರ್ಮವನ್ನು ಮಾಡುವ ಮೊದಲು ಉತ್ಸರ್ಜನ ಕರ್ಮವನ್ನು ಮಾಡದಿರುವ ದೋಷಪರಿಹಾರಕ್ಕೆ (ಪ್ರತ್ಯಾಮ್ನಾಯವಾಗಿ) ಈ ಶ್ರಾವಣ ಹುಣ್ಣಿಮೆಯಲ್ಲಿ ೧೬ ಪ್ರಾಣಾಯಾಮ ಮಾಡುತ್ತೇವೆ ಎಂದು ಸಂಕಲ್ಪಿಸಬೇಕು ॥ ಅದರ ಅಂಗವಾಗಿ ಶುದ್ಧಿ ವೃದ್ಧಿಗಾಗಿ ಪುಣ್ಯಾಹ ವಾಚನವನ್ನು ಮಾಡುತ್ತೇವೆ ಎಂದು ಸಂಕಲ್ಪಿಸಿ, ಪುಣ್ಯಾಹವನ್ನು ಮಾಡಿ । ನಂತರ ಪ್ರಾಣಾಯಾಮವನ್ನು (೭ ವ್ಯಾಹೃತಿ ಸಹಿತವಾಗಿ ಗಾಯತ್ರೀ ಮಂತ್ರವನ್ನು ೧೬ ಅಥವಾ ೪೮ ಸಲ), ಮಾಡುವುದು ॥

ಉಪಾಕರ್ಮ ಸಂಕಲ್ಪಃ

ತ್ರಿಃಪ್ರಾಣಾನಾಯಮ್ಯ, ಸರ್ವೈಃಸಹ ಸಂಕಲ್ಪಂ ಉಚ್ಚಾರ್ಯ । ಶುಭೇ ಶೋಭನೇ..... ಪ್ರೀತ್ಯರ್ಥಂ ಅಧೀತಾನಾಂ ಛಂದಸಾಂ ಸವೀರ್ಯತ್ವಾಯ, ಅಧ್ಯೇಷ್ಯಮಾಣಾನಾಂ ಛಂದಸಾಂ ಅಯಾತಯಾಮತ್ವಾಯ, ಅದ್ಯ ಶ್ರಾವಣ್ಯಾಂ ಪೌರ್ಣಮಾಸ್ಯಾಂ ಅಧ್ಯಾಯೋಪಾಕರ್ಮ ಕರಿಷ್ಯೇ, ಇತಿ ಸಂಕಲ್ಪ್ಯ ॥

ತದಂಗಂ ಮಂತ್ರಸ್ನಾನ ಪೂರ್ವಕಂ ಯಜ್ಞೋಪವೀತ ದಾನ, ಧಾರಣಂ ಕರಿಷ್ಯೇ ಇತಿ ಸಂಕಲ್ಪ್ಯ – ಕೃತ್ವಾ (ಬ್ರಹ್ಮಚಾರಿಣಾಂ ಮೌಂಜೀಂ, ಅಜಿನಂ, ದಂಡ ಧಾರಣಂ ಚ ಕರಿಷ್ಯೇ ಇತಿ ಸಂಕಲ್ಪ್ಯ – ಕೃತ್ವಾ)

ಪುನಃ ೩ ಸಲ ಪ್ರಾಣಾಯಾಮವನ್ನು ಮಾಡಿ, ಎಲ್ಲರೂ ಸಂಕಲ್ಪವನ್ನು ಹೇಳುವುದು । ಸಂಕಲ್ಪದಲ್ಲಿ..... ಅಧ್ಯಯನ ಮಾಡಿದ ವೇದಗಳ ವೀರ್ಯವತ್ತತೆಯ ಸಿದ್ಧಿಗಾಗಿ, ಅಧ್ಯಯನ ಮಾಡಬೇಕಿರುವ ಛಂದಸ್ಸುಗಳ(ವೇದಗಳ) ಗತಸಾರ(ಸಾರ ರಹಿತವಾಗದಿರುವುದಕ್ಕೆ) ವಾಗದಿರುವುದಕ್ಕೆ, ಈ ಶ್ರಾವಣ ಹುಣ್ಣಿಮೆಯಲ್ಲಿ ಉಪಾಕರ್ಮ ಮಾಡುತ್ತೇನೆ ಎಂದು ಸಂಕಲ್ಪಿಸುವುದು ॥ ಇದರ ಅಂಗವಾಗಿ ಯಜ್ಞೋಪವೀತವನ್ನು, ಕೆಳಗೆ ತಿಳಿಸಿರುವ ಶ್ಲೋಕ ಹೇಳಿ ದಾನ ಮಾಡಿ, ಮಂತ್ರಸ್ನಾನ ಸಹಿತವಾಗಿ ಧರಿಸುವುದು (ಬ್ರಹ್ಮಚಾರಿಗಳಾದರೆ – ಮೌಂಜಿ, ಅಜಿನ, ದಂಡಗಳನ್ನು ಆಯಾಯಾ ಮಂತ್ರಸಹಿತ ಧಾರಣೆ ಮಾಡುವುದು) ।

ಯಜ್ಞೋಪವೀತ ದಾನ ಮಂತ್ರಃ

ಬ್ರಹ್ಮತೇಜೋಭಿವೃದ್ಧ್ಯರ್ಥಂ ಬ್ರಹ್ಮಣಾ ಕಲ್ಪಿತಂ ಪುರಾ । ಯಜ್ಞೋಪವೀತ ದಾನೇನ ಪ್ರೀಯತಾಂ ಕಮಲಾಪತಿಃ ॥

ಯಜ್ಞೋಪವೀತ ಧಾರಣ ಮಂತ್ರಃ

ಓಂ ಯಜ್ಞೋಪವೀತಂ ಪರಮಂ ಪವಿತ್ರಂ ಪ್ರಜಾಪತೇರ್ಯತ್ಸಹಜಂ ಪುರಸ್ತಾತ್ । ಆಯುಷ್ಯಮಗ್ರಿಯಂ ಪ್ರತಿಮುಂಚ ಶುಭ್ರಂ ಯಜ್ಞೋಪವೀತಂ ಬಲಮಸ್ತು ತೇಜಃ ॥

ಮೌಂಜೀ ಧಾರಣ ಮಂತ್ರೌ

ಓಂ ಇಯಂದುರುಕ್ತಾತ್ಪರಿಬಾಧಮಾನಾ ಶರ್ಮವರೂಥಂ ಪುನತೀ ನ ಆಗಾತ್ । ಪ್ರಾಣಾಪಾನಾಭ್ಯಾಂ ಬಲಮಾಭರಂತೀ ಪ್ರಿಯಾದೇವಾನಾಗ್ಂ ಸುಭಗಾ ಮೇಖಲೇಯಮ್ ॥

ಋತಸ್ಯ ಗೋಪ್ತ್ರೀ ತಪಸಃ ಪರಸ್ಪೀ ಘ್ನತೀ ರಕ್ಷಸ್ಸಹಮಾನಾ ಅರಾತೀಃ । ಸಾನಸ್ಸಮಂತಮನು ಪರೀಹಿ ಭದ್ರಯಾ ಭರ್ತಾರಸ್ತೇ ಮೇಖಲೇ ಮಾರಿಷಾಮ ॥

ಕೃಷ್ಣಾಜಿನ ಧಾರಣ ಮಂತ್ರಃ

ಓಂ ಮಿತ್ರಸ್ಯ ಚಕ್ಷುರ್ಧರುಣಂ ಬಲೀಯಸ್ತೇಜೋ ಯಶಸ್ವಿ ಸ್ಥವಿರಗ್ಂ ಸಮಿದ್ಧಮ್ । ಅನಾಹನಸ್ಯಂ ವಸನಂ ಜರಿಷ್ಣು ಪರೀದಂ ವಾಜ್ಯಜಿನಂ ದಧೇsಹಮ್ ॥

ದಂಡ ಧಾರಣ ಮಂತ್ರಃ

ಓಂ ಸುಶ್ರವಸ್ಸುಶ್ರವಸಂ ಮಾ ಕುರು ಯಥಾ ತ್ವಗ್ಂ ಸುಶ್ರವಸ್ಸುಶ್ರವಾ ಅಸ್ಯೇವಮಹಗ್ಂ ಸುಶ್ರವಸ್ಸುಶ್ರವಾ ಭೂಯಾಸಂ ಯಥಾ ತ್ವಗ್ಂ ಸುಶ್ರವಸ್ಸುಶ್ರವೋ ದೇವಾನಾಂ ನಿಧಿಗೋಪೋsಸ್ಯೇವಮಹಂ ಬ್ರಾಹ್ಮಣಾನಾಂ ಬ್ರಹ್ಮಣೋ ನಿಧಿಗೋಪೋ ಭೂಯಾಸಮ್ ॥

ನವ ಕಾಂಡಋಷಿ ಪೂಜಾ

ನವ ಕಾಂಡಋಷಿ ಪೂಜಾಂ ಕರಿಷ್ಯೇ – ಇತಿ ಸಂಕಲ್ಪ್ಯ । ಪವಿತ್ರೇಷು ಕಲಶೇ ವಾ ನವ ಕಾಂಡಋಷೀನ್ ಆವಾಹ್ಯ – ಉಪಚಾರ ಪೂಜಾಂ ಕೃತ್ವಾ ॥

ಕೂರ್ಚ ಅಥವಾ ಕಲಶದಲ್ಲಿ, ಈ ಕೆಳಗೆ ತಿಳಿಸಿರುವಂತೆ, ೯ ಕಾಂಡ ಋಷಿಗಳನ್ನು ಆವಾಹಿಸಿ – ಉಪಚಾರ ಪೂಜೆಗಳನ್ನು ಮಾಡುವುದು ॥

೧. ಓಂ ಪ್ರಜಾಪತೇ ನತ್ವದೇತಾನ್ಯನ್ಯಃ । ವಿಶ್ವಾಜಾತಾನಿ ಪರಿತಾ ಬಭೂವ । ಯತ್ಕಾಮಾಸ್ತೇ ಜುಹುಮಸ್ತನ್ನೋ ಅಸ್ತು । ವಯಗ್ಂ ಸ್ಯಾಮ ಪತಯೋ ರಯೀಣಾಮ್ ॥

ಅಸ್ಮಿನ್ ಕಲಶೇ(ಪವಿತ್ರೇ) ಓಂಭೂಃ ಪ್ರಜಾಪತಿಂ ಕಾಂಡಋಷಿಂ ಆವಾಹಯಾಮಿ । ಓಂಭುವಃ ಪ್ರಜಾಪತಿಂ ಕಾಂಡಋಷಿಂ ಆವಾಹಯಾಮಿ । ಓಗ್ಂಸುವಃ ಪ್ರಜಾಪತಿಂ ಕಾಂಡಋಷಿಂ ಆವಾಹಯಾಮಿ । ಓಂ ಭೂರ್ಭುವಸ್ಸುವಃ ಪ್ರಜಾಪತಿಂ ಕಾಂಡಋಷಿಂ ಆವಾಹಯಾಮಿ ॥

೨ ಓಂ ಸೋಮೋಧೇನುಗ್ಂ ಸೋಮೋ ಅರ್ವಂತಮಾಶುಮ್ । ಸೋಮೋವೀರಂ ಕರ್ಮಣ್ಯಂ ದದಾತು । ಸಾದನ್ಯಂ ವಿದಥ್ಯಗ್ಂ ಸಭೇಯಮ್ । ಪಿತುಶ್ರವಣಂ ಯೋ ದದಾಶದಸ್ಮೈ ॥

ಅಸ್ಮಿನ್ ಕಲಶೇ(ಪವಿತ್ರೇ) ಓಂಭೂಃ ಸೋಮಂ ಕಾಂಡಋಷಿಂ ಆವಾಹಯಾಮಿ । ಓಂಭುವಃ ಸೋಮಂ ಕಾಂಡಋಷಿಂ

ಆವಾಹಯಾಮಿ । ಓಗ್ಂಸುವಃ ಸೋಮಂ ಕಾಂಡಋಷಿಂ ಆವಾಹಯಾಮಿ । ಓಂ ಭೂರ್ಭುವಸ್ಸುವಃ ಸೋಮಂ ಕಾಂಡಋಷಿಂ ಆವಾಹಯಾಮಿ ॥

೩ ಓಂ ಅಗ್ನೇನಯ ಸುಪಥಾರಾಯೇ ಅಸ್ಮಾನ್ । ವಿಶ್ವಾನಿದೇವ ವಯುನಾನಿ ವಿದ್ವಾನ್ । ಯುಂಯೋಧ್ಯಸ್ಮಜ್ಜುಹುರಾಣಮೇನಃ । ಭೂಯಿಷ್ಠಾಂತೇ ನಮ ಉಕ್ತಿಂ ವಿಧೇಮ ॥

ಅಸ್ಮಿನ್ ಕಲಶೇ(ಪವಿತ್ರೇ) ಓಂಭೂಃ ಅಗ್ನಿಂ ಕಾಂಡಋಷಿಂ ಆವಾಹಯಾಮಿ । ಓಂಭುವಃ ಅಗ್ನಿಂ ಕಾಂಡಋಷಿಂ ಆವಾಹಯಾಮಿ । ಓಗ್ಂಸುವಃ ಅಗ್ನಿಂ ಕಾಂಡಋಷಿಂ ಆವಾಹಯಾಮಿ । ಓಂ ಭೂರ್ಭುವಸ್ಸುವಃ ಅಗ್ನಿಂ ಕಾಂಡಋಷಿಂ ಆವಾಹಯಾಮಿ ॥

೪. ಓಂ ಆನೋ ವಿಶ್ವೇ ಅಸ್ಯಾಗಮಂತು ದೇವಾಃ । ಮಿತ್ರೋ ಅರ್ಯಮಾ ವರುಣಸ್ಸಜೋಷಾಃ । ಭುವನ್, ಯಥಾನೋ ವಿಶ್ವೇ ವೃಧಾಸಃ । ಕರನ್ಸುಷಾಹಾ ವಿಥುರಂ ನ ಶವಃ ॥

ಅಸ್ಮಿನ್ ಕಲಶೇ(ಪವಿತ್ರೇ) ಓಂಭೂಃ ವಿಶ್ವಾನ್ದೇವಾನ್ ಕಾಂಡಋಷೀನ್ ಆವಾಹಯಾಮಿ । ಓಂಭುವಃ ವಿಶ್ವಾನ್ದೇವಾನ್ ಕಾಂಡಋಷೀನ್ ಆವಾಹಯಾಮಿ । ಓಗ್ಂಸುವಃ ವಿಶ್ವಾನ್ದೇವಾನ್ ಕಾಂಡಋಷೀನ್ ಆವಾಹಯಾಮಿ । ಓಂಭೂರ್ಭುವಸ್ಸುವಃ ವಿಶ್ವಾನ್ದೇವಾನ್ ಕಾಂಡಋಷೀನ್ ಆವಾಹಯಾಮಿ ॥

೫ ಓಂ ಶೀಕ್ಷಾಂ ವ್ಯಾಖ್ಯಾಸ್ಯಾಮಃ । ವರ್ಣಸ್ವರಃ । ಮಾತ್ರಾಬಲಂ । ಸಾಮಸಂತಾನಃ ॥ ಸಾಗ್ಂಹಿತೀಭ್ಯೋ ದೇವತಾಭ್ಯಃ ಉಪನಿಷದ್ಭ್ಯೋ ನಮಃ । ಅಸ್ಮಿನ್ ಕಲಶೇ(ಪವಿತ್ರೇ) ಓಂಭೂಃ ಸಾಗ್ಂಹಿತೀರ್ದೇವತಾಃ ಉಪನಿಷದಃ ಆವಾಹಯಾಮಿ । ಓಂಭುವಃ ಸಾಗ್ಂಹಿತೀರ್ದೇವತಾಃ ಉಪನಿಷದಃ ಆವಾಹಯಾಮಿ । ಓಗ್ಂಸುವಃ ಸಾಗ್ಂಹಿತೀರ್ದೇವತಾಃ ಉಪನಿಷದಃ ಆವಾಹಯಾಮಿ । ಓಂಭೂರ್ಭುವಸ್ಸುವಃ ಸಾಗ್ಂಹಿತೀರ್ದೇವತಾಃ ಉಪನಿಷದಃ ಆವಾಹಯಾಮಿ ॥

೬ ಓಂ ಬ್ರಹ್ಮ ವಿದಾಪ್ನೋತಿ ಪರಂ । ತದೇಷಾಭ್ಯುಕ್ತಾ । ಸತ್ಯಂ ಜ್ಞಾನಮನಂತಂ ಬ್ರಹ್ಮ । ಯೋವೇದ ನಿಹಿತಂ ಗುಹಾಯಾಂ ಪರಮೇ ವ್ಯೋಮನ್ ॥ ಯಾಜ್ಞಿಕೀಭ್ಯೋ ದೇವತಾಭ್ಯಃ ಉಪನಿಷದ್ಭ್ಯೋ ನಮಃ । ಅಸ್ಮಿನ್ ಕಲಶೇ(ಪವಿತ್ರೇ) ಓಂಭೂಃ ಯಾಜ್ಞಿಕೀರ್ದೇವತಾಃ ಉಪನಿಷದಃ ಆವಾಹಯಾಮಿ । ಓಂಭುವಃ ಯಾಜ್ಞಿಕೀರ್ದೇವತಾಃ ಉಪನಿಷದಃ ಆವಾಹಯಾಮಿ । ಓಗ್ಂಸುವಃ ಯಾಜ್ಞಿಕೀರ್ದೇವತಾಃ ಉಪನಿಷದಃ ಆವಾಹಯಾಮಿ । ಓಂಭೂರ್ಭುವಸ್ಸುವಃ ಯಾಜ್ಞಿಕೀರ್ದೇವತಾಃ ಉಪನಿಷದಃ ಆವಾಹಯಾಮಿ ॥

೭. ಓಂ ಭೃಗುರ್ವೈ ವಾರುಣಿಃ । ವರುಣಂ ಪಿತರಮುಪಸಸಾರ । ಅಧೀಹಿ ಭಗವೋ ಬ್ರಹ್ಮೇತಿ । ತಸ್ಮಾ ಏತತ್ಪ್ರೋವಾಚಾ ॥ ವಾರುಣೇಭ್ಯೋ ದೇವತಾಭ್ಯಃ ಉಪನಿಷದ್ಭ್ಯೋ ನಮಃ । ಅಸ್ಮಿನ್

ಕಲಶೇ(ಪವಿತ್ರೇ) ಓಂಭೂಃ ವಾರುಣೀದೇ೯ವತಾಃ ಉಪನಿಷದಃ ಆವಾಹಯಾಮಿ । ಓಂಭುವಃ ವಾರುಣೀದೇ೯ವತಾಃ ಉಪನಿಷದಃ ಆವಾಹಯಾಮಿ । ಓಗ್ಂಸುವಃ ವಾರುಣೀದೇ೯ವತಾಃ ಉಪನಿಷದಃ ಆವಾಹಯಾಮಿ । ಓಂಭೂರ್ಭುವಸ್ಸುವಃ ವಾರುಣೀದೇ೯ವತಾಃ ಉಪನಿಷದಃ ಆವಾಹಯಾಮಿ ॥

೮ ಓಂ ವೇದಾತ್ಮನಾಯ ವಿದ್ಮಹೇ ಹಿರಣ್ಯಗರ್ಭಾಯ ಧೀಮಹಿ । ತನ್ನೋ ಬ್ರಹ್ಮಪ್ರಚೋದಯಾತ್ । ಬ್ರಹ್ಮಣೇ ಸ್ವಯಂಭುವೇ ನಮಃ । ಅಸ್ಮಿನ್ ಕಲಶೇ (ಪವಿತ್ರೇ) ಓಂಭೂಃ ಬ್ರಹ್ಮಾಣಂ ಸ್ವಯಂಭುವಂ ಆವಾಹಯಾಮಿ । ಓಂಭುವಃ ಬ್ರಹ್ಮಾಣಂ ಸ್ವಯಂಭುವಂ ಆವಾಹಯಾಮಿ । ಓಗ್ಂಸುವಃ ಬ್ರಹ್ಮಾಣಂ ಸ್ವಯಂಭುವಂ ಆವಾಹಯಾಮಿ । ಓಂಭೂರ್ಭುವಸ್ಸುವಃ ಬ್ರಹ್ಮಾಣಂ ಸ್ವಯಂಭುವಂ ಆವಾಹಯಾಮಿ ॥

೯ ಓಂ ಸದಸಸ್ಪತಿಮದ್ಭುತಂ ಪ್ರಿಯಮಿಂದ್ರಸ್ಯ ಕಾಮ್ಯಂ । ಸನಿಂ ಮೇಧಾಮ ಯಾಸಿಷಮ್ ॥ ಸದಸಸ್ಪತಯೇ ನಮಃ । ಅಸ್ಮಿನ್ ಕಲಶೇ(ಪವಿತ್ರೇ) ಓಂಭೂಃ ಸದಸಸ್ಪತಿಂ ಆವಾಹಯಾಮಿ । ಓಂಭುವಃ ಸದಸಸ್ಪತಿಂ ಆವಾಹಯಾಮಿ । ಓಗ್ಂಸುವಃ ಸದಸಸ್ಪತಿಂ ಆವಾಹಯಾಮಿ । ಓಂಭೂರ್ಭುವಸ್ಸುವಃ ಸದಸಸ್ಪತಿಂ ಆವಾಹಯಾಮಿ ॥

ನವ ಕಾಂಡಋಷಿ ತರ್ಪಣಂ

ನವ ಕಾಂಡಋಷಿ ತರ್ಪಣಂ ಕರಿಷ್ಯೇ – ಇತಿ ಸಂಕಲ್ಪ್ಯ । ನಿವೀತೀ ಭೂತ್ವಾ, ಸರ್ವತ್ರ ಋಷಿತೀರ್ಥೇನ, ತಂಡುಲ ಸಹಿತ ಉದಕೇನ ದ್ವಿಸ್ತರ್ಪಣಂ ಕೃತ್ವಾ ॥

ಕಾಂಡಋಷಿಗಳಿಗೆ ತರ್ಪಣವನ್ನು ಕೊಡುತ್ತೇನೆ – ಎಂದು ಸಂಕಲ್ಪಿಸುವುದು । ಯಜ್ಞೋಪವೀತವನ್ನು ನಿವೀತಿಯಾಗಿ ಹಾಕಿಕೊಂಡು(ಹಾರದಂತೆ), ಒದ್ದೆಯಾಗಿರುವ ಅಕ್ಕಿಯ ಸಹಿತ, ನೀರಿನಿಂದ ಕೆಳಗೆ ತಿಳಿಸಿರುವಂತೆ ಒಂಭತ್ತು ಋಷಿಗಳಿಗೂ ಎರಡೆರಡು ತರ್ಪಣಗಳನ್ನು ಕೈಯಲ್ಲಿ, ಕಿರುಬೆರಳಿನ ಎಡಪಕ್ಕದ ಜಾಗದಲ್ಲಿ ತರ್ಪಣದ ನೀರು ಕೆಳಕ್ಕೆ ಬೀಳುವಂತೆ ಕೊಡುವುದು ॥

೧ ಪ್ರಜಾಪತಿಂ ಕಾಂಡಋಷಿಂ ತರ್ಪಯಾಮಿ – ತರ್ಪಯಾಮಿ ।

೨ ಸೋಮಂ ಕಾಂಡಋಷಿಂ ತರ್ಪಯಾಮಿ – ತರ್ಪಯಾಮಿ ।

೩ ಅಗ್ನಿಂ ಕಾಂಡಋಷಿಂ ತರ್ಪಯಾಮಿ – ತರ್ಪಯಾಮಿ ।

೪ ವಿಶ್ವಾನ್ದೇವಾನ್ ಕಾಂಡಋಷೀನ್ ತರ್ಪಯಾಮಿ – ತರ್ಪಯಾಮಿ ।

೫ ಸಾಗ್ಂಹಿತೀರ್ದೇವತಾಃ ಉಪನಿಷದಃ ತರ್ಪಯಾಮಿ – ತರ್ಪಯಾಮಿ ।

೬ ಯಾಜ್ಞಿಕೀರ್ದೇವತಾಃ ಉಪನಿಷದಃ ತರ್ಪಯಾಮಿ – ತರ್ಪಯಾಮಿ ।

೭ ವಾರುಣೀರ್ದೇವತಾಃ ಉಪನಿಷದಃ ತರ್ಪಯಾಮಿ – ತರ್ಪಯಾಮಿ ।

೮ ಬ್ರಹ್ಮಾಣಂ ಸ್ವಯಂಭುವಂ ತರ್ಪಯಾಮಿ – ತರ್ಪಯಾಮಿ ।

೯ ಸದಸಸ್ಪತಿಂ ತರ್ಪಯಾಮಿ – ತರ್ಪಯಾಮಿ । ಉಪವೀತಿನಃ ।

ನವ ಕಾಂಡಋಷಿ ಹೋಮಃ

ಆಚಾರ್ಯಃ, ಕಾಂಡಋಷಿ ಹೋಮಾರ್ಥಂ ಸ್ಥಂಡಿಲೋಲ್ಲೇಖನಾದಿ ಅಗ್ನಿಪ್ರತಿಷ್ಠಾಪನಂ ಕರಿಷ್ಯೇ ಇತಿ ಸಂಕಲ್ಪ್ಯ । ಪರ್ಯುಕ್ಷ್ಯ, ಪರಿಮೃಜ್ಯ । ಸಂಭವ ನಾಮಾನಮಗ್ನಿಂ(ಲೌಕಿಕ) ಪ್ರತಿಷ್ಠಾಪ್ಯ । ಷಟ್ಪಾತ್ರ ಪ್ರಯೋಗೇಣ ಅಗ್ನಿಮುಖಾಂತಂ ಕೃತ್ವಾ । ಯಜ್ಞೇಶ್ವರಪೂಜಾಂ ಧ್ಯಾನಾವಾಹನಾದಿ ಆರಭ್ಯ, ಧೂಪದೀಪಾಂತಂ ಕೃತ್ವಾ । ಸರ್ವೇ ನಿವೀತೀ ಭೂತ್ವಾ । ನೈವೇದ್ಯ ಸ್ಥಾನೇ, ದರ್ವ್ಯಾಂ ಸಕೃದಾಜ್ಯಂ ಗೃಹೀತ್ವಾ, ಪ್ರಧಾನಾಹುತೀರ್ ಹುತ್ವಾ ॥

ಋಷಿಹೋಮಕ್ಕಾಗಿ, ಕುಂಡ ಸಂಸ್ಕಾರವನ್ನು ಮಾಡಿ, ಅಗ್ನಿಪ್ರತಿಷ್ಠೆಯನ್ನು ಮಾಡುತ್ತೇನೆ ಎಂದು ಸಂಕಲ್ಪಿಸಿ । ಕುಂಡವನ್ನು ನೀರಿನಿಂದ ಪ್ರೋಕ್ಷಿಸಿ, ತಿಕ್ಕಿ ಸ್ವಚ್ಛಗೊಳಿಸಿ । ಸಂಭವ ಎಂಬ ಹೆಸರಿನ (ಲೌಕಿಕ)ಅಗ್ನಿಯನ್ನು ಪ್ರತಿಷ್ಠೆಮಾಡಿ । ಷಟ್ಪಾತ್ರ ಪ್ರಯೋಗದಿಂದ ಮುಖಾಂತದ ವರೆಗೆ ಪ್ರಯೋಗವನ್ನು ಮಾಡಿ । ಅಗ್ನಿದೇವನ ಪೂಜೆಯನ್ನು ಧ್ಯಾನಾವಾಹನ ಉಪಚಾರದಿಂದ ಆರಂಭಿಸಿ, ಧೂಪದೀಪಾಂತದ ವರೆಗೆ ಮಾಡಿ । ಎಲ್ಲರೂ ನಿವೀತಿಗಳಾಗಿ । ನೈವೇದ್ಯ ಸ್ಥಾನದಲ್ಲಿ, ಕೆಳಗೆ ತಿಳಿಸಿರುವ ಆಯಾಯಾ ಮಂತ್ರಗಳಿಂದ ಕಾಂಡಋಷಿ ಹೋಮವನ್ನು ಸ್ರುಕ್ಕಿನಲ್ಲಿ ಒಂದೊಂದು ಸಲ ತುಪ್ಪವನ್ನು ಹಾಕಿಕೊಂಡು ಮಾಡುವುದು ॥

ಮಂತ್ರಾಃ –

೧ ಓಂ ಪ್ರಜಾಪತಯೇ ಕಾಂಡಋಷಯೇ ಸ್ವಾಹಾ ॥

೨ ಓಂ ಸೋಮಾಯ ಕಾಂಡಋಷಯೇ ಸ್ವಾಹಾ ॥

೩ ಓಂ ಅಗ್ನಯೇ ಕಾಂಡಋಷಯೇ ಸ್ವಾಹಾ ॥

೪ ಓಂ ವಿಶ್ವೇಭ್ಯೋ ದೇವೇಭ್ಯಃ ಕಾಂಡಋಷಿಭ್ಯಃ ಸ್ವಾಹಾ ॥

೫ ಓಂ ಸಾಗ್ಂಹಿತೀಭ್ಯೋ ದೇವತಾಭ್ಯಃ ಉಪನಿಷದ್ಭ್ಯಃ ಸ್ವಾಹಾ ॥

೬ ಓಂ ಯಾಜ್ಞಿಕೀಭ್ಯೋ ದೇವತಾಭ್ಯಃ ಉಪನಿಷದ್ಭ್ಯಃ ಸ್ವಾಹಾ ॥

೭ ಓಂ ವಾರುಣೀಭ್ಯೋ ದೇವತಾಭ್ಯೋ ಉಪನಿಷದ್ಭ್ಯಃ ಸ್ವಾಹಾ ॥

೮ ಓಂ ಬ್ರಹ್ಮಣೇ ಸ್ವಯಂಭುವೇ ಸ್ವಾಹಾ ॥

೯ ಓಂ ಸದಸಸ್ಪತಯೇ ಸ್ವಾಹಾ ॥

ಸ್ವಿಷ್ಟಕೃತ್ ಹೋಮಃ

ಸರ್ವೇ ಉಪವೀತಿನಃ । ಮಂತ್ರಃ – ಓಂ ಸದಸಸ್ಪತಿಮದ್ಭುತಂ ಪ್ರಿಯಮಿಂದ್ರಸ್ಯ ಕಾಮ್ಯಂ । ಸನಿಂ ಮೇಧಾಮಯಾಸಿಷಗ್ಂ ಸ್ವಾಹಾ – ಅಗ್ನಯೇ ಸ್ವಿಷ್ಟಕೃತ ಇದಂ ನಮಮ ॥

ಎಲ್ಲರೂ ಉಪವೀತಿಗಳಾಗಿ । ಸ್ವಿಷ್ಟಕೃತ್ ಹೋಮವನ್ನು ಮೇಲಿನ ಮಂತ್ರದಿಂದ ಮಾಡಿ ॥

ವೇದಾರಂಭಃ

ಆಚಾರ್ಯಃ ಶಿಷ್ಯಾನ್ ಅಧ್ಯಾಪಯಿತ್ವಾ ॥

ಕೆಳಗೆ ಹೇಳಿರುವಂತೆ, ವೇದಾರಂಭವನ್ನು ಆಚಾರ್ಯರು ಶಿಷ್ಯರಿಗೆ ಮಾಡಿಸುವುದು ॥

ಶ್ಲೋಕಾಃ –

ವಕ್ರತುಂಡ ಮಹಾಕಾಯ ಸೂರ್ಯಕೋಟಿ ಸಮಪ್ರಭ ।
ನಿರ್ವಿಘ್ನಂ ಕುರು ಮೇ ದೇವ ಸರ್ವ ಕಾರ್ಯೇಷು ಸರ್ವದಾ ॥

ಸರಸ್ವತಿ ನಮಸ್ತುಭ್ಯಂ ವರದೇ ಕಾಮರೂಪಿಣೀ ।
ವಿದ್ಯಾರಂಭಂ ಕರಿಷ್ಯಾಮಿ ಸಿದ್ಧಿರ್ಭವತು ಮೇ ಸದಾ ॥

ನಮಸ್ತೇ ಶಾರದಾ ದೇವಿ ಶೃಂಗೇರಿ ಪುರವಾಸಿನೀ ।
ತ್ವಾಮಹಂ ಪ್ರಾರ್ಥಯೇ ನಿತ್ಯಂ ವಿದ್ಯಾಂ ಬುದ್ಧಿಂ ಚ ದೇಹಿಮೇ ॥

ನಮೋ ಗುರುಭ್ಯೋ ಗುರುಪಾದುಕಾಭ್ಯೋ ನಮಃ ಪರೇಭ್ಯೋ ಪರಪಾದುಕಾಭ್ಯಃ ।
ಆಚಾರ್ಯ ಸಿದ್ಧೇಶ್ವರ ಪಾದುಕಾಭ್ಯೋ ನಮೋಽಸ್ತು ಲಕ್ಷ್ಮೀಪತಿ ಪಾದುಕಾಭ್ಯಃ ॥

ಓಂ ನಮೋ ಬ್ರಹ್ಮಾದಿಭ್ಯೋ, ಬ್ರಹ್ಮವಿದ್ಯಾ ಸಂಪ್ರದಾಯ ಕರ್ತೃಭ್ಯೋ, ವಂಶ ಋಷಿಭ್ಯೋ, ನಮೋ ಗುರುಭ್ಯೋ, ಮಹದ್ಭ್ಯೋ ನಮಃ, ಶ್ರೀ ಗುರುಭ್ಯೋ ನಮಃ ಹರಿಃ ಓಂ

ಯಜುರ್ವೇದಃ –

ಇಷೇತ್ವೋರ್ಜೇತ್ವಾ ..... ಪಾಹಿ ॥ ಹರಿಃ ಓಂ (ಸಂಹಿತೆ)

ಹರಿಃ ಓಂ ಬ್ರಹ್ಮ ಸಂಧತ್ತಂ... ಶೋಚಿಷಾ ॥ ಹರಿಃ ಓಂ (ಬ್ರಾಹ್ಮಣ)
ಹರಿಃ ಓಂ ಸಂಜ್ಞಾನಂ..... ಕಲ್ಯಾಣಃ ॥ ಹರಿಃ ಓಂ (ಕಾಠಕ)

ಹರಿಃ ಓಂ ಭದ್ರಂ ಕರ್ಣೇಭಿಃ ..... ಶಾಂತಿಃ ॥ ಹರಿಃ ಓಂ (ಆರಣ್ಯಕ)

ಹರಿಃ ಓಂ ಶಂನ್ನೋಮಿತ್ರಃ..... ಶಾಂತಿಃ ॥ ಹರಿಃ ಓಂ (ಉಪನಿಷತ್)

ಹರಿಃ ಓಂ ಸಹನಾವವತು ..... ಶಾಂತಿಃ ॥ ಹರಿಃ ಓಂ (ಉಪನಿಷತ್)

ಋಗ್ವೇದಃ –

ಹರಿಃ ಓಂ ಅಗ್ನಿಮೀಳೇ..... ಧಾತಮಂ ॥ ಹರಿಃ ಓಂ

ಸಾಮವೇದಃ –

ಹರಿಃ ಓಂ ಅಗ್ನ ಆಯಾಹಿ..... ಬರ್ಹಿಷಿ ॥ ಹರಿಃ ಓಂ

ಅಥರ್ವಣವೇದಃ –

ಹರಿಃ ಓಂ ಶನ್ನೋ ದೇವೀಃ ..... ನಃ ॥ ಹರಿಃ ಓಂ

ವೇದಾಂಗಾಃ –

೧ ಶಿಕ್ಷಾ –

ಅಥ ಶೀಕ್ಷಾಂ ಪ್ರವಕ್ಷ್ಯಾಮಿ । ಪಾಣಿನೀಯ ಮತಂ ಯಥಾ ।
ಶಾಸ್ತ್ರಾನುಪೂರ್ವಂ ತದ್ವಿದ್ಯಾತ್ । ಯಥೋಕ್ತಂ ಲೋಕವೇದಯೋಃ ॥

೨ ವ್ಯಾಕರಣಂ –

ಅ ಇ ಉ ಣ್ । ಋ ಲೃ ಕ್ । ಏ ಓ ಙ । ಐ ಔ ಚ್ । ಹ ಯ ವ ರ ಟ್ ।
ಲ ಣ್ । ಞ ಮ ಙ ಣ ನ ಮ್ । ಜ ಭ ಞ । ಘ ಢ ಧ ಶ್ । ಜ ಬ ಗ

ಡ ದ ಶ್ । ಖ ಫ ಛ ಠ ಥ ಚ ಟ ತ ವ್ । ಕ ಪ ಯ್ । ಶ ಷ ಸ ರ್ । ಹ ಲ್ । ಇತಿ ಮಾಹೇಶ್ವರಾಣಿ ಸೂತ್ರಾಣಿ ॥

೩ ಛಂದಃ –

ಮಯರಸತ ಜಭನಲಗಸಂಮಿತಂ । ಭ್ರಮಯತಿ ವಾಙ್ಮಯಂ ಯಸ್ಯಸಜಯತಿ ಪಿಂಗಲನಾಗಃ । ಶಿವಪ್ರಸಾದಾತ್ ವಿಶುದ್ಧಮತಿಃ ॥

೪ ನಿರುಕ್ತಂ –

ಅಥ ನಿರುಕ್ತಿಃ ॥

೫ ಜ್ಯೋತಿಷ್ಯಂ –

ಪಂಚ ಸಂವತ್ಸರಮಯಂ । ಗೀರ್ಣಃ ಶ್ರೇಯಃ । ಧೇನವಃ ಶ್ರೀಃ । ರುದ್ರಸ್ತುನಮ್ಯಃ । ಭಗೋ ಹಿ ಯಾಜ್ಯಾ ॥

೬ ಕಲ್ಪಃ –

ಅಥಾತೋ ದರ್ಶಪೂರ್ಣಮಾಸೌ ವ್ಯಾಖ್ಯಾಸ್ಯಾಮಃ । ಪ್ರಾತರಗ್ನಿಹೋತ್ರಗ್ಂ ಹುತ್ವಾ । ಅನ್ಯಮಾಹವನೀಯಂ ಪ್ರಣೀಯ । ಅಗ್ನೀನನ್ವಾದಧಾತಿ ॥

ಧರ್ಮಃ – (ಪೂರ್ವಮೀಮಾಂಸ)

ಅಥಾತೋ ಧರ್ಮಜಿಜ್ಞಾಸಾ ॥

ಬ್ರಹ್ಮ – (ಉತ್ತರ ಮೀಮಾಂಸ)

ಅಥಾತೋ ಬ್ರಹ್ಮಜಿಜ್ಞಾಸಾ ॥

ತರ್ಕ –

ಪ್ರಮಾಣ ಪ್ರಮೇಯ । ಸಂಶಯ ಪ್ರಯೋಜನ । ದೃಷ್ಟಾಂತ ಸಿದ್ಧಾಂತ । ಅವಯವ ತರ್ಕ । ನಿರ್ಣಯ ವಾದ । ಜಲ್ಪ ವಿತಂಡಾ ಹೇತ್ವಾ ಭಾಸ । ಛಲ ಜಾತಿ । ನಿಗ್ರಹ ಸ್ಥಾನಾನಾಂ । ತತ್ವ ಜ್ಞಾನಾತ್ । ನಿಃಶ್ರೇಯಸಾಧಿಗಮಃ ॥

ಪುರಾಣ –

ಸಂಚಿಂತಯೇತ್ ಭಗವತಃ ಚರಣಾರವಿಂದಂ ವಜ್ರಾಂಕುಶಧ್ವಜ ಸರೋರುಹ ಲಾಂಛನಾಢ್ಯಂ ।

ಉತ್ತುಂಗ ಹೇಮ ವಿಲಸತ್ ನಖಚಕ್ರ ವಾಳ ಜ್ಯೋತ್ಸ್ನಾಭಿರಾಹತ ಮಹತ್ ಹೃದಯಾಂಧಕಾರಂ ॥

ಧರ್ಮಶಾಸ್ತ್ರಂ –

ಅಥಾತಃ ಸಾಮಯಾಚಾರಿಕಾನ್ ಧರ್ಮಾನ್ ವ್ಯಾಖ್ಯಾಸ್ಯಾಮಃ । ಧರ್ಮಜ್ಞ ಸಮಯಃ ಪ್ರಮಾಣಂ । ವೇದಾಶ್ಚ । ಹರಿಃ ಓಂ ॥ ಶ್ರೀ ಗುರು ಚರಣಾರವಿಂದಾರ್ಪಣಮಸ್ತು । ಓಂ ತತ್ಸತ್ ॥

ಇತಿ ಶಿಷ್ಯಾನ್ ಅಧ್ಯಾಪಯಿತ್ವಾ ಆಚಾರ್ಯಃ ॥

ಜಲಂ ಪ್ರೋಕ್ಷ್ಯ, ಅನೂಯಾಜ ಸಮಿಧ ಹೋಮಂ, ಇಧ್ಮಸನ್ನಹನ ಹೋಮಂ ಚ ಕೃತ್ವಾ । ಜಯಾದಿಂ ಕೃತ್ವಾ । ಪರಿಧ್ಯಂಜನಂ ಕೃತ್ವಾ । ಲೇಪ ಕಾರ್ಯಂ ನ । ಪರಿಧಿಪ್ರಹರಣಂ ಕೃತ್ವಾ । ಸಂಸ್ರಾವಹೋಮಂ ಕೃತ್ವಾ । ಅನಾಜ್ಞಾತ – ಸರ್ವ ಪ್ರಾಯಶ್ಚಿತ್ತ ಹೋಮಾಂತೇ ದ್ವಾದಶ ಗೃಹೀತೇನ ಸಪ್ತತೇ ಅಗ್ನೇ ಇತಿ ಪೂರ್ಣಾಹುತಿಂ ಹುತ್ವಾ । ಮಂಗಳನೀರಾಜನಂ, ಮಂತ್ರಪುಷ್ಪಾಂಜಲಿಂ ಚ ಕೃತ್ವಾ ॥

ಅನೂಯಾಜ ಸಮಿತ್ತಿಗೆ ನೀರನ್ನು ತಿಕ್ಕಿ, ಅದನ್ನು ಅಗ್ನಿಗೆ ಹಾಕುವುದು । ಹಾಗೆಯೇ ಇಧ್ಮವನ್ನು ಕಟ್ಟಿದ್ದ ದಾರದ ಹೋಮವನ್ನು ಸಹ ಮಾಡುವುದು । ಜಯಾದಿಯನ್ನು ಮಾಡಿ । ಪರಿಧ್ಯಂಜನವನ್ನು ಮಾಡಿ । ಲೇಪಕಾರ್ಯವು ಇಲ್ಲ । ಪರಿಧಿ ಪ್ರಹರಣ ಮಾಡುವುದು । ಸಂಸ್ರಾವ ಹೋಮವನ್ನು ಮಾಡಿ । ಅನಾಜ್ಞಾತ, ಸರ್ವಪ್ರಾಯಶ್ಚಿತ್ತ ಹೋಮಗಳನ್ನು ಮಾಡಿ, ೧೨ ಸಲ ತುಪ್ಪವನ್ನು ಸ್ರುಕ್ಕಿನಲ್ಲಿ ಹಾಕಿಕೊಂಡು ಸಪ್ತ ತೇ ಅಗ್ನೇ..... ಮಂತ್ರದಿಂದ ಹೋಮಿಸುವುದು । ಮಂಗಳಾರತಿಯನ್ನು, ಮಂತ್ರಪುಷ್ಪಾಂಜಲಿಗಳನ್ನೂ ಸಹ ಮಾಡಿ ॥

ಉಪವಿಶ್ಯ, ಉತ್ತರ ಪರಿಷೇಚನಂ, ಪ್ರಣೀತಾ ವೋಕ್ಷಣಂ, ಬ್ರಹ್ಮೋದ್ವಾಸನಂ ಚ ಕೃತ್ವಾ । ಉತ್ಥಾಯ, ಅಗ್ನೇನಯೇತ್ಯಗ್ನಿ ಪ್ರದಕ್ಷಿಣಂ ಕೃತ್ವಾ । ಸ್ವಸ್ತಿ ಶ್ರದ್ಧಾಂ..... ಇತಿ ಅಗ್ನಿಂ ಪ್ರಾರ್ಥ್ಯ । ಉಪವಿಶ್ಯ, ಪ್ರಸನ್ನಾರ್ಘ್ಯಂ ದತ್ವಾ । ಪ್ರಾಗಾದಿ ಪರಿಸ್ತರಣಂ ಉತ್ತರೇ ವಿಸೃಜ್ಯ । ಯಸ್ಯಸ್ಮೃತ್ಯೇತಿ ಕರ್ಮ ಸಮಾಪನಂ ಕೃತ್ವಾ । ಋಷೀನ್ ಉದ್ವಾಸ್ಯ, ಪ್ರಸಾದಂ ಗೃಹೀತ್ವಾ । ಪವಿತ್ರಗ್ರಂಥಿಂ ವಿಸ್ರಸ್ಯ, ಆಚಮನಂ ಕೃತ್ವಾ, ಆಸನ ವಿಧಿಂ ಕುರ್ಯುಃ ॥

ಕುಳಿತು, ಉತ್ತರ ಪರಿಷೇಚನ – ಪ್ರಣೀತಾಮೋಕ್ಷಣ – ಬ್ರಹ್ಮೋದ್ವಾಸನೆಗಳನ್ನು ಸಹ ಮಾಡಿ । ಎದ್ದು, ಅಗ್ನೇನಯ..... ಮಂತ್ರದಿಂದ ಅಗ್ನಿಪ್ರದಕ್ಷಿಣೆ ಮಾಡಿ । ಸ್ವಸ್ತಿ ಶ್ರದ್ಧಾಂ ಎಂಬ ಶ್ಲೋಕದಿಂದ ಅಗ್ನಿದೇವನನ್ನು ಪ್ರಾರ್ಥಿಸಿ । ಕುಳಿತು,

ಋಷಿಗಳಿಗೆ ಮತ್ತು ಅಗ್ನಿಗೆ ಪ್ರಸನ್ನಾರ್ಘ್ಯವನ್ನು ಸಮರ್ಪಿಸಿ । ಕುಂಡಕ್ಕೆ ಸುತ್ತಾ ಹಾಕಿರುವ ಪರಿಸ್ತರಣಗಳನ್ನು ಪೂರ್ವದಿಂದ ಕ್ರಮವಾಗಿ ತೆಗೆದು, ಕುಂಡದ ಹೊರಗೆ ಉತ್ತರಭಾಗದಲ್ಲಿ ಹಾಕುವುದು । ಕರ್ಮಸಮಾಪನೆಯನ್ನು ಮಾಡಿ । ಕಲಶ ಅಥವಾ ಕೂರ್ಚದಲ್ಲಿರುವ ಹಾಗೂ ಅಗ್ನಿಸ್ವರೂಪದಲ್ಲಿರುವ ಋಷಿಗಳನ್ನು ಮಂತ್ರದಿಂದ ಉದ್ವಾಸನೆ ಮಾಡಿ, ಪ್ರಸಾದವನ್ನು ತೆಗೆದುಕೊಂಡು । ಪವಿತ್ರದ ಗಂಟನ್ನು ತೆಗೆದು, ಆಚಮನವನ್ನು ಮಾಡಿ, ಆಸನವಿಧಿಯನ್ನು ಮಾಡುವುದು ॥

~~~~~~~~~~~~~~

ಪ್ರಾಯಶ್ಚಿತ್ತ ಪ್ರಕರಣಮ್
ಕಪರ್ದಿಕಾರಿಕಾ

೧. ಅಗ್ನಿಮುಖ ಪ್ರಾಯಶ್ಚಿತ್ತಂ

೧. ಸರ್ವಕರ್ಮಸು ಭೂತಾನಿ ಪ್ರಾಯಶ್ಚಿತ್ತಾನ್ಯತಃ ಪರಂ । ವಿಶಿಷ್ಟಾನಿ ಅನ್ಯಕರ್ಮಾಣಿ ಸ್ವತಂತ್ರಾಣಿ ತತೋ ಬಹಿಃ । ಅಪ್ರಾಯಶ್ಚಿತ್ತ ಯಜ್ಞಸ್ಯ ಭುಜ್ಯತೇ ಹ್ಯಸುರೈಃ ಫಲಂ । ಅತಸ್ತದಾಚರೇನ್ನಿತ್ಯಂ ನೀತ್ವಾ ತದ್ದೋಷ ಜನ್ಮತಃ । ಗುರೂಣಿ ಗುರು ದೋಷೇಷು ಲಘೂನಿ ಚ ಲಘುಷ್ವಪಿ । ಪ್ರಧಾನಸ್ಯಾದಿತೋ ತೇ ಚ ಪ್ರಾಕ್ ಸ್ವಿಷ್ಟಕೃತ ಏವ ಚ । ಪ್ರಾಯಶ್ಚಿತ್ತಾಹುತಿಂ ಕುರ್ಯಾತ್ ಇತ್ಥಂ ಲುಪ್ತೇಷ್ವನಾದರಃ । ಶ್ರೌತಾನ್ಯಪೀಹ ಸರ್ವತ್ರ ವಚನಾತ್ ಕುರುತೇ ಹರಃ ॥

ಎಲ್ಲಾ ಕರ್ಮಗಳಿಗೂ ಸೇರಿರುವಂತಹ (ಎಲ್ಲಾ ಕರ್ಮಗಳಲ್ಲಿ ಮಾಡುವ) ಪ್ರಾಯಶ್ಚಿತ್ತಗಳನ್ನು ವಿಶಿಷ್ಟವಾದಂತಹ ಕರ್ಮಗಳಲ್ಲಿ ಸ್ವತಂತ್ರವಾದಂತಹ
~~~~~~~~~~~~~~

ಕರ್ಮಗಳಲ್ಲಿ ಹೀಗೆ ಸಾಮಾನ್ಯವಾದ ಕರ್ಮಗಳಲ್ಲಿ ಮಾಡುವಂತಹ ಪ್ರಾಯಶ್ಚಿತ್ತಗಳನ್ನು ಹೇಳುತ್ತೇವೆ। ಲೋಪಕ್ಕೆ ಪ್ರಾಯಶ್ಚಿತ್ತ ಮಾಡದೇ ಇರುವಂತಹ ಯಜ್ಞದ ಫಲವನ್ನು ಅಸುರರು ಅನುಭವಿಸುತ್ತಾರೆ। ಆದ್ದರಿಂದ ಆ ದೋಷದಿಂದ ಉಂಟಾಗುವಂತಹ ಪಾಪವನ್ನು ಕಳೆದುಕೊಳ್ಳಲು ಪ್ರಾಯಶ್ಚಿತ್ತಗಳನ್ನು ಮಾಡಬೇಕು। ದೊಡ್ಡದೋಷಗಳಿಗೆ ದೊಡ್ಡ ಪ್ರಾಯಶ್ಚಿತ್ತ, ಸಣ್ಣ ದೋಷಗಳಿಗೆ ಸಣ್ಣ ಪ್ರಾಯಶ್ಚಿತ್ತ। ಪ್ರಧಾನಾಹುತಿಯಿಂದ ಸ್ವಿಷ್ಟಕೃತ್ ಆಗುವವರೆಗಿನ ನಡುವಿನ ಕರ್ಮದಲ್ಲಿ ಅನಾದರದಿಂದ ಲೋಪವುಂಟಾದರೆ ಈ ರೀತಿ ಪ್ರಾಯಶ್ಚಿತ್ತ ಆಹುತಿಯನ್ನು ಮಾಡಬೇಕು। ಹೀಗೆ ಶ್ರೌತ ಸ್ಮಾರ್ತ ಕರ್ಮಗಳಲ್ಲಿ ಲೋಪಕ್ಕೆ ಪ್ರಾಯಶ್ಚಿತ್ತವನ್ನು ಮಾಡಿದರೆ ಅದು ಆ ದೋಷವನ್ನು ಕಳೆಯುತ್ತದೆ ಎಂದು ವಚನವಿದೆ ॥

೨. ಗೋಮಯಾಲಿಪ್ತ ದೇಶಂ ವಾ ಖಡ್ಗಕೋ ಅಧಿತಿಷ್ಠತಿ। ಕೇಟೋವಾ ಪೀಡಕಾರೀ ಚೇತ್ ಪ್ರೋಕ್ಷೇತ್ತಮುಪಲಿಪ್ಯ ಚ। ದೇವಸ್ಯತ್ವೇತ್ಸಧಾತ್ರೀವ ದೇಶೇ ಸ್ಥಂಡಿಲಮಾಲಿಖೇತ್ । ಸ್ಥಂಡಿಲೇಚ ಕೃತೇತಂ ಚೇತ್ ಗೌರ್ವಾಶ್ವಮಧಿತಿಷ್ಠತಿ। ಪಾವನಾಂಬುಭಿರಭ್ಯುಕ್ಷ್ಯ ಜಪೇತ್ ಪೃಥಿವೀ ದೇವವತ್(ಪೃಥಿವೀ ದೇವವದಿತಿ ಪಾರ್ಥಿವ ಗ್ರಂಥಗ್ರಹಣಂ) । ಭೂಮಿರ್ಭೂಮಿಮಗಾತ್.... ಭಿದ್ಯತಾಂ ಇತಿ ಮಂತ್ರಂ ಜಪೇತ್ ॥

ಗೋಮಯದಿಂದ ತಿಕ್ಕಲ್ಪಟ್ಟಂತಹ ಆ ವೇದಿಯ ಜಾಗವನ್ನು ಖಡ್ಗಕ, ಕೇಟ ಹಾಗು ಪೀಡಕವಾದ ಕೀಟಗಳು ಆಜಾಗದಲ್ಲಿ ಬಿದ್ದರೆ, ಆ ಜಾಗವನ್ನು ನೀರಿನಿಂದ ಪ್ರೋಕ್ಷಿಸಿ ಮತ್ತೆ ಗೋಮಯದಿಂದ ತಿಕ್ಕಿ ದೇವಸ್ಯತ್ವಾ..... ಮಂತ್ರಗಳಿಂದ ಸ್ಥಂಡಿಲೋಲ್ಲೇಖನ ಮಾಡಬೇಕು। ಒಂದು ವೇಳೆ ಸ್ಥಂಡಿಲೋಲ್ಲೇಖನ ಮಾಡಿದಮೇಲೆ ಹಸು ಕುದರೆಗಳು ಅದರ ಮೇಲೆ ಕಾಲಿಟ್ಟರೆ ಪವಮಾನ ಮಂತ್ರದಿಂದ ಅಭಿಮಂತ್ರಣ ಮಾಡಿದ ನೀರನ್ನು ಪ್ರೋಕ್ಷಿಸಿ ಪೃಥಿವೀ ದೇವತೆಯಾದ ಭೂಮಿರ್ಭೂಮಿಮಗಾತ್..... ಮಂತ್ರವನ್ನು ಜಪಿಸಬೇಕು ॥

೨. ಪ್ರಣೀತಾಪಾತ್ರಭೇದನೇ ಪ್ರಾಯಶ್ಚಿತ್ತಮ್

ಪ್ರಣೀತಾಪಾತ್ರಭೇದನಶ್ಚೇತ್ ಪಾತ್ರಂ ತಮಭಿಮಂತ್ರಯೇತ್ । ಅಭಿನ್ನೋ ಘರ್ಮ ಇತ್ಯೇತತ್ ಅಘರ್ಮೇ ದೇವತಾ ಹರೇತ್ । ಪೂರಯಿತ್ವೋಪ ತಿಷ್ಠೇತ ವ್ಯಾಹೃತಿಭಿಃ ತಥಾ ಚರೇತ್ ॥

ಪ್ರಣೀತಾ ಪಾತ್ರೆಯು ಒಡೆದು ಹೋದರೆ ಆ ಪಾತ್ರೆಯನ್ನು ಅಭಿನ್ನೋ ಘರ್ಮಃ..... ಸಂಚರತಿ, ಮಂತ್ರದಿಂದ ಅಭಿಮಂತ್ರಣ ಮಾಡಬೇಕು । ಹೀಗೆ ಮಾಡಿದರೆ ಆ ದೇವತೆಯು ಆ ದೋಷವನ್ನು ಕಳೆಯುತ್ತಾಳೆ । ನಂತರ ಘರ್ಮೋ ದೇವಾನಾಗ್ಂ.... ಅಪ್ಯೇತ್, ಮಂತ್ರದಿಂದ ಬೇರೆ ಪ್ರಣೀತಾ ಪಾತ್ರೆ ತಂದು ಅದನ್ನು ನೀರಿನಿಂದ ತುಂಬಿಸಿ ವ್ಯಾಹೃತಿಯಿಂದ ಪ್ರಣೀತಾಪಾತ್ರೆಯ ಆಸಾದನ ಜಾಗದಲ್ಲಿ ಇಡಬೇಕು । ನಂತರ ಮುಂದಿನ ಕರ್ಮ ಮಾಡಬೇಕು ॥

೩. ಸ್ಥಾಲೀಭೇದೇ ಪ್ರಾಯಶ್ಚಿತ್ತಮ್

ಸ್ಥಾಲೀಭೇದೇ ಅಭಿಮಂತ್ರ್ಯ ಏತಂ ಅಭಿನ್ನೋಘರ್ಮ ಇತಿ ಋಚಾ ಚತುರ್ಗೃಹೀತಂ ಜುಹುಯಾತ್ ಇಧ್ಮೋ ವೇದಿರಿತಿ ಸೃಚಾ ಘರ್ಮೋ ದೇವಾನುಸ್ಥಾಯಿ ಸ್ಥಾಲೀಮನ್ಯಾ ಸಮಾಹರೇತ್ ॥

ಸ್ಥಾಲೀಪಾಕ ಕರ್ಮದಲ್ಲಿ(ಅನ್ನವನ್ನು ಮಾಡುವ ಪಾತ್ರೆಯು) ಸ್ಥಾಲಿಯು ಭಿನ್ನವಾದರೆ ಅಭಿನ್ನೋಘರ್ಮ... ಮಂತ್ರದಿಂದ ಅಭಿಮಂತ್ರಣ ಮಾಡಿ ಇಧ್ಮೋ ವೇದಿಃ... ಎಂಬ ಮಂತ್ರದಿಂದ ಸ್ರುಕ್ಕಿಗೆ ೪ ಸಲ ಆಜ್ಯ ಹಾಕಿಕೊಂಡು ಹೋಮಿಸಿ ನಂತರ ಘರ್ಮೋ ದೇವಾನಾಂ.... ಮಂತ್ರದಿಂದ ಘರ್ಮದೇವತೆಗಳ ಉಪಸ್ಥಾನ ಮಾಡಿ ಬೇರೇ ಸ್ಥಾಲೀ ತೆಗೆದುಕೊಂಡು ಮುಂದಿನ ಕರ್ಮ ಮಾಡಬೇಕು ॥

೪. ದರ್ಭಾಸ್ತರಣಾದಿವಿಪರ್ಯಾಸಪ್ರಾಯಶ್ಚಿತ್ತಮ್

ದರ್ಭಾಸ್ತರಣ ನಿರ್ವಾಪ ಪಾತ್ರಾಸಾದನ ಕರ್ಮಣಾಂ ಸ್ರುಕ್ ಸ್ರುವಾಭ್ಯಾಂ ಚ ನಿಷ್ಕಾಯ್ಯೆ ಸಂಮಾರ್ಗೇ ಪರಿಷೇಚನೇ ನಿಧಾನೇ ಪರಿಧೀನಾಂ ಚ ಪವಿತ್ರಾಕರಣೇ ತಥಾ । ಇಧ್ಮಾಧಾನೇ ಯಥಾಜ್ಯಸ್ಯ ಸಂಸ್ಕಾರೇ ಚ ಪ್ರಮಾದತಃ । ವಿಪರೀತ ಕ್ರಿಯಾಯಾಂ ಚ ಜುಹುಯಾತ್ ತಿಸ್ರ ಆಹುತೀಃ । ತಂತುಮತೀಶ್ಚ ಯತ್ಪಾಕ ಮನೋಜ್ಯೋತಿರಿತಿ ಋಚಾ ॥

ದರ್ಭೆಗಳನ್ನು ಹಾಕಬೇಕಾದರೆ, ಹಿಟ್ಟುಗಳನ್ನು ಹಾಕಬೇಕಾದರೆ, ಪಾತ್ರೆ ಆಸಾದನೆ ಮಾಡಬೇಕಾದರೆ, ಸ್ರುಕ್ ಸ್ರುವಗಳನ್ನು ಹಿಡಿದುಕೊಳ್ಳುವಾಗ ಇಡುವಾಗ, ಸಂಮಾರ್ಜನ ಮಾಡುವಾಗ(ಸಮಿಧ್ಯಂಜನ–ಲೇಪಕಾರ್ಯ), ಪರಿಷೇಚನದಲ್ಲಿ, ಪರಿಧಿಯನ್ನು ಇಡುವಾಗ, ಪವಿತ್ರವನ್ನು ಮಾಡದೇ ಇದ್ದರೆ, ಇಧ್ಮಾಧಾನದಲ್ಲಿ ಮತ್ತು ಆಜ್ಯ ಸಂಸ್ಕಾರದಲ್ಲಿ ಇವಿಷ್ಟೂ ಕರ್ಮಗಳಲ್ಲಿಯೂ ಪ್ರಮಾದದಿಂದ ವಿಪರೀತವಾಗಿ ಮಾಡಿದರೆ ತಂತುಂ ತನ್ವನ್....., ಯತ್ಪಾಕತ್ರಾ....., ಮನೋಜ್ಯೋತಿಃ..... ಎಂಬ ೩ ಮಂತ್ರಗಳಿಂದ ೩ ಆಹುತಿಗಳನ್ನು ಪ್ರಾಯಶ್ಚಿತ್ತರೂಪವಾಗಿ ಮಾಡಬೇಕು ॥

೫. ದರ್ವೀ ಕೂರ್ಚ ಛೇದನೇ–ನಾಶೇ ಪ್ರಾಯಶ್ಚಿತ್ತಮ್

ದರ್ವೀಕೂರ್ಚ ಪವಿತ್ರೇಧ್ಮ ಪರಿಧೀನಾಂ ಚ ಬರ್ಹಿಷಃ । ಪ್ರಸ್ತರಾದ್ಯನ್ಯ ಸಂಭಾರ ಛೇದರಾಃ ವಿನಾಶನೇ । ನಾಶೋಪಘಾಯೋಶ್ಚಾನ್ಯಃ ತಲ್ಲಿಂಗಂ ತಸ್ಯ ತಾದೃಶಮ್ । ತ್ವನ್ನೋ ಅಗ್ನೇ ಚ ಸತ್ವನ್ನಃ ತ್ವಮಗ್ನೇ ಚ ಪ್ರಜಾಪತೇ । ಚತುರ್ಭಿಃ ಜುಹುಯಾದಗ್ನೌ ಅನ್ಯಾನಾಸಾದ್ಯ ವೈ ಪುನಃ । ಹುತ್ವಾ ಅಗ್ನಯೇ ಕ್ಷಾಮವತೇ, ಇಂದ್ರಂವೋ ವಿಶ್ವತೇ ತೃಚಾ । ತತಃ ಪರಿಸ್ತೀರ್ಯ ಇಂದ್ರಾಯ ಜುಹುಯಾತ್ ಆಹುತಿಂ ಪುನಃ ॥

ದರ್ವೀ, ಕೂರ್ಚ, ಪವಿತ್ರ, ಇಧ್ಮ, ಪರಿಧಿ, ಬರ್ಹಿ(ದರ್ಭೆ), ಪ್ರಸ್ತರ, ಇನ್ನೂ ಬೇರೆ ಸಂಭಾರಗಳು ಛೇದವಾದರೆ, ಸುಟ್ಟುಹೋದರೆ, ನಾಶವಾಗಿಹೋದರೆ, ನಾಶಕ್ಕೆ ಸಮನಾದ ಬೇರೆ ಯಾವುದೇ ದೋಷಗಳಾದರೆ ತ್ವನ್ನೋ ಅಗ್ನೇ...., ಸತ್ವನ್ನೋ ಅಗ್ನೇ...., ತ್ವಮಗ್ನೇ ಅಯಾಸಿ...., ಪ್ರಜಾಪತೇ..... ಈ ೪ ಮಂತ್ರಗಳಿಂದ ೪ ಹೋಮಗಳನ್ನು ಮಾಡಿ ಬೇರೆ ಪಾತ್ರೆಗಳನ್ನು (ದರ್ವೀ, ಕೂರ್ಚ, ಪವಿತ್ರ, ಇಧ್ಮ, ಪರಿಧಿ, ಬರ್ಹಿ(ದರ್ಭೆ), ಪ್ರಸ್ತರ) ಮತ್ತೆ ಇಟ್ಟುಕೊಂಡು ಅಗ್ನಯೇ ಕ್ಷಾಮವತೇ.... ಎಂಬ ಬ್ರಾಹ್ಮಣದಲ್ಲಿರುವ ಮಂತ್ರದಿಂದ ಹೋಮಿಸಿ, ನಂತರ ಇಂದ್ರಂವೋ ವಿಶ್ವತಃ.... ಮಂತ್ರದಿಂದ ಹೋಮಿಸಿ ಮತ್ತೆ ಪರಿಸ್ತರಣ ಹಾಕಿ ಮತ್ತೆ ಇಂದ್ರಾಯ ಸ್ವಾಹಾ ಎಂದು ಹೋಮಿಸಬೇಕು ॥

೬. ಇಧ್ಮ ಪರಿಧಿದಾಹೇ ವಿಶೇಷಃ

ಇಧ್ಮೇಧ ಪರಿಧೌ ತದ್ವತ್ ಅನ್ಯೇನ ಪರಿಧಾಯ ಚ ಜುಹುಯಾದೇವ ದರ್ಭಾದಿ ಪರಿತ್ವಾಗ್ನೇ ಪುರಂ ವಯಮ್ ॥

ಇಧ್ಮ, ಪರಿಧಿಗಳು ಸುಟ್ಟರೆ ಮೇಲೆ ಹೇಳಿದ ಪ್ರಾಯಶ್ಚಿತ್ತಗಳನ್ನು ಮಾಡಿಕೊಂಡು ನಂತರ ವಿಶೇಷವಾಗಿ ಆ ಇಧ್ಮ ಪರಿಧಿಗಳ ಜಾಗದಲ್ಲಿ ಅದರಂತೆ ಇರುವ ಬೇರೆ ಕಡ್ಡಿಗಳನ್ನು ಇಟ್ಟುಕೊಂಡು ಪರಿತ್ವಾಗ್ನೇ ಪುರಂ ವಯಂ.... ಮಂತ್ರದಿಂದ ಪ್ರಾಯಶ್ಚಿತ್ತಹೋಮ ಮಾಡಿ, ನಂತರ ಮುಂದಿನ ಕರ್ಮ ಮಾಡಬೇಕು ॥

೭. ಸ್ಕನ್ನಾದಿ ಪ್ರಾಯಶ್ಚಿತ್ತಮ್

ಸ್ಕಂದನ್ನೇ ಛೇದನೇ ಕ್ಷಾಮೇ ಭೇದನೇ ಚ ವಿಪರೀತಕೇ । ನ್ಯೂನಾತಿರಿಕ್ತೇ ತದ್ವ ಚ ಉದ್ಗಾರೇ ಗಾತ್ರಭೇದನೇ । ಪವಿತ್ರನಾಶನೇ ಚೈವ ದ್ವೇತುಮಿಂದಾಹುತೀ ತಥಾ ॥

ಹವಿಸ್ಸು ಸ್ವಲ್ಪ ಬಿದ್ದರೆ, ಹವಿಸ್ಸನ್ನು ಹೋಮಿಸವಾಗ ಕತ್ತರಿಸಿದರೆ, ಹವಿಸ್ಸಿನ ಪ್ರಮಾಣವನ್ನು ಕಮ್ಮಿ ಮಾಡಿದರೆ, ಸೀಳಿದರೆ, ತಪ್ಪಾಗಿ ಹೋಮ ಮಾಡಿದರೆ, ಸಂಖ್ಯೆಯಲ್ಲಿ ಕಮ್ಮಿ ಹೆಚ್ಚು ಮಾಡಿದರೆ, ಹಾಗೆಯೇ ಹೋಮಿಸುವಾಗ ಮೈ ಮುರಿಯುವುದು, ಮಾತನಾಡುವುದು, ಆಕಳಿಸುವುದನ್ನು ಮಾಡಿದರೆ ಪವಿತ್ರಕಳೆದು ಹೋದರೆ ಯನ್ಮ ಆತ್ಮನೋ....., ಪುನರಗ್ನಿಃ.... ಎಂಬ ಈ ೨ ಮಂತ್ರಗಳಿಂದ ಮಿಂದಾಹುತಿಯನ್ನು ಕೊಡಬೇಕು ॥

೮. ಹವಿಷೇ ಮಷಕಾದಿ ಪಾತೇ ಪ್ರಾಯಶ್ಚಿತ್ತಮ್

ಮಷಕೈಃ ಮಕ್ಷಿಕಾಭಿಶ್ಚ ರೋಮಭಿಶ್ಚ ಪಿಪೀಲಿಕೈಃ । ಹವಿರ್ದುಷ್ಟಂ ತದುತ್ಸೃಜ್ಯ ಪ್ರಾಜಾಪತ್ಯಂ ಜುಹೋತಿ ಚ । ಆಭಿರ್ಗೀರ್ಭಿರಿತಿ ಭ್ರಷ್ಟೇ ಪರೇತತ್ತೇ ಕ್ಷರೇ ಸ್ವರೇ । ಸಾದಿತ ಪ್ರೋಕ್ಷಣಾನಾಂತು ವಸ್ತ್ರಾಣಾಂ ಭೇದವಾಹನೇ । ನಾಶೇ ವಿನಾಶನಾನ್ಯಾನಿ ತದ್ವದಾಶುದ್ಧ ತಂತ್ರಕೇ । ಪ್ರಾಯಶ್ಚಿತ್ತಂ ತು ಜುಹುಯಾತ್ ಏಕಾಂ ಸೋಮಾಯ ಚಾಹುತಿಂ । ದ್ರವ್ಯ ಕರ್ಮ ಹವಿರ್ಮಂತ್ರ ಸ್ಕಂದಭಂಗ ವಿಪರ್ಯಯೇ । ಭಿನ್ನಾತಿಪನ್ನ ದುಷ್ಟೇಷು ನಷ್ಟ ದಕ್ಷಕೃತೇಷು ಚ । ಮನಸ್ವತೀಂ ಅಯಾಶ್ಚಾಗ್ನೇ ಸಿತ್ಯೇತೌ ಜುಹುಯಾತ್ತಥಾ ॥

ಸೊಳ್ಳೆ, ನೊಣ, ಕೂದಲು, ಇರುವೆ ಮುಂತಾದ ಕೀಟಗಳು ಹವಿಸ್ಸಿಗೆ ಬಿದ್ದರೆ, ಆ ಹವಿಸ್ಸು ದುಷ್ಟವಾದದ್ದಾಗಿ ಅದನ್ನು ತ್ಯಜಿಸಬೇಕು । ಮತ್ತು ಪ್ರಾಜಾಪತ್ಯ ಮಂತ್ರದಿಂದ ಹೋಮಿಸಬೇಕು । ಮಂತ್ರವನ್ನು ಹೇಳುವಾಗ ವರ್ಣ–ಪದಗಳನ್ನು ತಪ್ಪಾಗಿ ಹೇಳಿದರೆ, ಸ್ವರವನ್ನು ತಪ್ಪಾಗಿ ಹೇಳಿದರೆ ಅದು ದೋಷವಾಗಿ ಅದರ ಪ್ರಾಯಶ್ಚಿತ್ತಕ್ಕೆ ಆಭಿರ್ಗೀರ್ಭಿರ್.... ಮಂತ್ರದಿಂದ ಹೋಮಿಸಬೇಕು । ಇಟ್ಟಂತಹ ಪಾತ್ರೆಗಳು, ಪ್ರೋಕ್ಷಣೆಗೆ ಯೋಗ್ಯವಾದ ವಸ್ತು ಮತ್ತು ವಸ್ತ್ರ ಮುಂತಾದವುಗಳು ಛೇದವಾದರೆ ಅಥವಾ ಹಾನಿಗೊಳಗಾದರೆ । ನಾಶವಾದರೆ ಅವು ಅಶುದ್ಧಿ ದೋಷಕರವೆಂದು ನಿರ್ಣಯಿಸಲ್ಪಟ್ಟು ಶುದ್ಧಿ ಕರ್ಮ ಮಾಡಬೇಕು (ಆಸಾದನೆ ಮಾಡಿದ ಪಾತ್ರೆಗಳು ಅಶುದ್ಧ ವಸ್ತ್ರಗಳಿಂದ ಮುಟ್ಟಲ್ಪಟ್ಟರೆ ಅದು

ನಾಶಕ್ಕೆ ಸಮ) । ಆಗ ಸೋಮ ಮಂತ್ರವಾದ ಸೋಮೋ ಧೇನುಂ.... ಎಂಬ ೧ ಮಂತ್ರದಿಂದ (೪ ವಾಕ್ಯ) ಆಹುತಿ ಕೊಡಬೇಕು ॥

ದ್ರವ್ಯ–ಕರ್ಮ–ಹವಿಸ್ಸು–ಮಂತ್ರಗಳು ಕ್ರಮವಾಗಿ ಸ್ಕಂದ–ಭಂಗ–ವಿಪರ್ಯವಾದಾಗ(ಹವಿಸ್ಸು–ಮಂತ್ರ) ದ್ರವ್ಯ ಭಿನ್ನವಾದಾಗ, ಜೀರ್ಣವಾದಾಗ, ನಾಶವಾದಾಗ, ಸುಡಲ್ಪಟ್ಟಾಗ ಅವುಗಳು ದುಷ್ಟತೆಯನ್ನು ಹೊಂದುತ್ತವೆ । ಆಗ ಮನೋಜ್ಯೋತಿಃ...., ಅಯಾಶ್ಚಾಗ್ನೇಃ.... ಎಂಬ ೨ ಮಂತ್ರಗಳಿಂದ ಹೋಮಿಸಬೇಕು । ಏಕೆಂದರೆ ಈ ಮಂತ್ರಗಳು ಅವುಗಳನ್ನು ಮತ್ತೆ ಹೋಮಕ್ಕೆ ಯೋಗ್ಯವಾಗುವಂತೆ ಮಾಡುತ್ತವೆ ॥

೯. ಅನಾದಿಷ್ಟ ಪ್ರಾಯಶ್ಚಿತ್ತಮ್

ಪ್ರಾಯಶ್ಚಿತ್ತಮನಾದಿಷ್ಟಂ ವಾರುಣಂ ತು ವಿನಿರ್ದಿಶೇತ್ ।
ಅನಾದಿಷ್ಟಾದೇವತಾಚೇತ್ ಅಗ್ನಿಮೇವ ಪ್ರಚಕ್ಷತೇ ॥

ಅನಾದಿಷ್ಟ(ಸಂಕಲ್ಪವನ್ನು ಮಾಡದೇ ಆ ನಂತರ ಹೋಮಮಾಡುವ ಸಮಯದಲ್ಲಿ ಬೇರೆ ಬೇರೆ ಹೆಚ್ಚುವರಿ ದೇವತಾ ಮಂತ್ರಗಳನ್ನು ಹೋಮ ಮಾಡುವುದು) ಹೋಮದ ಪ್ರಾಯಶ್ಚಿತ್ತಕ್ಕೆ ವರುಣನೇ ದೇವತೆಯು । ಹವಿಸ್ಸು ಅನಾದಿಷ್ಟವಾದಂತಹ ದೇವತೆಗೆ ಆದರೆ ಅದಕ್ಕೆ ಅಗ್ನಿಯೇ ದೇವತೆಯೆಂದು ಶಾಸ್ತ್ರವು ಹೇಳುತ್ತದೆ ॥

ಅನಾದಿಷ್ಟೇ ಪ್ರಾಯಶ್ಚಿತ್ತೇ ಇಮ್ಮಂ ಮೇ ವರುಣ ಇತ್ಯಾದಿ ವಾರುಣೇರ್ಜುಹುಯಾತ್ । ದೇವೇತು ಅನಾದಿಷ್ಟೇ ಅಗ್ನಯ ಇತಿ ತ್ಯಾಗಂ ಕುರ್ಯಾತ್ ॥

ಅನಾದಿಷ್ಟ ಪ್ರಾಯಶ್ಚಿತ್ತಕ್ಕೆ ವರುಣನಿಗೆ ಸಂಬಂಧಿಸಿದ (ಇಮಂ ಮೇ ವರುಣ) ಮಂತ್ರಗಳಿಂದ ಹೋಮಿಸಬೇಕು । ದೇವತೆಯು ಅನಾದಿಷ್ಟವಾದರೆ ಅಗ್ನಯ ಇದಂ ನಮಮ ಎಂದು ಉದ್ದೇಶ ತ್ಯಾಗವನ್ನು ಹೇಳಬೇಕು ॥

೧೦. ಅಗ್ನಿ ಉಪಘಾತ ಪ್ರಾಯಶ್ಚಿತ್ತಮ್

ಗೃಹ್ಯ ಪ್ರಾಯಶ್ಚಿತ್ತಂ ಸರ್ವೇಷು ಅಗ್ನಿ ಉಪಘಾತೇಷು ಪುನಸ್ತ್ವೇತಿ ಪೂರ್ಣಾಹುತಿಂ ಹುತ್ವಾ । ಅಗ್ನಿ ಉಪಘಾತೇಷು ತಥೈವ ಸಮಿಧಮಾದಧ್ಯಾತ್ ಸರ್ವತ್ರ ಸ್ತ್ರಿಯಾ ಅಪಿ ಹೋಮ ಅಭಿಗಮನಂ ಸರ್ವೇಷಾಂ ಪ್ರಾಯಶ್ಚಿತ್ತ ಹೋಮಾನಾಂ ಅಂತೇ ವ್ಯಾಹೃತೀಭಿಃ ಏಕಾಹುತಿಂ ಜುಹುಯಾತ್ ॥

ಎಲ್ಲಾ ಅಗ್ನಿ ಉಪಘಾತ ಗೃಹ್ಯ ಪ್ರಾಯಶ್ಚಿತ್ತಗಳಲ್ಲಿ ಪುನಸ್ತ್ವಾ.... ಮಂತ್ರದಿಂದ ಹೋಮ ಮಾಡಿ । ಹೊರಗೆ ಬಿದ್ದಿರುವ ಆ ಅಗ್ನಿ ಅಥವಾ ಕೆಂಡಗಳನ್ನು ಒಳಗೆ ಹಾಕಿ ನಂತರ ೧ ಸಮಿತ್ತನ್ನೂ ಹಾಕಿ ಈ ಅಗ್ನಿ ಉಪಘಾತ ಪ್ರಾಯಶ್ಚಿತ್ತಗಳಲ್ಲಿ ಹೆಂಡತಿಯೂ ಹೋಮವನ್ನು ಮಾಡಿ, ಸಮಿತ್ತನ್ನೂ ಹಾಕಬೇಕು, ಎಲ್ಲಾ ಪ್ರಾಯಶ್ಚಿತ್ತಗಳ ಕೊನೆಯಲ್ಲಿ ವ್ಯಾಹೃತಿಗಳಿಂದ(ಬಿಡಿಸಿದ) ಹೋಮ ಮಾಡಬೇಕು ॥

೧೧. ಶಮ್ಯಾ ಷಡ್ವಿಂಶತಿ ಅಂಗುಲೇತ್ಯಾಪಸ್ತಂಬಃ

ಶಮ್ಯಾಪರಿಮಿತ ದೇಶಾತ್ ಬಹಿರಾಯತನಾತ್ ಗತೇ ಅಗ್ನೌ ಪಥಿಕೃತೇ ಅಗ್ನಯೇ ಚರುಂ ನಿರ್ವಪೇತ್ । ಅಶಕ್ತಾತ್ ದ್ವಾದಶ ಗೃಹೀತೇನ ಆಜ್ಯೇನ ಸ್ರುಚಂ ಪೂರಯಿತ್ವಾ । ಅಗ್ನಯೇಪಥಿಕೃತೇ ಸ್ವಾಹೇತಿ ಪೂರ್ಣಾಹುತಿಂ ಜುಹುಯಾತ್ ಸ್ರುವಾಹುತಿಂ ವಾ ॥

೧ ಶಮ್ಯಾ (೨೬ ಅಂಗುಲ) ಅಳತೆಗಿಂತ ಹೊರಗೆ ಹಾರಿದರೆ, ಆಗ ಪಥಿಕೃತ ಅಗ್ನಿಗೆ ಚರುವಿನಿಂದ ಸ್ಥಾಲೀಪಾಕ ಮಾಡಬೇಕು । ಅದನ್ನು ಮಾಡಲು ಅಶಕ್ತನಾಗಿದ್ದರೆ ೧೨ ಸಲ ತುಪ್ಪವನ್ನು ಸ್ರುಕ್ಕಿನಲ್ಲಿ ಹಾಕಿಕೊಂಡು ಅಗ್ನಯೇ ಪಥಿಕೃತೇ ಸ್ವಾಹಾ ಎಂದು ಪೂರ್ಣಾಹುತಿ ಮಾಡಬೇಕು ॥

೧೨. ಸ್ವಿಷ್ಟಕೃತ್ ಹೋಮಾಕರಣೇ ಪ್ರಾಯಶ್ಚಿತ್ತಮ್

ಯದ್ಯಹುತ್ವಾ ಸ್ವಿಷ್ಟಕೃತಂ ಪ್ರಮಾದಾತ್ ಪರಿಷಿಂಚತಿ ತತ್ರ ವ್ಯಾಹೃತೀಭಿಶ್ಚ ಉಕ್ತಾಃ ಆಹುತೀರ್ಜುಹುಯಾತ್ ಬುಧಃ। ಪ್ರಾಯಶ್ಚಿತ್ತಾರ್ಥ ಹೋಮಾನಾಂ ಅಂತೇ ವ್ಯಾಹೃತೀಭಿಃ ಸದಾ । ಏಕಾಮಾಜ್ಯಾಹುತಿಂ ಹುತ್ವಾ ಪರಿಷೇಚನಮಾಚರೇತ್ ॥

ಪ್ರಮಾದದಿಂದ ಸ್ವಿಷ್ಟಕೃತ್ ಹೋಮ ಮಾಡದೇ ಪರಿಷೇಚನವನ್ನು ಮಾಡಿಬಿಟ್ಟರೆ, ಅದು ದೋಷವು. ಅದರ ಪ್ರಾಯಶ್ಚಿತ್ತಕ್ಕಾಗಿ ವ್ಯಾಹೃತಿಗಳಿಂದ(ಬಿಡಿಸಿದ) ಹೋಮಿಸಬೇಕು ವಿವೇಕಿಯಾದವನು । ನಂತರ ಸ್ವಿಷ್ಟಕೃತ್ ಮುಂತಾದ ಪ್ರಯೋಗವನ್ನು ಯಥಾ ಕ್ರಮವಾಗಿ ಮಾಡಿ, ಅನಾಜ್ಞಾತ ಪ್ರಾಯಶ್ಚಿತ್ತ ಹೋಮಗಳ ನಂತರ ಸಮಸ್ತ ವ್ಯಾಹೃತಿಗಳಿಂದ ೧ ಆಹುತಿಯನ್ನು ಹೋಮಿಸಿ। ನಂತರ ಸುಮ್ಮನೆ ೧ ಆಜ್ಯಾಹುತಿಯನ್ನು ಕೊಟ್ಟು ಪರಿಷೇಚನವನ್ನು ಮಾಡಿ ಕರ್ಮಸಮಾಪನೆ ಮಾಡುವುದು ॥

೧೩. ಶಕುನ ಪ್ರಾಯಶ್ಚಿತ್ತಮ್(ಕಪರ್ದಿ ಕಾರಿಕಾ)

ಗವಾಶ್ವೋ ಮಹಿಷಶ್ವಾ ಚ ಮೃಗವೇಷಾ ಚ ದಂಷ್ಟ್ರಿಣಃ । ಧಾವೇಯುರಪಸವ್ಯಂ ಚ ತತ್ಪಾದಂ ಪ್ರೋಕ್ಷ್ಯ ಮಂತ್ರಯೇತ್ । ತದ್ವಿಷ್ಣೋಮಿದಂ ಆದ್ಯೇನ ಮಂತ್ರೇಣ ಅಧ್ವನಿಜಪೇತ್ ॥

ಹಸು, ಕುದುರೆ, ಎಮ್ಮೆ, ನಾಯಿ, ಜಿಂಕೆ, ಕುರಿ ಮತ್ತು ಹಲ್ಲು ಹಾಗೆಯೇ ದಂತಗಳಿರುವ ಪ್ರಾಣಿಗಳು । ನಮ್ಮನ್ನು ಅಪ್ರದಕ್ಷಿಣೆಯಾಗಿ ಬಳಸಿ ಹೋದರೆ ಅದು ಕೆಟ್ಟ ಸೂಚನೆ ಹಾಗೂ ದೋಷವು ಹಾಗಾಗಿ ಅಪ್ರದಕ್ಷಿಣೆಯಾಗಿ ಬಳಸಿ ಹೋದ ಪ್ರಾಣಿಯ ಆ ಹೆಜ್ಜೆಗುರುತನ್ನು ನೀರಿನಿಂದ ಮಂತ್ರಪೂರ್ವಕವಾಗಿ (ಆಪೋಹಿಷ್ಠಾ....)

ಪ್ರೋಕ್ಷಿಸಬೇಕು। ನಂತರ ನಾವು ದಾರಿಯಲ್ಲಿ ಮುಂದುವರೆಯುತ್ತಾ ತದ್ವಿಷ್ಣೋಃ .... ಎಂಬ ಮಂತ್ರವನ್ನು ಜಪಿಸಬೇಕು ॥

ತತಸ್ಸೃಗಾಲೀ ವಾನರೋ ವಾಚಂ ದೀರ್ಘಮುಖೀಃ ತಥಾ। ಯದ್ವದಸ್ಯಾದಪ ಸ್ಪಲಷ್ಟಾವ ಪರಿಕಾಸೇ ಪರಿಕ್ಷವೇ ॥

ಹೆಣ್ಣು ನರಿ, ಹೆಣ್ಣು ಕೋತಿ, ಇವೇ ಮುಂತಾದವುಗಳ ದೀರ್ಘವಾದ ಧ್ವನಿಯನ್ನು ಕೇಳಿದರೆ ದೀರ್ಘಮುಖಿ ದುರ್ಹಣು..... ಎಂಬ ಮಂತ್ರದಿಂದ ಆ ಕೂಗನ್ನು ಅನುಮಂತ್ರಿಸಬೇಕು ॥

ರೌದ್ರಂ ತು ವ್ಯಾಹೃತೇ ಶಬ್ದೇ ಜುಹುಯಾತ್ತು ಜಪೇತ್ ತಥಾ। ತ್ವಮಗ್ನೇ ರುದ್ರ ಇತಿ ಇತ್ಯಾಭ್ಯಾಂ ಶಕುನಾಭಿರುತಾಂ ಗಿರಂ ॥

ದಾರಿಯಲ್ಲಿ ಶಕುನ ಪಕ್ಷಿಯೇ ಮುಂತಾದವುಗಳ ಕರ್ಕಶ, ಲಘು, ಹಾಗೂ ವಿಚಿತ್ರವಾದ ಧ್ವನಿಯನ್ನು ಕೇಳಿದರೆ ತ್ವಮಗ್ನೇ ರುದ್ರ..., ಮತ್ತು ಆವ್ಯೋರಾಜಾನಂ.... ಎಂಬ ೨ ಮಂತ್ರಗಳನ್ನು ಜಪಿಸಬೇಕು ಮತ್ತು ಹೋಮಿಸಬೇಕು। ಹೋಮ ಮಾಡಬೇಕಾದರೆ, ರುದ್ರಾಯೇದಂ ಎಂದು ಉದ್ದೇಶತ್ಯಾಗ ಹೇಳಬೇಕು ಮತ್ತು ಆ ಧ್ವನಿಯನ್ನು ದ್ವಿಪಚ್ಚತುಷ್ಪದಸ್ಮಾಕಂ..... ಎಂಬ ೩ ಮಂತ್ರಗಳಿಂದ ಅನುಮಂತ್ರಣೆ ಮಾಡಬೇಕು ॥

೧೪. ಅಗ್ನಿನಾಶ ಪ್ರಾಯಶ್ಚಿತ್ತಮ್

ಲೇಖನಾತ್ ಪೂರ್ವತೋ ಯತ್ರ ನಷ್ಟಂ ಕೃಚ್ಛ್ರಂ ಚ ಧಾರಯೇತ್ ।
ಪುನರಗ್ನಿಂ ಪ್ರತಿಷ್ಠಾಪ್ಯ ಪುನಸ್ತ್ವೇತಿ ಸಮಿಂಧನಂ ॥

ಉಲ್ಲೇಖನಕ್ಕಿಂತ ಮುಂಚೆ ಅಗ್ನಿ ನಷ್ಟವಾದರೆ, ಕೃಚ್ಛ್ರ ಮಾಡಿಕೊಂಡು ಪುನರಗ್ನಿಃ ... ಎಂಬ ಮಂತ್ರದಿಂದ ಮತ್ತು ಅಗ್ನಿ ಪ್ರತಿಷ್ಠೆ ಮಾಡಿಕೊಂಡು ಪುನಸ್ತ್ವಾದಿತ್ಯಾಃ .... ಎಂಬ ಮಂತ್ರದಿಂದ ಸಮಿಂಧನ(ಉರಿಸಬೇಕು) ಮಾಡಬೇಕು ॥

೧೫. ಆಘಾರಯೋಃ ಪ್ರಾಕ್ ವಹ್ನಿನಾಶೇ ಪ್ರಾಯಶ್ಚಿತ್ತಮ್

ಆಘಾರಯೋಃ ಪ್ರಾಕ್ ಯದಿ ವಹ್ನಿನಾಶಃ ಪುನಃ ಪ್ರತಿಷ್ಠಾ ಚ ವಿಧೇಃ ಪುರೋವತ್ । ಅಧಶ್ಚ ಯುಗ್ವ್ಯಾಹೃತಿ ಮಿಂದಕಾನನಾಜ್ಞಾತ ತ್ರಯಂ ಚಾಪಿ ಹುವೇ ಪುರಸ್ತಾತ್ ॥

ಆಘಾರ ಹೋಮಕ್ಕಿಂತ ಮುಂಚೆ ಅಗ್ನಿ ನಾಶವಾದರೆ ಹಿಂದಿನಂತೆ ಅಗ್ನಿ ಪ್ರತಿಷ್ಠಾಪನೆ ಮಾಡಿಕೊಂಡು ನಂತರ ಸಮಸ್ತ ವ್ಯಾಹೃತಿ, ಮಿಂದಾಹುತಿ, (ಯನ್ಮ ಆತ್ಮನಃ) ಮತ್ತು ಅನಾಜ್ಞಾತ ತ್ರಯಗಳಿಂದ ಹೋಮಿಸಿ, ಉದ್ದೇಶಿತ ಕರ್ಮವನ್ನು ಮುಂದುವರೆಸಬೇಕು ॥

೧೬. ಆಘಾರಹೋಮಾನಂತರಂ ಅಗ್ನಿನಾಶೇ ಪ್ರಾಯಶ್ಚಿತ್ತಮ್

ಆಘಾರಯೋಃ ಉಪರ್ಯಗ್ನಿಃ ವೇದಿ ಮಧ್ಯೇ ವಿನಶ್ಯತಿ । ಪಂಚ ಹೋತಾ ಚ ಜುಹುಯಾತ್ ಮಹಾವ್ಯಾಹೃತಿಭಿಃ ತಥಾ ॥

ಆಘಾರಹೋಮದ ನಂತರ ಅಗ್ನಿನಾಶವಾದರೆ । ಅಗ್ನಿರ್‌ಹೋತಾ.... ಎಂಬ ಪಂಚಹೋತೃ ಮಂತ್ರದಿಂದ ಹೋಮಿಸಿ, ಮಹಾವ್ಯಾಹೃತಿಗಳಿಂದ(ಬಿಡಿಸಿದ) ಹೋಮಿಸಬೇಕು ॥

೧೭. ಇಧ್ಮ ಪ್ರಕ್ಷೇಪಣಾತ್ ಪೂರ್ವಂ ಅಗ್ನಿನಾಶೇ ಪ್ರಾಯಶ್ಚಿತ್ತಮ್

ಇಧ್ಮಾಧಾನ ಕ್ರಿಯಾತ್ ಪೂರ್ವಂ ವಹ್ನೌಚೇ ನಷ್ಟತಾಯದಿ । ಪುನರಗ್ನಿ ಪ್ರತಿಷ್ಠಾ ಚ ಪುನಸ್ತ್ವೇತಿ ಸಮಿಂಧನಂ ॥

ಇಧ್ಮಾಧಾನಕ್ಕೆ ಮೊದಲು ಅಗ್ನಿಯು ನಾಶವಾದರೆ । ಪುನರಗ್ನಿಃ..... ಎಂಬ ಮಂತ್ರದಿಂದ ಮತ್ತೆ ಅಗ್ನಿ ಪ್ರತಿಷ್ಠಾಪನೆ ಮಾಡಿಕೊಂಡು ಪುನಸ್ತ್ವಾ..... ಎಂಬ ಮಂತ್ರದಿಂದ ಅಗ್ನಿಯನ್ನು ಚೆನ್ನಾಗಿ ಉರಿಸಬೇಕು ॥

೧೮. ವೈದಿಕ ಲೌಕಿಕಾಗ್ನಿ ಸಂಸರ್ಗ ಪ್ರಾಯಶ್ಚಿತ್ತಮ್

ಲೌಕಿಕ ವೈದಿಕೇ ವಾಪಿ ಸಂಸೃಷ್ಟಸ್ತು ಮಿತೋ ಭವೇತ್ । ಸ್ಥಾಲೀಪಾಕಂತು ವಿವಿಚೇಃ ಪುನಸ್ತ್ವೇತ್ಯುಪಘಾತಕೇ । ಸೃಷ್ಟಾವಗ್ನೌ ಸದಾರೂಢಃ ಅರಣ್ಯಾತ್ಮ ಸಮಿತ್ಸು ಚ । ಪೂರ್ಣಪಾತ್ರಂ ಚ ನೇಧ್ಮಂ ಚ ಬರ್ಹಿಶ್ಚಾಪಿ ವಿನಾ ಚರುಂ । ಆಜ್ಯ ಸಂಸ್ಕಾರ ಪರ್ಯಂತಂ ಅಗ್ನಿಸ್ಥಾಪನ ಪೂರ್ವಕಂ । ಚತುರ್ಗೃಹೀತಂ ಜುಹುಯಾತ್ ಮನೋಜ್ಯೋತಿರಿತಿ ತೃಷಾ ॥

ಲೌಕಿಕ ಹಾಗೂ ವೈದಿಕಾಗ್ನಿಗಳು ಸೇರಿಬಿಟ್ಟರೆ । ಅಗ್ನಯೇ ವಿವಿಚಯೇ ಎಂಬ ಸ್ಥಾಲೀಪಾಕವನ್ನು ಮಾಡಬೇಕು ಮತ್ತು ಪುನಸ್ತ್ವಾ..... ಎಂಬ ಮಂತ್ರದಿಂದ ಅಗ್ನಿ ಉಪಘಾತ ಪ್ರಾಯಶ್ಚಿತ್ತವನ್ನು ಮಾಡಬೇಕು । ಅರಣಿ, ಸಮಿತ್ತುಗಳಲ್ಲಿ ಉತ್ಪಾದನೆ ಮಾಡಿದಂತಹ, ಸದಾ ಇರುವಂತಹ ಆ ಅಗ್ನಿಯಲ್ಲಿ । ಪೂರ್ಣಪಾತ್ರೆ, ಇಧ್ಮ, ಬರ್ಹಿ ಮತ್ತು ಚರು ಇವುಗಳಿಲ್ಲದೆ । ಆಜ್ಯ ಸಂಸ್ಕಾರದ ಪರ್ಯಂತದ ವರೆಗೆ ಅಗ್ನಿಮುಖ ಪ್ರಯೋಗವನ್ನು ಮಾಡಿ । ೪ ಸಲ ತುಪ್ಪವನ್ನು ತೆಗೆದುಕೊಂಡು, ಮನೋಜ್ಯೋತಿರ್.... ಎಂಬ ಮಂತ್ರದಿಂದ ಹೋಮಿಸಬೇಕು ॥

೧೯. ವಿವಾಹ ಔಪಾಸನಾತ್ ಪೂರ್ವಂ ಅಗ್ನಿ ನಾಶೇ ಪ್ರಾಯಶ್ಚಿತ್ತಮ್

ವಿವಾಹ ಔಪಾಸನಾತ್ ಪೂರ್ವಂ ಅನಲೇ ಶಾಂತಿಮಾಗತೇ । ಯುಗ ಲಾಜಾ ನಂತರಂ ಕರ್ಮ ಕೃತ್ವಾ ಶೇಷಂ ಸಮಾಪಯೇತ್ ॥

ವಿವಾಹದಲ್ಲಿ ಸಂಜೆಯ ಔಪಾಸನಕ್ಕಿಂತ ಮೊದಲೇ ಅಗ್ನಿಯು ನಾಶವಾದರೆ । ಪುನಃ ಯುಗ. ಲಾಜಹೋಮ ಹಾಗೂ ನಂತರದ ಕರ್ಮಗಳನ್ನು ಮಾಡಿಕೊಂಡು ಉಳಿದಿರುವ ಕರ್ಮಗಳನ್ನು ಮಾಡಬೇಕು ॥

೨೦. ಚತುರ್ಥದಿನ ಮಧ್ಯೇ ಅಗ್ನಿ ಅನುಗತ ಪ್ರಾಯಶ್ಚಿತ್ತಮ್

ಉಪಾಯನಾಗ್ನೌ ಚ ವಿವಾಹ ವಹ್ನೌ ಶಾವಾನಲೇ ಸೂತಕ ಪಾವಕೇ ಚ । ಶಾಂತೇ ಹೃತೇಚೋಪ ಹೃತೇ ಚ ವಹ್ನೌ ತತಶ್ಚ ಶನ್ನೋದ್ಭಿರವೋಕ್ಷ್ಯ ಭಸ್ಮ ತತ್ಸಮಾರೋಪ್ಯ ಸಮಿಧ್ಯತೇ ಚ ಆಜುಹ್ವಾ ಉದ್ಬುಧ್ಯ ಪದತ್ರಯಶ್ಚ । ಲೋಕ್ಯಾನಲೇತಾಂ ಸಮಿಧಂ ಪ್ರಹೃತ್ಯ ದದ್ಯಾತ್ ವರಂ ಕಾಂಚನಮೇವ ಮೂಲ್ಯಂ । ತತೋಗ್ನಿಂ ಸಂಪರಿಸ್ತೀರ್ಯ ಆಜ್ಯಸ್ಯೋತ್ಪವನಂ ತತಃ । ಅಯಾಶ್ಚ ಪಂಚಹೋತಾ ಚ ಬ್ರಾಹ್ಮಣ ಏಕಹೋತಾ ದಶ । ಮನಸ್ಪತೀಂ ಚ ಮಿಂದಾ ಚ ಮಹಾವ್ಯಾಹೃತಯಸ್ತಥಾ । ಅನಂತರಂ ಅನಾಜ್ಞಾತಂ ವ್ಯಾಹೃತಿಃ ಪ್ರಣವಾದಿಕಂ । ವಾರುಣ್ಯಸ್ತಂತುಮತ್ಯಶ್ಚ ತಥಾ ತಂತ್ರಂ ಪ್ರಯೋಜಯೇತ್ ॥

ಉಪನಯನದ ಅಗ್ನಿಯು ಪಾಲಾಶ ಹೋಮಾಂತದ ವರೆಗೆ ಇರಬೇಕು, ವಿವಾಹದ ಅಗ್ನಿಯು ಶೇಷಹೋಮಾಂತದ ವರೆಗೆ ಇರಬೇಕು, ಶವದ ಅಗ್ನಿಯು ೨ನೇ ದಿನ ಸಂಚಯನಾಂತವಾಗಿ ಇರಬೇಕು, ಜಾತಕರ್ಮಾಗ್ನಿಯು ೧೦ ದಿನಗಳವರೆಗೆ ಇರಬೇಕು। ಈ ರೀತಿಯ ೪ ಅಗ್ನಿಗಳು ಈ ಮೇಲೆ ಹೇಳಿದಂತಹ ಕರ್ಮಕ್ಕಿಂತ (ದಿನಗಳಿಗಿಂತ) ಮೊದಲೇ ನಷ್ಟವಾದರೆ ಅಥವಾ ಅಪಹರಿಸಲ್ಪಟ್ಟರೆ ಅಥವಾ ರಜಸ್ವಲಾದಿಗಳಿಂದ ಮುಟ್ಟಲ್ಪಟ್ಟರೆ, ಆಗ ಶನ್ನೋದೇವೀಃ..... ಮಂತ್ರದಿಂದ ನೀರನ್ನು ಅಗ್ನಿ ಇದ್ದ ಸ್ಥಳಕ್ಕೆ ಪ್ರೋಕ್ಷಿಸಿ ಆ ಅಗ್ನಿಯ ಭಸ್ಮವನ್ನು ತೆಗೆದುಕೊಂಡು ಬಂದು ಆಜುಹ್ವಾನ....., ಉದ್ಬುಧ್ಯಸ್ವ....., ಎಂಬ ಋಕ್‌ಗಳಿಂದ ಸಮಿಂಧನಗೊಳಿಸಿ (ಉರಿಸಿ), ಆ ಅಗ್ನಿಯಲ್ಲಿ ಆ ಭಸ್ಮವನ್ನು ತಿಕ್ಕಿದ ಸಮಿತ್ತನ್ನು ಹಾಕಿ ಬ್ರಾಹ್ಮಣರಿಗೆ ಯಥಾ ಶಕ್ತಿ

ದಕ್ಷಿಣೆ ಹಾಗೂ ಗೋವುಗಳನ್ನು ಕೊಟ್ಟು ನಂತರ ಅಗ್ನಿಯನ್ನು ಪರಿಸ್ತೀರ್ಯಗೊಳಿಸಿ ಆಜ್ಯದ ಉತ್ಪವನಮಾಡಿ ಅಯಾಶ್ಚ....., ಅಗ್ನಿಹೋರ್ತಾ ಬ್ರಾಹ್ಮಣ ಏಕಹೋತಾ..... ಎಂಬ ಅನುವಾಕದ ಮಂತ್ರಗಳಿಂದ ಮತ್ತು ಮನೋಜ್ಯೋತಿಃ...., ಮಿಂದಾಹುತಿ(ಯನ್ಮ ಆತ್ಮನೋ)...., ಮಹಾವ್ಯಾಹೃತಿ(ಬಿಡಿಸಿದ)....., ನಂತರ ಅನಾಜ್ಞಾತ ಪ್ರಾಯಶ್ಚಿತ್ತ..., ಸಮಸ್ತ ವ್ಯಾಹೃತಿ..., ಪ್ರಣವ ಹೋಮಾದಿಗಳನ್ನು ಮಾಡಿ ನಂತರ ವರುಣ ದೇವತೆಗೆ ಮತ್ತು ತಂತುಮತಿ ದೇವತೆಗೆ ಸ್ಥಾಲೀಪಾಕವನ್ನು ಮಾಡಬೇಕು ॥

೨೧. ಅನ್ವಾಧಾನೇಷ್ಟಿ ಮಧ್ಯೇ ಅಗ್ನಿ ಅನುಗತ ಪ್ರಾಯಶ್ಚಿತ್ತಮ್

ಅನ್ವಾಧಾನೇಷ್ಟಿ ಮಧ್ಯೇ ಅಗ್ನಿ ಅನುಗತೌ ಅಯಾಶ್ಚಾಗ್ನೇತಿ ಮಂತ್ರೇಣ ಉಕ್ತವತ್ ಪುನಸ್ಸಂಧಾನಂ ಕೃತ್ವಾ । 'ಓಂ ಭೂರ್ಭುವಸ್ವಾಹೇತಿ' ಸಂಕಲ್ಪ ಪೂರ್ವಕಂ ಪ್ರಾಯಶ್ಚಿತ್ತಂ ಸಂಸ್ಕೃತಾಜ್ಯೇನ ಹುತ್ವಾ, ಪುನಃ ಅನ್ವಾಧಾನೇಷ್ಟಿಂ ಕುರ್ಯಾತ್ ॥

ಅನ್ವಾಧಾನ ಇಷ್ಟಿಯ ಮಧ್ಯೇ ಅಗ್ನಿ ನಾಶವಾದರೆ, ಹಿಂದೆ ಹೇಳಿದಂತೆ ಅಯಾಶ್ಚ.... ಮುಂತಾದ ಮಂತ್ರಗಳಿಂದ ಅಗ್ನಿ ಪುನಸ್ಸಂಧಾನವನ್ನು ಮಾಡಿಕೊಂಡು । ಸಮಸ್ತ ವ್ಯಾಹೃತಿಯಿಂದ ಹೋಮಿಸಿ, ಸಂಕಲ್ಪ ಪೂರ್ವಕವಾಗಿ ಸಂಸ್ಕೃತವಾದ ಆಜ್ಯದಿಂದ ಪ್ರಾಯಶ್ಚಿತ್ತ ಹೋಮಗಳನ್ನು ಮಾಡಿ, ನಂತರ ಅನ್ವಾಧಾನ ಪೂರ್ವಕವಾಗಿ ಸ್ಥಾಲೀಪಾಕವನ್ನು ಮಾಡಬೇಕು ॥

೨೨. ಔಪಾಸನಾಗ್ನಿ ದ್ವಯ ಸಂಸರ್ಗ ಪ್ರಾಯಶ್ಚಿತ್ತಮ್

ಔಪಾಸನಾಗ್ನಿದ್ವಯ ಸಂಗತಿಶ್ಚೇತ್ ಅಗ್ನಿಂ ಸಮಾರೋಪಣತೋ ವಿಭಕ್ತಿಃ ಪೂರ್ವಾಸ್ಯ ಹೋಮೇ ವಿವಿಚೇ ಚರುಸ್ಯಾತ್ ॥

೨ ಔಪಾಸನಾಗ್ನಿಗಳು ಸೇರಿದರೆ ಅದು ದೋಷವು, ಹಾಗಾಗಿ ಅಗ್ನಿ ವಿವಿಚಿಗೆ ಸ್ಥಾಲೀಪಾಕ ಮಾಡಬೇಕು (ಅಗ್ನಯೇ ವಿವಿಚಯೇ ಸ್ವಾಹಾ) ॥

೨೩. ವೈದಿಕ ಲೌಕಿಕಾಗ್ನಿ ದ್ವಯ ಸಂಸರ್ಗ ಪ್ರಾಯಶ್ಚಿತ್ತಮ್

ಯದಿ ವೈದಿಕ ಲೌಕಿಕಾಗ್ನಿ ಸಂಸರ್ಗಸ್ಯಾತ್ ಪುನಸ್ತ್ವಾದಿತ್ಯೇತಿ ಸಮಿಧಂ ಪ್ರಹೃತ್ಯ, ಅಯಾಶ್ಚೇತಿ ಜುಹುಯಾತ್ ॥

ಔಪಾಸನಾಗ್ನಿ ಮತ್ತು ಲೌಕಿಕಾಗ್ನಿಗಳು ಸೇರಿದರೆ ಅದು ದೋಷವು, ಹಾಗಾಗಿ ಪುನಸ್ತ್ವಾದಿತ್ಯಾ..... ಮಂತ್ರದಿಂದ ಸಮಿತ್ತನ್ನು ಹಾಕಿ, ಅಯಾಶ್ಚ... ಮಂತ್ರದಿಂದ ಪ್ರಾಯಶ್ಚಿತ್ತಹೋಮ ಮಾಡಬೇಕು ॥

೨೪. ಅಗ್ನಿತ್ಯಾಗ ಪ್ರಾಯಶ್ಚಿತ್ತಮ್

ಹುತಾಶನಂ ವಾಯೋ ವಿಪ್ರಃ ಪ್ರಮಾದಾತ್ ತ್ಯಜತಿ ಪ್ರಭೋ ಪ್ರಾಣಾಯಾಮ ಶತಂ ಕುರ್ಯಾತ್ ಉಪವಾಸಃ ತತಃ ಪರಂ। ತ್ರಿರಾತ್ರ ತ್ಯಾಗೇ ಪ್ರಾಣಾಯಾಮಃ ಅತ ಊರ್ಧ್ವಂ ದ್ವಾತ್ರಿಂಶತ್ ರಾತ್ರಿ ಪರ್ಯಂತಂ ಉಪವಾಸಃ । ಆಲಸ್ಯಾದಗ್ನಿತ್ಯಾಗೇ ದ್ವಾದಶಾಹಂ ಅತಿಕ್ರಮೇ ತ್ರಿರಾತ್ರಂ ಉಪವಾಸಂ ಪ್ರಾಯಶ್ಚಿತ್ತಂ ಕೃಚ್ಛ್ರಾರ್ಧಂ ವಾ ಮಾಸಾದಿಕ್ರಮೇ ದ್ವಾದಶಾಹಂ ಉಪವಾಸಂ। ಕೃಚ್ಛ್ರದ್ವಯಂ ವಾ ಸಂವತ್ಸರಾದಿ ಕ್ರಮೇ ಮಾಸೋಪವಾಸಃ ಪಯೋ ಭಕ್ಷಣಂ ವಾ । ಪಂಚ ಕೃಚ್ಛ್ರಂ ವಾ ಸಂವತ್ಸರಾತ್ ಪರಸ್ತಾತ್ ॥

ಪ್ರಮಾದದಿಂದ ಬ್ರಾಹ್ಮಣನು ಶ್ರೌತ, ಸ್ಮಾರ್ತ, ಔಪಾಸನ ಅಗ್ನಿಯನ್ನು ಬಿಟ್ಟರೆ, ಪ್ರಾಣಾಯಾಮವನ್ನು ಮತ್ತು ಉಪವಾಸವನ್ನು ಮಾಡಬೇಕು। ೩ ದಿನಗಳು ಬಿಟ್ಟರೆ,

೧೦೦ ಪ್ರಾಣಾಯಾಮ, ಅಲ್ಲಿಂದ ೧೨ ದಿನಗಳು ಬಿಟ್ಟರೆ, ೧ ಹೊತ್ತು ಅಥವಾ ೧ ದಿನ ಉಪವಾಸ । ಆಲಸ್ಯದಿಂದ ಅಗ್ನಿಯನ್ನು ೧೨ ದಿನಗಳಿಗಿಂತ ಹೆಚ್ಚು ದಿನಗಳು ಬಿಟ್ಟರೆ, ೩ ದಿನಗಳು ಉಪವಾಸ ಅಥವಾ ಅದಕ್ಕೆ ಸಮನಾದ ಕೃಚ್ಛ್ರ । ೧ ತಿಂಗಳು ಅಗ್ನಿಯನ್ನು ಬಿಟ್ಟರೆ, ೧೨ ದಿನಗಳು ಉಪವಾಸ ಅಥವಾ ೨ ಕೃಚ್ಛ್ರ । ೧ ವರ್ಷ ಅಗ್ನಿಯನ್ನು ಬಿಟ್ಟರೆ, ೧ ಮಾಸ ಕೇವಲ ಹಾಲನ್ನದ (ಹಾಲುಮಿಶ್ರಿತ ಅನ್ನ) ಊಟ ಅಥವಾ ೫ ಕೃಚ್ಛ್ರ । ೧ ವರ್ಷಕ್ಕಿಂತ ಜಾಸ್ತಿ ದಿನಗಳನ್ನು ಬಿಟ್ಟರೆ, ಕೃಚ್ಛ್ರಗಳನ್ನು ೧ ಕ್ಕೆ ೨ ಪಟ್ಟು ಹೆಚ್ಚು ಮಾಡಿಕೊಂಡು ಹೋಗಬೇಕು ॥

೨೫. ಸಮಿಧಾರೋಪಣ –

ಆತ್ಮಾರೋಪಣ ವಿಧಿಃ ಉಚ್ಯತೇ

ಆಪದ್ವಿಷಯೇ ಪಕ್ಷಾಂತರಮಾಹ । ಅಯಂತೇ ಯೋನಿಃ ಇತಿ ಮಂತ್ರೇಣ ಸಮಿಧಮೇಕಾಂ ಅಗ್ನೌ ಪ್ರತಾಪಯೇತ್ । ಅಜುಹ್ವಾನಃ, ಉದ್ಬುಧ್ಯಸ್ವಾಗ್ನೇಃ, ಇತಿ ಪೂರ್ವವತ್ ಅಗ್ನಿಧಾರಣ ಸಮಯೇ ತಾಂ ಸಮಿಧಂ ಲೌಕಿಕಾಗ್ನೌ ಆದಧ್ಯಾತ್ । ಅಥವಾ ಯಾತೇ ಅಗ್ನೇ, ಇತಿ ಮಂತ್ರೇಣ ದಕ್ಷಿಣಹಸ್ತಂ ಯಜಮಾನಃ ಪ್ರತಾಪ್ಯ, ನಾಸಾಪುಟಾಭ್ಯಾಂ ವಾ ಅನ್ಯೇನ ವಾ ಅಗ್ನಿಮಾತ್ಮನಿ ಸ್ಥಾಪಯೇತ್ । ಉಪಾವರೋಹ, ಇತಿ ಪುನಃ ಏಕಾಂ ಸಮಿಧಂ ಲೌಕಿಕಾಗ್ನೌ ಪ್ರಕ್ಷಿಪೇತ್ ಪುನಃ ಅಗ್ನಿಧಾರಣ ಸಮಯೇ । ಹೋಮಾದಿಕಂ ಸಮಾಪನಂ ಹವಿಃ ಯದ್ಭೂತಂ, ತಾವತ್ ಗಾಯತ್ರೀಂ ಜಪೇತ್ ॥

ಆಪತ್ಕಾಲದಲ್ಲಿ, ಪಕ್ಷಾಂತರದಿಂದ ಅಯಂತೇ ಯೋನಿಃ.... ಮಂತ್ರದಿಂದ ೧ ಸಮಿತ್ತನ್ನು ಔಪಾಸನಾಗ್ನಿಯಲ್ಲಿ ಕಾಯಿಸಿ, ಇಡಬೇಕು ಇದಕ್ಕೆ ಸಮಿತ್ ಸಮಾರೋಪಣ ಎನ್ನುತ್ತಾರೆ । ನಂತರ ಪುನಃ ಅಗ್ನಿಧಾರಣೆ ಮಾಡುವ ಸಮಯದಲ್ಲಿ ಆಜುಹ್ವಾನ..., ಉದ್ಬುಧ್ಯಸ್ವಾಗ್ನೇಃ... ಎಂಬ ೨ ಮಂತ್ರಗಳಿಂದ ಆ ಸಮಾರೋಪಣ ಮಾಡಿದ ಸಮಿತ್ತನ್ನು ಲೌಕಿಕಾಗ್ನಿಯಲ್ಲಿ ಹಾಕಬೇಕು । ಅಥವಾ ಯಾತೇ ಅಗ್ನೇ....

ಮಂತ್ರದಿಂದ ಯಜಮಾನನು ತನ್ನ ಬಲ ಕೈ ಹಸ್ತವನ್ನು ಔಪಾಸನಾಗ್ನಿಯಲ್ಲಿ ಕಾಯಿಸಿ, ಆ ಹಸ್ತವನ್ನು ಮೂಗು ಅಥವಾ ಬಾಯಿಯ ಹತ್ತಿರ ಇಟ್ಟುಕೊಂಡು ಉಸಿರನ್ನು ಎಳೆದುಕೊಳ್ಳುತ್ತಾ, ಆ ಅಗ್ನಿಯನ್ನು ತನ್ನಲ್ಲಿ ಸ್ಥಾಪಿಸಿಕೊಳ್ಳಬೇಕು, ಇದಕ್ಕೆ ಆತ್ಮಸಮಾರೋಪಣ ಎನ್ನುತ್ತಾರೆ। ಮತ್ತೆ ಅಗ್ನಿಯನ್ನು ಇಟ್ಟುಕೊಳ್ಳುವ ಸಮಯದಲ್ಲಿ, ಉಪಾವರೋಹ.... ಮಂತ್ರದಿಂದ ೧ ಸಮಿತ್ತನ್ನು ಲೌಕಿಕಾಗ್ನಿಯಲ್ಲಿ ಹಾಕಬೇಕು, ಹಾಗೂ ಉಸಿರನ್ನು ಎಳೆದುಕೊಳ್ಳುವ ಮೂಲಕ ತನ್ನಲ್ಲಿ ಇಟ್ಟುಕೊಂಡಿದ್ದ ಅಗ್ನಿಯನ್ನು, ಲೌಕಿಕ ಅಗ್ನಿಗೆ ಅಭಿಮುಖವಾಗಿ ಉಸಿರನ್ನು ಬಿಡುವುದರ ಮೂಲಕ ಆ ಲೌಕಿಕಾಗ್ನಿಯಲ್ಲಿ ಔಪಾಸನವನ್ನು ಆರೋಪಿಸಬೇಕು। ಹಾಗೆಯೇ ಈಗಾಗಲೇ ಹಾಕಿರುವ ಸಮಿತ್ತು ಹುತವಾಗುವವರೆಗೆ(ಬೂದಿ) ಗಾಯತ್ರೀಮಂತ್ರ ಜಪವನ್ನು ಮಾಡುತ್ತಿರಬೇಕು ॥

೨೬. ಸ್ವ ಕರ್ತೃಕ ಹೋಮ ನಿಷೇಧ ಕಾಲಃ

ಅತ್ರ ತು ಬಾಧಕಾಭಾವೇ ನ ಸ್ವಕರ್ತುಃ ಹೋಮಃ। ಆಶೌಚಾದೇತು ಪ್ರತಿನಿಧಿನಾ ಕಾರ್ಯಃ ತದುಕ್ತಂ ಬೃಹಸ್ಪತಿನಾ। ಸೂತಕೇ ಮೃತಕೇ ವಾಪಿ ಅಶಕ್ತೌ ಶ್ರಾದ್ಧ ಭೋಜನೇ। ಪ್ರವಾಸಾದಿ ನಿಮಿತ್ತೇಷು ಹಾಪಯೇನ್ನತು ಹಾವಯೇತ್ ॥

ಇಲ್ಲಿ, ಬೇರೆಯವರು ಹೋಮ ಮಾಡಬಾರದೆಂಬ ನಿಷೇಧ ಇಲ್ಲದಿರುವುದರಿಂದ, ಯಜಮಾನನು ತಾನೇ ಹೋಮ ಮಾಡಬೇಕೆಂಬುದಿಲ್ಲ । ಆಶೌಚಾದಿಗಳಲ್ಲಿ, ಪ್ರತಿನಿಧಿಯಿಂದ ಹೋಮ ಮಾಡಿಸಬೇಕೆಂದು ಬೃಹಸ್ಪತಿಗಳು ಹೇಳಿದ್ದಾರೆ। ಇನ್ನೂ ಯಾವ ಯಾವ ಕಾಲಗಳಲ್ಲಿ ಎಂದರೆ, ಸೂತಕ–ಮೃತಾಶೌಚ–ಜಾತಾಶೌಚ–ರೋಗಾದಿಗಳಿಂದ ಅಶಕ್ತನಾದಾಗ–ಶ್ರಾದ್ಧಭೋಜನ ಮಾಡಿದಾಗ–ಪ್ರವಾಸಾದಿಗಳಲ್ಲಿ, ಇಷ್ಟೂ ಸಂದರ್ಭಗಳಲ್ಲಿ ಔಪಾಸನ ಹೋಮವನ್ನು ಇನ್ನೊಬ್ಬರ ಹತ್ತಿರ ಮಾಡಿಸಬೇಕು, ತಾನು ಮಾಡಬಾರದು ॥

೨೭. ಹೋಮ ಲಕ್ಷಣಂ

ಅಂಗುಲ್ಯಗ್ರೈಃ ನ ಹೋತವ್ಯಂ ಅಕೃತ್ವಾಂಗುಲಿ ಭೇದನಂ । ಅಂಗುಲ್ಯುತ್ತರ ಪಾರ್ಶ್ವೇನ ಹೋತವ್ಯಮಿತಿವಾ ಸ್ಥಿತಿಃ ॥

ಬೆರಳುಗಳ ತುದಿಯಿಂದ ಯಾವುದೇ ಹೋಮವನ್ನೂ ಮಾಡಬಾರದು । ಕೂಡಿಸಿರುವ ಸ್ಥಿತಿಯಲ್ಲಿರುವ ಬೆರಳುಗಳ ಎಡ(ಉತ್ತರ) ಪಕ್ಕದಿಂದ ಹೋಮಿಸಬೇಕು, ಬೆರಳುಗಳನ್ನು ಬಿಡಿಸದೇ ಒಟ್ಟಾಗಿರವಂತೆ ಇಟ್ಟುಕೊಂಡು ಹೋಮಿಸಬೇಕು ॥

೨೮. ಲಾಜ ಹೋಮಃ

ಅಂಜಲ್ಯೈರ್ವಾಮ ಪಾರ್ಶ್ವೇಣ ಲಾಜಾಹೋಮೋ ವಿಧೀಯತೇ । ಅಗ್ರೇತು ವಿಧವಾ ನಾರೀ ಕೋಣೇ ಚೈವತು ಮಧ್ಯಮಂ । ನಾಚಾಗ್ರೇ ನ ಚ ಕೋಣೇ ಚ ಲಾಜಾನಾಂ ಪ್ರಕ್ಷಿಪೇತ್ತತಃ । ಲಾಜಾನಾಂ ಹೋಮ ಕಾಲೇ ಚ ಯಮೋ ಮೃತ್ಯುಶ್ಚ ತಿಷ್ಠತಿ । ದಂಪತ್ಯೋಃ ರಕ್ಷಣಾರ್ಥಾಯ ಬ್ರಹ್ಮಾಪ್ಯೇಕೋ ಬಹಿರ್ಭವೇತ್ । ಸೋಮಾಯಾಜ್ಯಾಹುತೀಃ ಪೂರ್ವಂ ಸ ಬ್ರಹ್ಮಾಗ್ನೇಃ ಪ್ರದಕ್ಷಿಣಂ । ಲಾಜಾನಾಂ ಹೋಮ ಕಾಲೇ ಚ ಬ್ರಹ್ಮಾಪ್ಯೇಕೋ ಬಹಿರ್ಭವೇತ್ ॥

ಅಂಜಲಿಗಳ ವಾಮ(ಎಡ) ಪಾರ್ಶ್ವದಿಂದ, ಲಾಜಾಹೋಮವನ್ನು ಮಾಡಬೇಕು । ಒಂದುವೇಳೆ, ಅಗ್ರದಿಂದ ಅಥವಾ ಕೋನ ಭಾಗಗಳಿಂದ ಹೋಮಿಸಿದರೆ ಆ ವಧುವಿಗೆ ವೈಧವ್ಯವು ಪ್ರಾಪ್ತವಾಗುತ್ತದೆ । ಆದ್ದರಿಂದ ಅಗ್ರದಿಂದಾಗಲೀ, ಕೋನ ಭಾಗಗಳಿಂದಾಗಲೀ ಲಾಜಾಹೋಮವನ್ನು ಮಾಡಬಾರದು । ಲಾಜಹೋಮ ಕಾಲದಲ್ಲಿ ಯಮರೂಪನಾದ ಮೃತ್ಯುವು ಇರುತ್ತಾನಾದ್ದರಿಂದ, ದಂಪತಿಗಳ ರಕ್ಷಣೆಗಾಗಿ ಬ್ರಹ್ಮನು ಹೊರಗೆ ಇರಬೇಕು । ಆದ್ದರಿಂದ ಸೋಮದೇವತೆಗೆ ತುಪ್ಪವನ್ನು

ಕೊಡುವುದಕ್ಕಿಂತ ಮುಂಚೆ, ದಂಪತಿಗಳು ಬ್ರಹ್ಮ ಸಹಿತವಾಗಿ ಪ್ರದಕ್ಷಿಣೆ ಮಾಡಬೇಕು, ಆದರೆ ಲಾಜಾಹೋಮ ಕಾಲದಲ್ಲಿ ಮಾತ್ರ ಬ್ರಹ್ಮನನ್ನು ಹೊರಗೆ ಬಿಟ್ಟುಕೊಂಡು ಪ್ರದಕ್ಷಿಣೆ ಮಾಡಬೇಕು ॥

೨೯. ಆಜ್ಯಸಂಸ್ಕಾರ ಕ್ರಮಃ

ವಿವಾಹೇ ಚೌಲ ಸೀಮಂತೇ ಸ್ವಾಧ್ಯಾಯವ್ರತ ಕರ್ಮಣಿ । ಸ್ನಾನ ಗೋದಾನ ಸಂಧಾನೇ ಆಜ್ಯ ಸಂಸ್ಕಾರಮಂತರೇ । ವಾಸ್ತುಹೋಮೇ ಚಾಗ್ರಯಣೇ ಶಾಂತಿಹೋಮೇ ವೃಷೋತ್ಸೃಜೇ । ಉಪನಯಾದಿ ಸರ್ವತ್ರ ಸ ಪರಿಸ್ತರಣಾದ್ಬಹಿಃ ॥

ವಿವಾಹ, ಚೌಲ, ಸೀಮಂತ, ಸ್ವಾಧ್ಯಾಯ(ಉಪಾಕರ್ಮ ಮತ್ತು ವ್ರತಚತುಷ್ಟಯ) । ಸ್ನಾತಕ, ಗೋದಾನ(ಮೊದಲ ಸಲ ಮಾಡಿಸುವ ಕ್ಷೌರ), ಅಗ್ನಿ ಪುನಸ್ಸಂಧಾನ, ಇವಿಷ್ಟು ಕರ್ಮಗಳಲ್ಲಿ ತುಪ್ಪದ ಸಂಸ್ಕಾರವನ್ನು ಪರಿಸ್ತರಣದ ಒಳಗೆ ಮಾಡಬೇಕು । ವಾಸ್ತುಹೋಮ, ಆಗ್ರಯಣ ಇಷ್ಟಿ, ಶಾಂತಿಹೋಮಗಳು, ವೃಷೋತ್ಸರ್ಗ, ಉಪನಯನ ಇವಿಷ್ಟು ಕರ್ಮಗಳಲ್ಲಿ ತುಪ್ಪದ ಸಂಸ್ಕಾರವನ್ನು ಪರಿಸ್ತರಣದ ಹೊರಗೆ ಮಾಡಬೇಕು ॥

೩೦. ಆಘಾರ–ಚಕ್ಷುಷೀ ಹೋಮ ವಿಚಾರಃ

ಇಧ್ಮತಂತ್ರೇ ವಿನಾ ಯತ್ರ ನಾಘಾರೌ ನಾಸ್ತಿ ಚಕ್ಷುಷೀ । ಇಧ್ಮತಂತ್ರೇಷು ಸರ್ವತ್ರ ಆಘಾರೌ ಚಕ್ಷುಷೀ ಮತೌ ॥

ಯಾವ ಯಾವ ಹೋಮಗಳಲ್ಲಿ ಇಧ್ಮವು ಇರುವುದಿಲ್ಲವೋ ಆ ಎಲ್ಲಾ ಸಂದರ್ಭಗಳಲ್ಲಿ ಆಘಾರ ಮತ್ತು ಚಕ್ಷುಷೀ ಹೋಮಗಳೂ ಇರುವುದಿಲ್ಲ । ಇಧ್ಮ ತಂತ್ರವು ಎಲ್ಲಿ ಇರುತ್ತದೋ ಅಲ್ಲೆಲ್ಲಾ ಆಘಾರ ಮತ್ತು ಚಕ್ಷುಷೀ ಹೋಮಗಳೂ ಇರುತ್ತವೆ ॥

೩೧. ಶಾಖಾರಂಭ ವಿಷಯಃ

ಏಕ ವೇದ ಏಕ ಶಾಖಾನಾಂ ಮಧ್ಯೇ ಯೋ ಅನ್ಯವ್ರತಂ ಶ್ರಯೇತ್ ।
ಶಾಖಾಂ ಸ್ವಾಂ ಸ್ವಾಂ ಪರಿತ್ಯಜ್ಯ ಶಾಖಾರಂಭಃ ಪ್ರಕೀರ್ತಿತಃ ॥

೧ ವೇದ, ೧ ಶಾಖೆಯಲ್ಲಿರುವವರ ಮಧ್ಯೇ ಯಾವನಾದರೊಬ್ಬ, ಬೇರೆ ಶಾಖೆಯ ವ್ರತಗಳನ್ನು(ಉಪನಯನಾದಿ) ಆಶ್ರಯಿಸಿದರೆ, ಅವನು ತನ್ನ ಶಾಖೆಯನ್ನು ಬಿಟ್ಟು ಬೇರೆ ಶಾಖೆಯನ್ನು ಅನುಸರಿಸಬಹುದು ॥

೩೨. ಪತ್ನೀ ಪುತ್ರ ಸ್ಥಾನ ವಿಧಿಃ

ಜಾತಕೇ ನಾಮಕೇ ಚೈವ ಹ್ಯನ್ನಪ್ರಾಶನ ಚೌಲಕೇ । ಉಪಾಯನೇ ವಿವಾಹೇ ಚ ಸೀಮಂತ ಆಧಾನ ಪುಂಸವೇ । ಕರ್ತಾ ಚ ವಾಮತಸ್ತಿಷ್ಠೇತ್ ಪತ್ನೀ ಪುತ್ರಸ್ತು ದಕ್ಷಿಣೇ । ಕನ್ಯಾದಾನೇತು ಶ್ರಾದ್ಧೇತು ಅಧ್ವರ್ಯುಃ ಸೋಮದರ್ಶನೇ । ಸ್ವಯಮುತ್ತರತಸ್ತಿಷ್ಠೇತ್ ಪತ್ನೀ ಪುತ್ರಸ್ತು ದಕ್ಷಿಣೇ ॥

ಜಾತಕರ್ಮ, ನಾಮಗ್ರಹಣ, ಅನ್ನಪ್ರಾಶನ, ಚೌಲ । ಉಪನಯನ, ವಿವಾಹ, ಸೀಮಂತ, ಅಗ್ನಿಆಧಾನ, ಪುಂಸವನ । ಈ ಸಂಸ್ಕಾರಗಳಲ್ಲಿ ಯಜಮಾನನು ಉತ್ತರಕ್ಕೆ(ಎಡ), ಹಾಗೂ ಅವನ ದಕ್ಷಿಣಕ್ಕೆ(ಬಲ) ಪತ್ನೀ, ಪುತ್ರರು ಕೂರಬೇಕು । ಹಾಗೆಯೇ ಕನ್ಯಾದಾನ, ಶ್ರಾದ್ಧ, ಸೋಮಯಾಗ ಅನುಷ್ಠಾನ ಅಥವಾ ಸೋಮಯಾಗವನ್ನು ನೋಡುವಿಕೆ, ಇವುಗಳಲ್ಲಿಯೂ ಯಜಮಾನನು ಉತ್ತರಕ್ಕೆ(ಎಡ) ಹಾಗೂ ಪತ್ನೀ, ಪುತ್ರರು ಯಜಮಾನನ ದಕ್ಷಿಣಕ್ಕೆ(ಬಲ) ಕೂರುವುದು ॥

೩೩. ದಂಪತ್ಯೋಃ ಅಸಮಕ್ಷ ಹೋಮಃ

ಅಸಮಕ್ಷಂತು ದಂಪತ್ಯೋಃ ಹೋತವ್ಯಂ ನ ಋತ್ವಿಗಾದಿನಾ । ದ್ವಯೋಃ ಅಪಿ ಅಸಮಕ್ಷಂತು ಭವೇತ್ ಹುತಂ ಅನರ್ಥಕಮ್ ॥

ಹೋಮ ಕಾಲದಲ್ಲಿ, ದಂಪತಿಗಳು (ಯಜಮಾನ ಹಾಗೂ ಪತ್ನೀ) ಹಾಜರಿಲ್ಲದಿದ್ದರೆ (ಅಸಮಕ್ಷಮದಲ್ಲಿ), ಆಗ ಋತ್ವಿಜರು ಹೋಮವನ್ನು ಮಾಡಬಾರದು । ಹಾಗೇನಾದರೂ, ದಂಪತಿಗಳ (ಯಜಮಾನ ಮತ್ತು ಪತ್ನೀ) ಅನುಪಸ್ಥಿತಿಯಲ್ಲಿ (ಅಸಮಕ್ಷಮದಲ್ಲಿ) ಹೋಮವನ್ನು ಮಾಡಿದರೆ, ಅಂತಹ ಹೋಮವು(ಆಹುತಿಗಳು) ವ್ಯರ್ಥವಾಗಿ, ಅನರ್ಥಕ್ಕೆ ಕಾರಣವಾಗುತ್ತದೆ ॥

೩೪. ಪಥಿಕೃತ ಸ್ಥಾಲೀಪಾಕಃ

ಮೂಢಾದಿನಾ ಪ್ರಮಾದಾತ್ ಪ್ರಥಮ ಪರ್ವಣಿ ಅಂತರಿತೇ ಪಥಿಕೃತ್ ಸ್ಥಾಲೀಪಾಕಂ ಕುರ್ಯಾತ್ । ತತ್ರ ಕಾರಿಕಾಃ ವಿಶ್ವಪ್ರಕಾಶಿಕಾಯಾಂ ಏವಮಾದಿ ನಿಮಿತ್ತೇನ ಏಕಸ್ಮಿನ್ ಪ್ರಥಮೇ ಗತೇ ಕುರ್ಯಾತ್ ಪಥಿಕೃತೌ ಹೋಮಂ ಇತಿ ಹೋಮವಿದೋ ವಿದುಃ । ಆದ್ಯೇತಿಪನ್ನಃ ಖಲು ಪೂರ್ಣಮಾಸ್ಯೇ ದರ್ಶೇಥವಾ ಇಷ್ಟಿಃ ಪಥಿಕೃತ್ ಸಮಾಖ್ಯಾ ಕುರ್ಯಾತ್ । ಪ್ರಯತ್ನೇನ ಸದಾ ದ್ವಿಜಾತಿಃ ಸಂವತ್ಸರೇಚ ಆದ್ಯಪಶೌ ಪ್ರಯುಕ್ತೇ ॥

ಮೌಢ್ಯಾದಿಗಳಿಂದ, ಮೊದಲನೇ ಪರ್ವಸ್ಥಾಲೀಪಾಕವು ಅತಿಕ್ರಾಂತವಾದಾಗ (ಮಾಡಲಾಗದಿದ್ದಾಗ) ಪಥಿಕೃತ್ ಸ್ಥಾಲೀಪಾಕವನ್ನು ಮಾಡಬೇಕು । ಇದರ ವಿಷಯದಲ್ಲಿ ವಿಶ್ವಪ್ರಕಾಶಿಕೆಯಲ್ಲಿ(ಗ್ರಂಥದ ಹೆಸರು) ಈ ರೀತಿ ಕಾರಿಕೆ ಇದೆ । ಪ್ರಮಾದಾದಿಗಳಿಂದ ೧ ಪರ್ವ (ದರ್ಶ (ಅಮಾವಾಸ್ಯೆ) ಅಥವಾ (ಪೂರ್ಣಮಾಸ (ಹುಣ್ಣಿಮೆ) ಸ್ಥಾಲೀಪಾಕವು ಅತಿಕ್ರಾಂತವಾದರೆ(ಮಾಡದಿದ್ದರೆ), ಪ್ರಾಯಶ್ಚಿತ್ತವಾಗಿ ಪಥಿಕೃತ್ ಹೋಮವನ್ನು ಮಾಡಬೇಕು ಎಂದು ಹೋಮವಿಧಿಗಳನ್ನು ಬಲ್ಲವರು ಹೇಳುತ್ತಾರೆ । ಹಾಗೆಯೇ ಶ್ರೌತದಲ್ಲೂ ಮೊದಲನೆಯ ಹುಣ್ಣಿಮೆ ಅಥವಾ ಅಮಾವಾಸ್ಯೆಯ ಇಷ್ಟಿಯು ಅತಿಕ್ರಾಂತವಾದರೆ, ಪಥಿಕೃತ್ ಸ್ಥಾಲೀಪಾಕವನ್ನು ಮಾಡಬೇಕು । ಷಟ್ಪಾತ್ರ ಪ್ರಯೋಗದಿಂದ ಇದನ್ನು ಮಾಡಬೇಕು । ಇದರ ಪ್ರಧಾನಾಹುತಿ ಮಂತ್ರ, ಓಂ ಅಗ್ನಯೇ ಪಥಿಕೃತೇ ಸ್ವಾಹಾ ಎಂದೂ ಸ್ವಿಷ್ಟಕೃತ್ ಮಂತ್ರವು, ಓಂ ಅಗ್ನಯೇ ಸ್ವಿಷ್ಟಕೃತೇ ಸ್ವಾಹಾ ಎಂದೂ ಆಗಿದೆ ॥

೩೫. ವಿಭ್ರಷ್ಟೇಷ್ಟಿಃ

ಗುರು ಮೂಢಾದಿಭಿರ್ದೋಷೇ ನಿಮಿತ್ತೇನ ಚ ಕೇನಚಿತ್ । ದ್ವಿತೀಯ ಪರ್ವಾತಿಕ್ರಾಂತೌ ವಿಭ್ರಷ್ಟೇಷ್ಟಿಃ ವಿಧೀಯತೇ । ಅಗ್ನಯೇ ಚ ತಥೇಂದ್ರಾಯ ಸೋಮಾಯ ಸ್ವಿಷ್ಟಕೃತ್ ಪುನಃ । ಹಾವಯೇತ್ ಇಧ್ಮತಂತ್ರೇಣ ವಿಭ್ರಷ್ಟೇಷ್ಟಿಂ ಜಯಾದಿಕಂ । ಅಂತೇ ಅಗ್ನಿಸ್ವಿಷ್ಟಕೃತ್ ಜಯಾದಿಕಾದಿ ಬ್ರಹ್ಮವಿಸರ್ಜನಾಂತಂ ಕೃತ್ವಾ । ಇತಿ ಆಗೂಕರಣಂ(ಬ್ರಾಹ್ಮಣರ ಅನುಜ್ಞೇ ಪಡೆದು, ದಂಪತಿಗಳು ಒಟ್ಟಿಗೇ ಮಾಡುವ ಕರ್ಮಕ್ಕೆ ಆಗೂಕರಣ ಎಂದು ಹೆಸರು) । ಮಮ ದ್ವಿತೀಯ ಇಷ್ಟಿ(ಸ್ಥಾಲೀಪಾಕ) ಅತಿಕ್ರಮ ದೋಷ ಪರಿಹಾರಾರ್ಥಂ ವಿಭ್ರಷ್ಟೇಷ್ಯಾಖ್ಯ ಯಕ್ಷ್ಯೇ – ಇತಿ ಸಂಕಲ್ಪ್ಯ ॥

ಗುರು ಅಸ್ತ, ಇನ್ನೂ ಬೇರೆ ದೋಷಗಳ ಕಾರಣಗಳಿಂದ ಯಜಮಾನನು ೨ ನೇ ಪರ್ವದಲ್ಲಿ ಸ್ಥಾಲೀಪಾಕವನ್ನು ಅತಿಕ್ರಾಂತ ಮಾಡಿದರೆ ಶಾಸ್ತ್ರವು ವಿಭ್ರಷ್ಟೇಷ್ಟಿಯನ್ನು ಪ್ರಾಯಶ್ಚಿತ್ತವಾಗಿ ವಿಧಿಸಿದೆ । ಅದರ ದೇವತೆಗಳು ಹೀಗೆ – ಅಗ್ನಿ, ಇಂದ್ರ, ಸೋಮ ನಂತರ ಅಗ್ನಿಸ್ವಿಷ್ಟಕೃತ್ । ಹೀಗೆ ಇಧ್ಮತಂತ್ರದಿಂದ(ಷಟ್ಪಾತ್ರ ಪ್ರಯೋಗ) ಜಯಾದಿ ಪೂರ್ವಕವಾಗಿ ವಿಭ್ರಷ್ಟೇಷ್ಟಿಯನ್ನು ಮಾಡಬೇಕು । ಷಟ್ಪಾತ್ರ ವಿಧಾನದಿಂದ ಮುಖಾಂತದ ವರೆಗೆ ಮಾಡಿ ।

ಅಗ್ನಿದೇವತೆಗೆ, ಪುರೋನುವಾಕ್ಯ ಮಂತ್ರವಾಗಿ – ಓಂ ಸ ಪ್ರತ್ನವತ್...ಭಾನುನಾ ॥ ಈ ಮಂತ್ರವನ್ನೂ, ಯಾಜ್ಯಾ ಮಂತ್ರವಾಗಿ – ಓಂ ನಿಕಾವ್ಯಾವೇಧಸಃ.... ಅಮೃತಾನಿ ವಿಶ್ವಾ ಸ್ವಾಹಾ ॥ ಈ ಮಂತ್ರವನ್ನೂ –

ಇಂದ್ರದೇವತೆಗೆ, ಪುರೋನುವಾಕ್ಯ ಮಂತ್ರವಾಗಿ – ಓಂ ಇಂದ್ರಂ ವೋ....ಕೇವಲಃ ॥ ಈ ಮಂತ್ರವನ್ನೂ, ಯಾಜ್ಯಾ ಮಂತ್ರವಾಗಿ – ಓಂ ಇಂದ್ರಂ ನರೋ.... ತನ್ನಃ ಸ್ವಾಹಾ ॥ ಈ ಮಂತ್ರವನ್ನೂ –

ಸೋಮನಿಗೆ, ಪುರೋನುವಾಕ್ಯ ಮಂತ್ರವಾಗಿ – ಓಂ ತ್ವನ್ನಃ ಸೋಮ.... ಸಖಾ ॥ ಈ ಮಂತ್ರವನ್ನೂ, ಯಾಜ್ಯಾ ಮಂತ್ರವಾಗಿ – ಓಂ ಯಾತೇ ಧಾಮಾನಿ.... ಗೃಭಾಯ ಸ್ವಾಹಾ ॥ ಈ ಮಂತ್ರವನ್ನೂ, ಹೀಗೆ ಅಗ್ನಿ–ಇಂದ್ರ–ಸೋಮ ದೇವತೆಗಳಿಗೆ ಮೇಲಿನ ಮಂತ್ರಗಳಿಂದ ಚರುವಿನಿಂದ ಆಹುತಿಗಳನ್ನು ಕೊಟ್ಟು, ನಂತರ ಅಗ್ನಿಸ್ವಿಷ್ಟಕೃತ್ತನ್ನು ಮಾಡಿ, ಆಮೇಲೆ ಜಯಾದಿಯೇ ಮೊದಲಾಗಿ, ಬ್ರಹ್ಮವಿಸರ್ಜನಾಂತದವರೆಗೆ ಯಥಾವಿಧಿಯಾಗಿ ವಿಭ್ರಷ್ಟೇಷ್ಟಿಯನ್ನು ಮಾಡಬೇಕು ॥

೩೬. ಘಟಶ್ರಾದ್ಧಂ

ಕುಲಹೀನಾಂ ಯಥೋಕ್ತಾನಾಂ ಗರ್ಭಹರ್ತ್ಯ ಪತಿತಾನಾಂ ತಥಾ ದೈವ ದ್ರೋಹಿಣಾಂ ನಾಸ್ತಿ ಸಂಸ್ಕೃತಿಃ । ನಾಶೌಚಂ ನೋದಕಂ ತಸ್ಯ ನ ಗರ್ಭಾ ಪೈತೃಮೇಧಿಕಂ ಘಟಶ್ರಾದ್ಧಂ ಪ್ರಕುರ್ವೀತ ಬಂಧುಭಿಃ ಸಹ ಧರ್ಮತಃ ॥

ಕುಲಹೀನರಾದ (ಕುಲದ ಶಾಸ್ತ್ರೀಯ ಧರ್ಮಗಳನ್ನು ಕಡೆಗಣಿಸಿದ), ಭ್ರೂಣಹತ್ಯೆ ಮಾಡಿದ, ಪಂಚ ಮಹಾಪಾತಕವನ್ನು ಮತ್ತು ಪಾತಿತ್ಯ ಕರ್ಮವನ್ನು(ಶಾಸ್ತ್ರಗಳು ಸೂಚಿಸಿ, ನಿರ್ದೇಶಿಸಿರುವ ಜೀವನ ಶೈಲಿಯನ್ನು ಆಚರಿಸದೇ ಇರುವಂತಹ ನಡವಳಿಕೆ) ಮಾಡಿದ, ದೈವದ್ರೋಹಿಯಾದವರಿಗೆ, ಷೋಡಶಸಂಸ್ಕಾರಗಳಲ್ಲಿ ಯಾವುದೂ ಇಲ್ಲಾ । ಮೃತಾಶೌಚ, ಜಾತಾಶೌಚಗಳೂ ಮತ್ತು ತರ್ಪಣಾದಿಗಳೂ ಹಾಗೂ ಗರ್ಭಾಧಾನದಿಂದ ಅಂತ್ಯಸಂಸ್ಕಾರದವರೆಗಿನ ಯಾವ ಸಂಸ್ಕಾರಗಳೂ ಅವರಿಗೆ ಇರುವುದಿಲ್ಲ । ಅಂತಹವರ ಸಂಬಂಧವನ್ನು ಬಿಡಲು, ಬಂಧುಗಳ ಜೊತೆ ಶಾಸ್ತ್ರವಿಧಿಯಂತೆ ಘಟಶ್ರಾದ್ಧವನ್ನು ಮಾಡಬೇಕು ॥

೩೭. ಸಂಸ್ಕಾರ ನಾಮಾನಿ (ಸಂಸ್ಕಾರಗಳ ಹೆಸರುಗಳು)

ಗರ್ಭಾಧಾನಂ ಪುಂಸವನಂ ಸೀಮಂತೋ ಜಾತಕರ್ಮ ಚ । ನಾಮಾನ್ನಪ್ರಾಶನಂ ಚೌಲಂ ಮೌಂಜೀ ವ್ರತಚತುಷ್ಟಯಮ್ ॥ ಗೋದಾನಾಖ್ಯಂ ಸ್ನಾತಕಂ ಚ ವಿವಾಹಾಃ ಪೈತೃಮೇಧಿಕಮ್ ಇತಿ ॥

ಗರ್ಭಾಧಾನ, ಪುಂಸವನ, ಸೀಮಂತ, ಜಾತಕರ್ಮ । ಹಾಗೆಯೇ ನಾಮಕರಣ, ಅನ್ನಪ್ರಾಶನ, ಚೌಲ, ಉಪನಯನ, ೪ ವ್ರತ ಕರ್ಮಗಳು ॥ ಗೋದಾನ(ಮುಖಕ್ಷೌರ) ಕರ್ಮ, ಸಮಾವರ್ತನ, ವಿವಾಹ, ಪಿತೃಮೇಧ(ಅಂತ್ಯೇಷ್ಟಿ) ಇವುಗಳು ೧೬ ಸಂಸ್ಕಾರಗಳು ॥

೩೮. ಲೇಪಕಾರ್ಯ – ಪ್ರಹರಣ ವಿಚಾರಃ

ವ್ರತೇಷು ಸವನೇ ಚೈವ ತಥಾಧ್ಯಯನೇ ಮಖೇ । ಪರಿಧಿ ಪ್ರಹರಣಂ ಕುರ್ಯಾತ್ ಲೇಪಕಾರ್ಯಂ ನ ಕಾರಯೇತ್ ॥

ವ್ರತ ಉಪಕ್ರಮ, ಉತ್ಸರ್ಜನ(ವ್ರತಚತುಷ್ಟಯ), ಪುಂಸವನ, ಹಾಗೆಯೇ ಅಧ್ಯಯನ(ಉಪಾಕರ್ಮ) ಗಳಲ್ಲಿ । ಪರಿಧಿಪ್ರಹರಣವು ಉಂಟು ಆದರೆ ಲೇಪಕಾರ್ಯವು ಇಲ್ಲ ॥

ಆಪಸ್ತಂಬ ಗೃಹ್ಯಸೂತ್ರಸ್ಥಿತ ವಿಶೇಷ ವಿಚಾರಃ

೧. ಅಥ ಕರ್ಮಾಣ್ಯಾಚಾರಾದ್ಯಾನಿ ಗೃಹ್ಯಂತೇ ॥

ಅನಂತರ ಆಚಾರದಿಂದ (ಆಚಾರವೆಂದರೆ, ಎಲ್ಲ ಕಾಲಗಳಲ್ಲಿಯೂ ೩ ವೇದಗಳನ್ನೂ ಬಲ್ಲವರಾದ ಶಿಷ್ಟರಿಂದ ಲೌಕಿಕ ಪ್ರಯೋಜನವಿಲ್ಲದಿದ್ದರೂ ಸಂತತವಾಗಿ ಆಚರಣೆ ಮಾಡುವಂತಹ ಮತ್ತು ತನ್ನ ಮೂಲವಾದ ವೇದದಲ್ಲಿ ಹೇಳಿರುವಂತಹದ್ದಕ್ಕೆ ಲಿಂಗ(ಗುರುತಾದ) ಭೂತವಾದ ಕರ್ಮಗಳಲ್ಲಿ ತೊಡಗುವುದೇ ಆಚಾರ) ಯಾವ ಗೃಹ್ಯ ಕರ್ಮಗಳು, ಎಂದರೆ ಯಜ್ಞ(ಶ್ರೌತ) ಕ್ಕೆ ಅಧಿಕಾರವನ್ನು ಅಥವಾ ಯೋಗ್ಯತೆಯನ್ನು ಕೊಡುವ, ಅವುಗಳನ್ನು(ಪಾಣಿಗ್ರಹಣಾದಿಗಳನ್ನು) ಶರೀರ ಸಂಸ್ಕಾರಾರ್ಥಕ್ಕಾಗಿ ಇರುವಂತಹವುಗಳನ್ನು ನಾವು ಈಗ ತಿಳಿಸಿಕೊಡುತ್ತೇವೆ ॥

೨. ಉದಗಯನೇ ಪೂರ್ವಪಕ್ಷಾಹಃ ಪುಣ್ಯಾಹೇಷು ಕಾರ್ಯಾಣಿ ॥

ಈ ಗೃಹ್ಯ ಕರ್ಮಗಳನ್ನು(ವಾಸಮಾಡುವ ಮನೆಯಲ್ಲಿ ಮಾಡುವ ಕರ್ಮಗಳು) ಉತ್ತರಾಯಣದ ಶುಕ್ಲಪಕ್ಷದ ಪುಣ್ಯಾಹಸ್ಸುಗಳಲ್ಲಿ ಅಂದರೆ ಹಗಲನ್ನು ೯ ಭಾಗಗಳಾಗಿ ಮಾಡಿದಾಗ, ಅಯುಜ ಭಾಗವಾದ – ಪ್ರಾತ, ಸಂಗವ, ಮಧ್ಯಾಹ್ನ, ಅಪರಾಹ್ನ, ಸಾಯ – ಈ ಕಾಲಗಳಲ್ಲಿ ಮಾಡಬೇಕು ॥

೩. ಪ್ರದಕ್ಷಿಣಮ್ ॥

ಮತ್ತು ಪ್ರದಕ್ಷಿಣೆಯಾಗಿ ಮಾಡಬೇಕು ಅಂದರೆ ಬಲಕ್ಕೆ ಬಿಟ್ಟುಕೊಂಡು ॥

೪. ಪುರಸ್ತಾದುದಗ್ವೋಪಕ್ರಮಃ ॥

ಹಾಗೆಯೇ ಪೂರ್ವದಿಂದಲೋ ಅಥವಾ ಉತ್ತರದಿಂದಲೋ ಆರಂಭಿಸಬೇಕು ॥

೫. ತಥಾಪವರ್ಗಃ ॥

ಹಾಗೆಯೇ ಪೂರ್ವಕ್ಕೋ ಅಥವಾ ಉತ್ತರಕ್ಕೋ ಸಮಾಪ್ತಿಗೊಳಿಸಬೇಕು ॥

೬. ಅಪರಪಕ್ಷೇ ಪಿತ್ರ್ಯಾಣಿ ॥ (ವೇದೋದಿತಾನಾಂ ನಿತ್ಯಾನಾಂ ಕರ್ಮಣಾಂ ಸಮತಿಕ್ರಮೇ । ಸ್ನಾತಕವ್ರತಲೋಪೇ ಚ ಪ್ರಾಯಶ್ಚಿತ್ತಮಭೋಜನಮ್ –ಮನು ॥ ದೈವಾತ್ಪಿತ್ರ್ಯಾಣಾಂ ಶ್ರಾದ್ಧೇ ತು ಆಶೌಚಂ ಜಾಯತೇ ಯದಿ । ಆಶೌಚೇsಥ ವ್ಯತೀತೇ ವೈ ತೇಭ್ಯಶ್ರಾದ್ಧಂ ಪ್ರದೀಯತೇ ॥)

ಅಪರ ಪಕ್ಷದಲ್ಲಿ ಪಿತೃಸಂಬಂಧ ಕಾರ್ಯಗಳನ್ನು ಮಾಡಬೇಕು ಮತ್ತು ಅಪ್ರದಕ್ಷಿಣೆಯಾಗಿ ಮಾಡಬೇಕು, ದಕ್ಷಿಣಾಗ್ರವಾಗಿ ದರ್ಭೆಗಳನ್ನು ಹಾಕಿ ಮಾಡಬೇಕು, (ವೇದದಲ್ಲಿ ಹೇಳಿರುವಂತಹ ನಿತ್ಯಕರ್ಮಗಳನ್ನು ಅತಿಕ್ರಮಿಸಿದರೆ ಹಾಗೂ ಸ್ನಾತಕವ್ರತ ಲೋಪವಾದರೆ, ಎಲ್ಲದಕ್ಕೂ ಉಪವಾಸವೇ ಪ್ರಾಯಶ್ಚಿತ್ತವು – ಮನು ॥ ಆಕಸ್ಮಿಕವಾಗಿ ಪಿತೃಶ್ರಾದ್ಧ ಕಾಲದಲ್ಲಿ ಆಶೌಚಾದಿಗಳು ಉಂಟಾದರೆ । ಅಥವಾ ಆಶೌಚದಿಂದ ಶ್ರಾದ್ಧಾದಿಗಳು ಮುಂದೂಡಲ್ಪಟ್ಟರೆ ಆ ಕರ್ಮಗಳನ್ನು ಸಂತರಮಾಡಬೇಕು॥)

೭. ಪ್ರಸವ್ಯಮ್ ॥

ಪಿತೃಕರ್ಮಗಳನ್ನು ಅಪ್ರದಕ್ಷಿಣೆಯಾಗಿ ಮಾಡಬೇಕು ॥

೮. ದಕ್ಷಿಣತೋಽಪವರ್ಗಃ ॥

ಹಾಗೆಯೇ ಪಿತೃಕಾರ್ಯಗಳನ್ನು ದಕ್ಷಿಣದ ಕಡೆಗೆ ಸಮಾಪ್ತಿಗೊಳಿಸಬೇಕು ॥

೯. ನಿಮಿತ್ತಾವೇ(ಪೇ)ಕ್ಷಾಣಿ ನೈಮಿತ್ತಿಕಾನಿ॥

ನೈಮಿತ್ತಿಕ ಕರ್ಮವಾದ ಆಗ್ರಯಣ, ಆತಿಥ್ಯ, ಸೀಮಂತ, ಮುಂತಾದವುಗಳನ್ನು ಆಯಾಯಾ ನಿಮಿತ್ತ(ಕಾಲ)ಗಳು ಬಂದಾಗ ಮಾಡಬೇಕು, ಹೀಗೆ ಮಾಡುವಾಗಲೂ ಶುಕ್ಲಪಕ್ಷಾದಿಗಳನ್ನು ಗಣನೆಗೆ ತೆಗೆದುಕೊಳ್ಳಬೇಕು. ಹೀಗೆ ಗೃಹ್ಯಕರ್ಮಗಳ ಕಾಲಗಳನ್ನು ಹೇಳಿ ಈಗ ಎಲ್ಲಾ ಗಾರ್ಹ್ಯಕರ್ಮಗಳಿಗೂ ಸಾಮಾನ್ಯವಾದ ತಂತ್ರವನ್ನು ಪ್ರಾಚ್ಯ ಉದೀಚ್ಯ ಅಂಗಸಮುದಾಯವನ್ನು ಹೇಳುತ್ತೇವೆ ॥

೧೦ ದ್ರವ ದ್ರವ್ಯಂ ಸ್ರುಕ್ ಮುಖೇನ ಪಾರ್ಶ್ವೇನ ಕಠಿಣಂ ಹವಿಃ ॥
(ಆಪಸ್ತಂಬ ಶ್ರೌತ ಸೂತ್ರಂ)

ತುಪ್ಪವೇ ಮುಂತಾದ ದ್ರವ ದ್ರವ್ಯಗಳನ್ನು ಸ್ರುಕ್ಕಿನ ಮುಖ(ಮುಂಭಾಗ) ದಿಂದಲೂ, ಚರುವೇ ಮುಂತಾದ ಘನ ದ್ರವ್ಯಗಳನ್ನು ಸ್ರುಕ್ಕಿನ ಪಾರ್ಶ್ವ(ಪಕ್ಕ) ದಿಂದಲೂ ಬೀಳುವಂತೆ ಹೋಮಿಸಬೇಕು ॥

೧೧ ಆಗ್ನೇಯಶ್ಚ ಸೌಮ್ಯಶ್ಚ ಆಜ್ಯ ಹವಿಷಾ ಆಜ್ಯ ಭಾಗೌ ಚತುರ್ಗೃಹೀತಾಭ್ಯಾಮ್ ॥ (ಆಪಸ್ತಂಬ ಶ್ರೌತ ಸೂತ್ರೇ ದರ್ಶಪೂರ್ಣ ಮಾಸ ಇಷ್ಟಿ ಪ್ರಕರಣಂ)

ಅಗ್ನಿ ಮತ್ತು ಸೋಮ ಇಬ್ಬರೂ ಆಜ್ಯವನ್ನೇ ಹವಿಸ್ಸಾಗುಳ್ಳವರು ಮತ್ತು ಆಜ್ಯಭಾಗ ಎಂಬ ಸಂಜ್ಞೆಯುಳ್ಳವರು ಹಾಗೂ ೪ ಸಲ ಅವದಾನ ಹೊಂದಿರುವವರು ॥
(ಆಪಸ್ತಂಬ ಶ್ರೌತ ಸೂತ್ರದಲ್ಲಿ ದರ್ಶಪೂರ್ಣ ಮಾಸ ಇಷ್ಟಿ ಪ್ರಕರಣ)

೧೨ ಯಥೋಪದೇಶಂ ಕಾಮ್ಯಾನಿ ಬಲಯಶ್ಚ ॥

ಯಾವ ಕಾಮ್ಯಕರ್ಮಗಳು ಯಾವ ಪ್ರಕಾರದಿಂದ ಉಪದೇಶಿಸಲ್ಪಟ್ಟಿದೆಯೋ ಅವು ಹಾಗೆಯೇ ಇರುತ್ತವೆ (ಹೋಮಮಾಡಲ್ಪಡುತ್ತವೆ), ಹಾಗೆಯೇ ಬಲಿಗಳೂ ಕೂಡ ಹೇಗೆ ಉಪದೇಶಿಸಲ್ಪಟ್ಟಿವೆಯೋ ಅವೂ ಹಾಗೆಯೇ ॥

೧೩ ಸರ್ವತ್ರ ಸ್ವಯಂ ಪ್ರಜ್ವಲಿತೇಗ್ನಾವುತ್ತರಾಭ್ಯಾಂ ಸಮಿಧಾವಾದಧ್ಯಾತ್ ॥

ಎಲ್ಲ ಕಡೆಯಲ್ಲೂ (ಕರ್ಮಗಳಲ್ಲೂ) ತಾನೇ ಪ್ರಜ್ವಲಿಸಿದಂತಹ ಅಗ್ನಿಯಲ್ಲಿ ಮುಂದೆ ಹೇಳುವಂತಹ ಋಕ್ ಗಳಿಂದ (ಉದ್ದೀಪ್ಯಸ್ವ) ಸಮಿತ್ತನ್ನು ಆಧಾನ ಮಾಡಬೇಕು , ಪ್ರಸ್ತರ ಪ್ರಹರಣದಲ್ಲಿ ಮತ್ತು 'ಆದಧಾತಿ', 'ಪ್ರಹರತಿ' ಎಂಬ ಜಾಗದಲ್ಲಿ ಸ್ವಾಹಾಕಾರ ಇಲ್ಲಾ ॥

೧೪ ಆಪನ್ಮಾ ಶ್ರೀಃ ಶ್ರೀರ್ಮಾಗಾದಿತಿ ವಾ ॥

ಉದ್ದೀಪ್ಯಸ್ವ ಎಂಬ ಋಕ್ ದ್ವಯದಲ್ಲಿ 'ಆಪನ್ಮಾ' ಎಂಬ ಯಜುರ್ ದ್ವಯವನ್ನು ವಿಕಲ್ಪವಾಗಿ ವಿಧಿಸಿದೆ ॥

೧೫ ಅರ್ಥಪ್ರಾಧ್ವಸ್ಯ ಪರಿಕ್ಷವೇ ಪರಿಕಾಸನೇ ಚಾಪ
ಉಪಸೃಶ್ಯೋತ್ತರೇಯಥಾ ಲಿಂಗಂ ಜಪೇತ್ ॥

ಪ್ರಯೋಜನವನ್ನು ಉದ್ದೇಶಿಸಿ ಹೊರಟಂತಹ ಸಮೀಪದೇಶಕ್ಕೆ ಹೋದ ಅವನಿಗೆ ಯಾವುದಾದರೂ ದುರ್ನಿಮಿತ್ತವು ಉಂಟಾಗಲಾಗಿ ಆಗ ನೀರನ್ನು ಮುಟ್ಟಿ ಅಥವಾ ಆಚಮನ ಮಾಡಿ ಮುಂದಿನ ಅನುಹವಂ ಪರಿಹವಂ ಮಂತ್ರವನ್ನು ಯಥಾಲಿಂಗವಾಗಿ ಜಪಿಸಬೇಕು ॥

೧೬ ಏವಮುತ್ತರೈರ್ಯಥಾಲಿಂಗಂ ಚಿತ್ರಿಯಂ ವನಸ್ಪತಿಂ ಶಕೃದ್ವ್ರೀತಿಂ ಸಿಗ್ವಾತಂ ಶಕೃನಿಮಿತಿ ॥

ಈ ರೀತಿಯಾಗಿ ಮುಂದಿನ ಚಿತ್ರ ವಿಚಿತ್ರವಾದದ್ದು ಹೂ ವಿಲ್ಲದೇ ಫಲವುಳ್ಳ ಮರ, ಶಕೃತ್ ಸಂತತಿ, ವಾತ(ಬಟ್ಟೆ ಗಾಳಿ), ಶಕುನಿ ಪಕ್ಷಿಯ ಕೆಟ್ಟ ಧ್ವನಿ ಇವುಗಳು

ಉಂಟಾದಾಗ ಕ್ರಮವಾಗಿ ಆರಾತ್ತೇ ಅಗ್ನಿಃ.... ಮಂತ್ರವನ್ನು ಚಿತ್ರಿಯಾ ಮತ್ತು ವನಸ್ಪತಿಗೆ ಜಪಿಸಬೇಕು, ನಮಶ್ಶಕೃತ್ಸದೇ.... ಎಂಬುದನ್ನು ಶಕೃತ್ ಸಂತತಿಗೆ, ಸಿಗಸಿನಸಿ... ಮಂತ್ರವನ್ನು ಸಿಗ್ ವಾತ (ಬಟ್ಟೆ ಗಾಳಿ) ಕ್ಕೆ ಜಪಿಸಬೇಕು, ಶಕುನಿ ಪಕ್ಷಿಯ ಶಬ್ದಕ್ಕೆ ಉದ್ಗಾತೇವ.... ಮಂತ್ರವನ್ನು ಪ್ರತಿನಸ್ಸುಮನಾಭವ ಎಂಬವರೆಗೆ ಜಪಿಸಬೇಕು ॥

ಪತಿಪತ್ನೀ ಬಾಧನ ನಿವಾರಣ ವಿಚಾರಃ

೧೭ ಉಭಯೋರ್ಹೃದಯ ಸಂಸರ್ಗೇಪ್ಸ್ಸ್ತ್ರಿರಾತ್ರಾವರಂ ಬ್ರಹ್ಮಚರ್ಯಂ ಚರಿತ್ವಾ ಸ್ಥಾಲೀಪಾಕಂ ಶ್ರಪಯಿತ್ವಾ ಅಗ್ನೇರುಪಸಮಾಧಾನಾದಿ ಆಜ್ಯಭಾಗಾಂತೇ ಅನ್ವಾರಬ್ಧಾಂಯಾಂ ಸ್ಥಾಲೀಪಾಕಾದುತ್ತರಾ ಆಹುತೀರ್ಹುತ್ವಾ ಜಯಾದಿ ಪ್ರತಿಪದ್ಯತೇ ಪರಿಷೇಚನಾಂತಂ ಕೃತ್ವಾ ತೇನ ಸರ್ಪಿಷ್ಮತಾ ಯುಗ್ಮಾನ್ ದ್ವಚವರಾನ್ ಬ್ರಾಹ್ಮಣಾನ್ ಭೋಜಯಿತ್ವಾಸಿದ್ಧಿಂ ವಾಚಯೀತ ॥

ನಂತರ ವಧೂವರರ ಹೃದಯ ಸಂಸರ್ಗವಾಗಲು (ಮನಸ್ಸು ಒಂದುಗೂಡಲು) ಇಚ್ಛಿಸುವವರು (ವಧುವಿನ ತಂದೆ, ತಾಯಿ, ಅಣ್ಣ, ತಮ್ಮ, ಮಾವಂದಿರು,.....) ೩ ರಾತ್ರಿಗೆ ಕಮ್ಮಿ ಇಲ್ಲದೇ ಬ್ರಹ್ಮಚರ್ಯವನ್ನು ಆಚರಣೆ ಮಾಡಿ ಅವನ ಔಪಾಸನದಲ್ಲಿ ಸ್ಥಾಲೀಪಾಕದ ಹವಿಸ್ಸನ್ನು ಬೇಯಿಸಿ ಆಜ್ಯಭಾಗಾಂತದವರೆಗೆ ಮಾಡಿ ಅವಳಿಂದ ಒಡಗೂಡಿ ಸ್ಥಾಲೀಪಾಕದ ಹವಿಸ್ಸನ್ನು ತೆಗೆದುಕೊಂಡು ಪ್ರಾತರಗ್ನಿಂ..... ಮುಂತಾದ ೭ ಮಂತ್ರಗಳಿಂದ ಪ್ರತಿ ಮಂತ್ರಕ್ಕೂ ಪ್ರಧಾನಾಹುತಿಗಳನ್ನು ಕೊಟ್ಟು, ಜಯಾದಿಯನ್ನು ಮಾಡಿ ನಂತರ ಸ್ವಿಷ್ಟಕೃತ್ ಮುಂತಾದ ಪ್ರಯೋಗವನ್ನು ಪಾರ್ವಣದಂತೆ(ದರ್ಶ – ಪೂರ್ಣಮಾಸ) ಸಮಾಪ್ತಿಗೊಳಿಸಿ ಹೋಮ ಮಾಡಿದ ಶೇಷವನ್ನು ತುಪ್ಪಕ್ಕೆ ಬೆರೆಸಿ ಇಬ್ಬರು ಬ್ರಾಹ್ಮಣರಿಗೆ ಕಡಿಮೆ ಇಲ್ಲದಂತೆ ಕರೆದು ಊಟಮಾಡಿಸಿ ಆ ಊಟಮಾಡಿದ ಬ್ರಾಹ್ಮಣರಿಂದ 'ಕರ್ಮಫಲ ಸಿದ್ಧಿರಸ್ತು' ಎಂದು ಸಿದ್ಧಿಯನ್ನು ಪಡೆದುಕೊಳ್ಳಬೇಕು ॥

೧೮ ಶ್ವಸ್ತಿಷ್ಯೇಣೇತಿ ತ್ರಿಸ್ಸಪ್ತೈಃ ಯವೈಃ ಪಾಠಾಂ ಪರಿಕಿರತಿ ಯದಿ ವಾರುಣ್ಯಸಿ ವರುಣಾತ್ವಾ ನಿಷ್ಕೀಣಾಮಿ ಯದಿ ಸೌಮ್ಯಸಿ ಸೋಮಾತ್ವಾ ನಿಷ್ಕೀಣಾಮೀತಿ ॥

ನಂತರ ನಾಳೆ ಪುಷ್ಯ ನಕ್ಷತ್ರವಾದಾಗ ಎಂದರೆ, ಪುನರ್ವಸು ನಕ್ಷತ್ರದಲ್ಲಿ ತಂದೆಯೇ ಮೊದಲಾದವರಿಂದ ಸಿದ್ಧಿವಾಚನಾಂತವಾಗಿ ಕರ್ಮ ಮಾಡಲಾಗಿ ನಂತರ ವಧುವು ಯಾವ ಭೂಮಿಯಲ್ಲಿ ಇರುತ್ತಾಳೋ ಅಲ್ಲಿಗೆ ಹೋಗಿ ಆ ಸ್ಥಳವನ್ನು ೨೧ ಸಲ ಯವವನ್ನು (ಜವೇ ಗೋಧಿ) ಯದಿವಾರುಣ್ಯಸಿ ೨ ಮಂತ್ರಗಳಿಂದ ಸುತ್ತಲೂ ಹರಡುತ್ತಾರೆ ॥

೧೯. ಶ್ವೋಭೂತ ಉತ್ತರಯಾ ಉತ್ಥಾಪ್ಯ ಉತ್ತರಾಭಿಃ ತಿಸೃಭಿಃ ಅಭಿಮಂತ್ರ್ಯ ಉತ್ತರಯಾ ಪ್ರತಿಚ್ಛನ್ನಾಂ ಹಸ್ತಯೋರಾಬಧ್ಯ ಶಯ್ಯಾಕಾಲೇ ಬಾಹುಭ್ಯಾಂ ಭರ್ತಾರಂ ಪರಿಗೃಹ್ಣೀಯಾತ್ ಉಪಧಾನಲಿಂಗಯಾ ॥

ಮರುದಿನ ಆ ಸ್ಥಳವನ್ನು ಇಮಾಂಖನಾಮಿ.... ಮಂತ್ರದಿಂದ ಅಗೆದು, ಉತ್ತಾನಪರ್ಣೇ ಎಂಬ ೩ ಮಂತ್ರಗಳಿಂದ ಅದರ ಮೂಲವನ್ನು ೨ ಭಾಗವಾಗಿ ತುಂಡುಮಾಡಿ ಗಂಡನಿಗೆ ಕಾಣದಂತೆ ಉಪಾಯದಿಂದ ಅಹಮಸ್ಮಿ ಸಹಮಾನಾ.... ಮಂತ್ರದಿಂದ ತನ್ನ ಕೈಗೆ ಕಟ್ಟಿಕೊಂಡು ರಾತ್ರಿ ಮಲಗುವ ಸಮಯದಲ್ಲಿ ಉಪತೇಧಾಂ.... ಮಂತ್ರದಿಂದ ೨ ಕೈಗಳಿಂದಲೂ ಗಂಡನನ್ನು ಬಿಗಿಯಾಗಿ ಆಲಂಗಿಸಬೇಕು ॥

೨೦ ವಶ್ಯೋ ಭವತಿ ॥

ಈ ರೀತಿ ಮಾಡಿದರೆ ಗಂಡನು ತನ್ನ ವಶನಾಗುತ್ತಾನೆ ॥

೨೧ ಸಪತ್ನೀಬಾಧನಂ ಚ ॥

ತನ್ನ ಹೆಂಡತಿಯಿಂದ ಗಂಡನಿಗೆ ತೊಂದರೆಯುಂಟಾದಾಗಲೂ ಗಂಡನೂ ಇದೇ ಕ್ರಮವನ್ನೇ ಅನುಸರಿಸುವುದು ॥

೨೨ ಏತೇನೈವ ಕಾಮೇನೋತ್ತರೇಣಾನುವಾಕೇನ ಸದಾದಿತ್ಯಮುಪತಿಷ್ಠತೇ ॥

ಸಪತ್ನೀಬಾಧನಕ್ಕೆ ವಧುವು ಉದಸೌ ಸೂರ್ಯೋಽಗಾತ್.... ಎಂಬ ಅನುವಾಕವನ್ನು ಊಟಮಾಡುವುದಕ್ಕೆ ಮೊದಲು ಹಗಲಿನಲ್ಲಿ ಹೇಳಿ ಆದಿತ್ಯನ ಉಪಸ್ಥಾನ ಮಾಡಬೇಕು ॥

ಕ್ಷಯ ಕುಷ್ಠಾದಿ ರೋಗ ನಿವಾರಣ ವಿಚಾರಃ

೨೩ ಯಕ್ಷ್ಮಗೃಹೀತಾಮನ್ಯಾಂವಾಬ್ರಹ್ಮಚರ್ಯಯುಕ್ತಃ ಪುಷ್ಕರಸಂವರ್ತ ಮೂಲೈರುತ್ತರೈರ್ಯಥಾಲಿಂಗಮಂಗಾನಿ ಸಂಮೃಶ್ಯ ಪ್ರತೀಚೀನಂ ನಿರಸ್ಯೇತ್ ॥

ತನ್ನ ವಧುವು ಕ್ಷಯ ಅಥವಾ ಕುಷ್ಠಾದಿ ರೋಗಗಳಿಂದ ಕೂಡಿದ್ದರೆ ಅವಳಿಗೆ ಹಿತವನ್ನು ಬಯಸುವವನು ಹಿಂದೆ ಹೇಳಿದ ಲಕ್ಷಣದಲ್ಲಿ ಬ್ರಹ್ಮಚರ್ಯದಿಂದ ಕೂಡಿದವನಾಗಿ ಕಮಲದ ಹೂವಿನ ದಳ ಮತ್ತು ಮೂಲಗಳಿಂದ, ಅಕ್ಷೀಭ್ಯಾಂತೇ.... ಮಂತ್ರದಿಂದ ಪ್ರತಿಮಂತ್ರಕ್ಕೂ ವಧುವಿನ ಅಂಗವನ್ನು ಮುಟ್ಟಿಸಿ ಪಶ್ಚಿಮ ದಿಕ್ಕಿಗೆ ಎಸೆಯಬೇಕು, ಈ ರೀತಿಯ ಚಿಕಿತ್ಸೆಯಿಂದ ಅವಳು ಆರೋಗ್ಯವಾಗುತ್ತಾಳೆ ॥

೨೪ ವಧೂವಾಸ ಉತ್ತರಾಭಿರೇತದ್ವಿದೇ ದದ್ಯಾತ್ ॥

ನಂತರ ವಧುವಿನ ಬಟ್ಟೆಯನ್ನು ಪರಾದೇಹಿ... ಎಂಬ ಮಂತ್ರದಿಂದ, ಈ ಮಂತ್ರದ ಅರ್ಥವನ್ನು ಮತ್ತು ಈ ಕರ್ಮವನ್ನು ತಿಳಿದಿರುವ ವ್ಯಕ್ತಿಗೆ ಕೊಡಬೇಕು ॥

ಶೀಘ್ರ–ಸುಲಭ ಪ್ರಸವ ವಿಚಾರಃ

೨೫ ಕ್ಷಿಪ್ರಂ ಸುವನಮ್ ॥

ಪ್ರಸವವು ಸುಲಭವಾಗಿ ಶೀಘ್ರವಾಗಿ, ಬಹಳ ಕಾಲ ಕಷ್ಟಕೊಡದೇ ಆಗುವುದಕ್ಕಾಗಿ ಕ್ಷಿಪ್ರಂ ಸುವನಂ ಎಂಬ ಕರ್ಮವನ್ನು ಋಷಿಗಳು ಉಪದೇಶ ಮಾಡಿದ್ದಾರೆ ॥

೨೬ ಅನಾಪ್ರೀತೇನ ಶರಾವೇಣಾನುಸ್ರೋತಸಮುದಕಂ ಆಹೃತ್ಯ ಪತ್ತಸ್ಯೂರ್ಯಂತೀಂ ನಿಧಾಯ ಮೂರ್ಧನ್ ಶೋಷ್ಯಂತೀಂ ಉತ್ತರೇಣ ಯಜುಷಾಭಿಮೃಶ್ಯೈತಾಭಿಃ ಅದ್ಭಿಃ ಉತ್ತರಾಭಿಃಅವೋಕ್ಷೇತ್ ॥
(ವಾಚ್ಯವಾಚಕಭ ವೋ ಹಿ ನಾಚಾರ್ಯೈರುಪದಿಶ್ಯತೇ । ಅನ್ಯಥಾನುಪಪಚ್ಯಾ ತು ವ್ಯವಹಾರಾತ್ಸಗಭ್ಯತೇ ॥)

ಒಂದು ಸಲವೂ ನೀರನ್ನು ತರದೇ ಇರುವಂತಹ ಪಾತ್ರೆಯಿಂದ ನೀರನ್ನು ತರಬೇಕು, (ಯಾವ ದಿಕ್ಕಿಗೆ ನೀರು ಹರಿಯುತ್ತದೋ ಅದಕ್ಕೆ ಅನುಗುಣವಾಗಿಯೇ ನೀರನ್ನು ತುಂಬಿಸಿಕೊಂಡು ತರಬೇಕು) ಗರ್ಭವತಿಯಾಗಿರುವ ಅವಳ ಕಾಲಿಗೆ ಯಾವ ಸಸ್ಯಗಳು ಒಣಗುವ ಕಾಲದಲ್ಲಿ ಕೆಂಪಾದಂತಹ ಹೂಗಳನ್ನು(ಉದಾ– ಅಗ್ನಿಶಿಖಾ(ಅಧಃಪುಷ್ಪಿತಾಂ) ... ಮುಂತಾದ ಹೂಗಳು) ಬಿಡುತ್ತವೆಯೋ ಅಂತಹ ಹೂಗಳನ್ನು ಆ ಸಸ್ಯದ ಜೊತೆ ಇಟ್ಟು ಪ್ರಸವ ಪೀಡೆಯಿಂದ ಬಳಲಿರುವ ಆ ಸ್ತ್ರೀಯ ತಲೆಯನ್ನು ಹಿಡಿದುಕೊಂಡು ಆಭಿಷ್ಟ್ವಹಂ... ಎಂಬ ೧೦ ಮಂತ್ರಗಳನ್ನು ಜಪಿಸಿ ತಂದಿರುವ ಈ ನೀರಿನಿಂದ ಮುಂದಿನ ಯಥ್ಸೈವ ಸೋಮಃ ಪವತೇ... ಎಂಬ ೩ ಮಂತ್ರಗಳಿಂದ ೧ ಸಲ ಸ್ನಾನ ಮಾಡಿಸಬೇಕು, ಕೆಲವರು ಪ್ರತಿಮಂತ್ರದಿಂದಲೂ ಸ್ನಾನ ಮಾಡಿಸಬೇಕು ಎನ್ನುತ್ತಾರೆ ॥

೨೭ ಯದಿ ಜರಾಯು ನ ಪತೇದೇವಂ ವಿಹಿತಾಭಿಃ ಏವಾದ್ಭಿಃ ಉತ್ತರಾಭ್ಯಾಂ ಅವೋಕ್ಷೇತ್ ॥

ಒಂದು ವೇಳೆ ಪ್ರಸವವಾದ ಮೇಲೆ ಆ ಗರ್ಭದ ಕಸವು ಬೀಳದಿದ್ದರೆ ಆಗ ಅನಾಪ್ರೀತೇನ ಶರಾವೇಣ ಎಂಬ ಮುಂತಾದ ಹಿಂದಿನ ಸೂತ್ರದಲ್ಲಿ ಹೇಳಿದಂತೆ ತಂದ ಆ ನೀರಿನಿಂದಲೇ ಐತುಗರ್ಭೋ ಅಕ್ಟಿತಃ.... ಎಂಬ ೨ ಮಂತ್ರಗಳಿಂದ ಸ್ನಾನ ಮಾಡಿಸಬೇಕು ॥

ಗೋದಾನ ವಿಚಾರಃ

೨೮ ಅಗ್ನಿಗೋದಾನೋ ವಾ ಸ್ಯಾತ್ ॥

ಅಗ್ನಿ ದೇವತೆಗೋಸ್ಕರವಾಗಿ ಯಾವ ಬ್ರಹ್ಮಚಾರಿಯು ಗೋದಾನ(ಮುಖ ಕ್ಷೌರ)ವನ್ನು ಮಾಡಿಕೊಳ್ಳುತ್ತಾನೋ ಅದಕ್ಕೆ ಅಗ್ನಿಗೋದಾನ ಎಂದು ಹೆಸರು, ಇದನ್ನು ಕೆಲವರು ಮಾಡಿಕೊಳ್ಳುತ್ತಾರೆ. ಈ ಕ್ರಮದಲ್ಲಿ ಮಾಡಿಕೊಳ್ಳುವವರು – ಆಜ್ಯಭಾಗಾಂತ ಪ್ರಯೋಗಮಾಡಿ, ಅಗ್ನಯೇ ಕಾಂಡ ಋಷಯೇ ಸ್ವಾಹಾ ಎಂದು ಒಂದೇ ಪ್ರಧಾನ ಆಹುತಿಯನ್ನು ಆಜ್ಯದಿಂದ ಮಾಡಿ, ಜಯಾದಿಯೇ ಮೊದಲಾದ ಪ್ರಯೋಗಗಳನ್ನು ಮಾಡಿ, ಕತ್ತಿಯನ್ನು ತೊಳೆಯುವವರೆಗಿನ ಕ್ರಿಯೆಗಳನ್ನು ಮಾಡಬೇಕು ॥

೨೯ ಸಂವತ್ಸರಂ ಗೋದಾನವ್ರತಮೇಕ ಉಪದಿಶಂತಿ ॥

ವೇದವನ್ನು ಅಧ್ಯಯನ ಮಾಡಿದಮೇಲೂ ಪ್ರತಿ ವರ್ಷ ಗೋದಾನ(ಮುಖ ಕ್ಷೌರ) ವ್ರತವನ್ನು ಮಾಡಬೇಕೆಂದು ಕೆಲವರು ಹೇಳುತ್ತಾರೆ ॥

೩೦ ಏತಾವನ್ನಾನಾ ಸರ್ವಾನ್ ಕೇಶಾನ್ವಾಪಯತೇ ॥

ಈಗ ಗೋದಾನಗಳಿಗೂ, ಚೌಲಕ್ಕೂ ವ್ಯತ್ಯಾಸ ಹೇಳುತ್ತಾರೆ, ಗೋದಾನಗಳಲ್ಲಿ ಆಚಾರ್ಯರೇ ಗೋದಾನ ಮಾಡುವುದು, ಅದಕ್ಕೆ ದಕ್ಷಿಣೆಯನ್ನು ಶಿಷ್ಯರು ಕೊಡಬೇಕು, ಶಿಖೆಸಹಿತ ವಪನ–ಶಲಲೀ ಮುಂತಾದವು ಇಲ್ಲ,ಇವೇ ಈ ವ್ಯತ್ಯಾಸಗಳು ॥

೩೧ ಉದಕೋಪಸ್ಪರ್ಶನಮಿತಿ ಛಂದೋಗಾಃ ॥

ಪ್ರತಿಸಂವತ್ಸರ ಗೋದಾನವ್ರತ ಮಾಡುವ ಪಕ್ಷದಲ್ಲಿ ಪ್ರತಿದಿನವೂ ನದೀಸ್ನಾನವನ್ನು ಸಾಮಗರು ಉಪದೇಶಮಾಡಿದ್ದಾರೆ ॥

ವಧೂ ಉಪವೇಶನಂ

(ದಂಪತಿಗಳಲ್ಲಿ ಪತ್ನಿಯು ಕೂರುವ ವಿಚಾರ)

೩೨ ಪುಣ್ಯಾಹವಾಚನೇ ಚೈವ ಸಂಕಲ್ಪೇಷು ತಥೈವಚ । ಆಶೀರ್ವಚನ ಕಾಲೇಚ ನಿತ್ಯೋಪಾಸನ ಕರ್ಮಣಿ ॥ ರಕ್ಷಾಬಂಧನ ಕಾಲೇ ಚ ಪತ್ನೀಯೋಕ್ತ್ರವಿಮೋಚನೇ । ಏತೇಷೂತ್ತರತಸ್ತಿಷ್ಠೇತ್ ವಧೂರನ್ಯತ್ರ ದಕ್ಷಿಣೇ ॥

ಪುಣ್ಯಾಹದಲ್ಲಿ, ಸಂಕಲ್ಪದಲ್ಲಿ । ಆಶೀರ್ವಾದ ಕಾಲದಲ್ಲಿ, ನಿತ್ಯೋಪಾಸನದಲ್ಲಿ । ರಕ್ಷಾಬಂಧನ ಕಾಲದಲ್ಲಿ, ಪತ್ನಿಯ ಯೋಕ್ತ್ರವಿಮೋಚನ ಕಾಲದಲ್ಲಿ । ವಧುವು ವರನಿಂದ ಉತ್ತರದಲ್ಲಿ(ಎಡ) ಕುಳಿತುಕೊಳ್ಳಬೇಕು ಇತರೆಡೆಗಳಲ್ಲಿ ವಧುವು ದಕ್ಷಿಣದಲ್ಲಿ(ಬಲ) ಕುಳಿತುಕೊಳ್ಳಬೇಕು ॥

೩೩ ಆವಾಂಕರ್ಮಣಿ ನಿತ್ಯಹೋಮ ಸಮಯೇ ಪುಣ್ಯಾಹ ಸಂಕಲ್ಪಯೋಃ । ಸ್ಥಾಲ್ಯಾಗ್ರೇಣ ಯೋಕ್ತ್ರಮೋಚನೇ ಪುನಸ್ಸಂಧಾನ ಶಯ್ಯೋತ್ಸವೇ । ಏತೇಷು ಆದ್ಯಚರೌ ಚ ವಿಪ್ರಪಡಿತಾಸು ಆಶೀಕ್ಷುರಕ್ಷಾಧೃತೌ । ತಿಷ್ಠೇದುತ್ತರತೋ ವಧೂಃ ಸ್ಮೃತಿ ವಶಾತ್ ಅನ್ಯತ್ತು ತದ್ದಕ್ಷಿಣೇ ॥

ಆ ವಧೂವರರ ಕರ್ಮದಲ್ಲಿ, ನಿತ್ಯಹೋಮಸಮಯದಲ್ಲಿ, ಪುಣ್ಯಾಹ, ಸಂಕಲ್ಪದಲ್ಲಿ । ಸ್ಥಾಲೀಪಾಕ, ಆಗ್ರಯಣ, ಯೋಕ್ತ್ರವಿಮೋಚನ, ಪುನಸ್ಸಂಧಾನ, ಮಲಗುವಿಕೆಯಲ್ಲಿ । ಆದ್ಯ ಚರುವಿನಲ್ಲಿ, ವಿಪ್ರರ ಆಶೀರ್ವಾದದಲ್ಲಿ, ರಕ್ಷೇಧರಿಸಬೇಕಾದರೆ, ವಧುವು ವರನಿಂದ ಉತ್ತರಕ್ಕೆ(ಎಡ) ಇರಬೇಕು ಎಂದು ಸ್ಮೃತಿವಾಕ್ಯವಿರೂದರಿಂದ ಬೇರೆಕರ್ಮಗಳಲ್ಲಿ ಅವಳು ದಕ್ಷಿಣಕ್ಕಿರಬೇಕು(ಬಲ) ॥

೩೪ ಪಾದಪ್ರಕ್ಷಾಲನೇ ಚೈವ ಮಧುಪರ್ಕಸ್ಯ ಪ್ರಾಶನೇಕನ್ಯಾ ಸ್ವೀಕೃತಿ ಕಾಲೇ ತು ಶೋಭನ ದ್ರವ್ಯಧಾರಣೇ । ಭ್ರುವೋರ್ಮಾರ್ಜನ ಕಾಲೇ ಚ ಕನ್ಯಾಮೂರ್ಧ್ನಿ

ಅಭಿಷೇಚನೇ । ಯೋಕ್ತ್ರಸ್ಯಾವೇಷ್ಟನೇ ಕಾಲೇ ಮಂಗಲ್ಯಸ್ಯ ಚ ಧಾರಣೇ । ವಧ್ವಾಸ್ತಂಡುಲ ಸಂಪ್ರಾಪ್ತು ವರೋ ವಾರುಣ ದಿಙ್ಮುಖಃ ॥

ಕಾಲುತೊಳೆಯಬೇಕಾದರೆ, ಮಧುಪರ್ಕಪ್ರಾಶನದಲ್ಲಿ । ಕನ್ಯಾಸ್ವೀಕಾರ ಮಾಡುವಾಗ, ಶೋಭನವಾದ ದ್ರವ್ಯಗಳನ್ನು ಧರಿಸುವಾಗ । ಹುಬ್ಬುಗಳಿಗೆ ಪ್ರೋಕ್ಷಣೆ ಮಾಡುವ ಕಾಲದಲ್ಲಿ, ಕನ್ಯೆಯ ತಲೆಗೆ ನೀರನ್ನು ಹಾಕಬೇಕಾದರೆ । ಯೋಕ್ತ್ರವನ್ನು ಕಟ್ಟುವ ಕಾಲದಲ್ಲಿ, ಮಾಂಗಲ್ಯಧಾರಣೆ ಮಾಡುವ ಕಾಲದಲ್ಲಿ । ವಧುವಿಗೆ ಅಕ್ಷತಾರೋಪಣವನ್ನು ಮಾಡುವಾಗ ಇವಿಷ್ಟೂ ಸಮಯಗಳಲ್ಲಿ ವರನು ಪಶ್ಚಿಮಾಭಿಮುಖವಾಗಿರಬೇಕು ॥

ವಿಶೇಷ ವಿಚಾರಗಳು

ಜಾತಾಶೌಚ – ಮೃತಾಶೌಚ ವಿಚಾರಃ

(ಗರುಡಪುರಾಣ)

೩೫ ಸರ್ವೇಷಾಮೇವ ವರ್ಣಾನಾಂ ಸೂತಕೇಮೃತಕೇಪಿ ವಾ । ದಶಾಹಾಚ್ಛುದ್ಧಿರಿತ್ಯೇಷಾ ಕಲೌ ಶಾಸ್ತ್ರಸ್ಯ ನಿರ್ಣಯಃ ॥

ಹಿಂದಿನ ಯುಗಗಳಲ್ಲಿ, ಜಾತಿಕ್ರಮದಂತೆ ಸೂತಕಾಚರಣೆ ಬೇರೆಬೇರೆ ರೀತಿಯಲ್ಲಿತ್ತು । ಕಲಿಯುಗದಲ್ಲಿ ಎಲ್ಲಾ ಜಾತಿಯವರಿಗೂ ೧೦ ದಿನಗಳಲ್ಲಿ ಸೂತಕ ಕಳೆಯುವುದು ॥

ಸೂತಕದಲ್ಲಿ ಮಾಡಬಾರದ ಕೆಲಸಗಳು

೩೬ ಆಶೀರ್ವಾದಂ ದೇವಪೂಜಾಂ ಪ್ರತ್ಯುತ್ಥಾನಾಭಿವಂದನಂ । ಪರ್ಯಂಕೇ ಶಯನಂ ಸ್ಪರ್ಶಂ ನ ಕುರ್ಯಾನ್ಮೃತ ಸೂತಕೇ । ಸಂಧ್ಯಾಂ ದಾನಂ ಜಪಂ

ಹೋಮಂ ಸ್ವಾಧ್ಯಾಯಂ ಪಿತೃತರ್ಪಣಂ । ಬ್ರಹ್ಮಭೋಜ್ಯಂ ವ್ರತಂ ನೈವ ಕರ್ತವ್ಯಂ ಮೃತಸೂತಕೇ ॥

ಆಶೀರ್ವಾದ, ದೇವಪೂಜೆ, ಯಾರಾದರೂ ಬಂದರೆ ಎದ್ದು ಸ್ವಾಗತಿಸುವುದು, ನಮಸ್ಕರಿಸುವುದು । ಮಂಚದಮೇಲೆ ಮಲಗುವುದು, ಪರಸ್ಪರ್ಶ । ಸಂಧ್ಯಾವಂದನೆ, ದಾನ, ಜಪ, ಹೋಮ, ಸ್ವಾಧ್ಯಾಯ, ಪಿತೃತರ್ಪಣ । ಬ್ರಹ್ಮಭೋಜನ, ವ್ರತ ಇವಿಷ್ಟೂ ಕಾರ್ಯಗಳನ್ನು ಸೂತಕದಲ್ಲಿ ಮಾಡಬಾರದು ॥

ಸೂತಕವಿಲ್ಲದವರುಗಳು

೩೭ ವ್ರತಿನೋ ಮಂತ್ರಪೂತಸ್ಯ ಸಾಗ್ನಿಕಸ್ಯ ದ್ವಿಜಸ್ಯ ಚ । ಬ್ರಹ್ಮನಿಷ್ಠಸ್ಯ ಯತಿನೋ ನ ಹಿ ರಾಜ್ಞಾಂ ಚ ಸೂತಕಂ ॥

ದೀರ್ಘಕಾಲದ ವ್ರತ ಮಾಡುವವರಿಗೆ, ಮಂತ್ರದ್ರಷ್ಟಾರರಾದ ಋಷಿಗಳಿಗೆ, ಅಗ್ನಿಹೋತ್ರಿಗಳಿಗೆ । ಬ್ರಹ್ಮನಿಷ್ಠನಾದ ಯತಿಗೆ, ರಾಜನಿಗೆ ಇವರುಗಳಿಗೆ ಸೂತಕವಿರುವುದಿಲ್ಲ ॥

ತಂದೆಯ ಸಮಾನರು (ಮನುಸ್ಮೃತಿ)

೩೮ ಶರೀರಕೃತ್ ಪ್ರಾಣದಾತ, ಯಸ್ಯಚಾನ್ನಾನಿಭುಜಂತೇ । ಕ್ರಮೇಣೈತೇ ತ್ರಯೋಪ್ಯುಕ್ತಾಃ ಪಿತರೋ ಧರ್ಮಶಾಸನೇ ॥

ನಮಗೆ ದೇಹ ಕೊಟ್ಟವನು, ಆಪತ್ತಿನಲ್ಲಿ ರಕ್ಷಿಸಿದವನು, ನಿರಂತರ ಅನ್ನಕೊಟ್ಟು ಕಾಪಾಡಿದವನು, ಇವರು ತಂದೆಯ ಸಮಾನರು ॥

ತಂದೆಯಲ್ಲಿರುವ ಲಕ್ಷಣಗಳೇ ಮಕ್ಕಳಲ್ಲಿಯೂ ಇರುವಿಕೆಯು

೩೯ ಗತಿಃ ಸ್ವರಃ ಸ್ಮೃತಿಃ ಸತ್ವಂ ಶೀಲ ವಿಜ್ಞಾನ ವಿಕ್ರಮಾಃ । ಧೃಷ್ಣು ಪ್ರಕೃತಿ ಭಾವೌ ಚ ಆವರ್ತಾ ರೋಮರಾಜಯಃ । ಸಮಾಯಸ್ಯ ಯತಸ್ಯುಸ್ತೇ ತಸ್ಯ ಪುತ್ರೋ ನ ಸಂಶಯಃ ॥

ಗತಿ, ಧ್ವನಿ, ಸ್ಮೃತಿ, ಶಕ್ತಿ, ವಿಜ್ಞಾನ, ವಿಕ್ರಮ, ಧೈರ್ಯ, ಸ್ವಭಾವ, ಸುಳಿಗಳು, ಕೂದಲುಗಳು, ಇವುಗಳು ತಂದೆಯಲ್ಲಿದ್ದ ಹಾಗೇ ಮಕ್ಕಳಲ್ಲಿಯೂ ಇರುವುವು ॥

ಒಳ್ಳೆಯ ಕರ್ಮಗಳಿಂದಲೂ ಕೆಟ್ಟ ಫಲ ಬರುವ ಬಗೆ

೪೦ ಚತ್ವಾರಿ ಕರ್ಮಾಣ್ಯಭಯಂಕರಾಣಿ ಭಯಂ ಪ್ರಯಚ್ಛಂತ್ಯ ಯಥಾ ಕೃತಾನಿ । ಮಾನಾಗ್ನಿಹೋತ್ರಮುತ ಮಾನವಮೌನಂ ಮಾನೇನಾಧೀತ ಮುತಮಾನ ಯಜ್ಞಃ ॥

ಅಗ್ನಿಹೋತ್ರ, ಮೌನ, ಅಧ್ಯಯನ, ಯಜ್ಞ ಇವಿಷ್ಟೂ ಮನುಷ್ಯನಿಗೆ ಶ್ರೇಯಸ್ಸನ್ನು ಕೊಡುವಂತಹವುಗಳು । ಅಹಂಕಾರದಿಂದ ಹಾಗೂ ಗೌರವ ಸ್ಥಾನವನ್ನು ಅಪೇಕ್ಷಿಸಿ ಮಾಡಿದರೆ ಅಧೋಗತಿಗೆ ಕಾರಣವಾಗುತ್ತದೆ ॥

ಯಾವುದನ್ನು ಯಾವುದರಿಂದ ರಕ್ಷಿಸಬೇಕು

೪೧ ಧೃತ್ಯಾ ಶಿಶ್ನೋದರಂ ರಕ್ಷೇತ್ ಪಾಣಿ ಪಾದಂ ಚ ಚಕ್ಷುಷಾ । ಚಕ್ಷುಃ ಶ್ರೋತ್ರೇ ಚ ಮನಸಾ ಮನೋವಾಚಾಂ ಚ ಕರ್ಮಣಾ ॥

ಬುದ್ಧಿಯಿಂದ ಜನನಾಂಗವನ್ನು ಮತ್ತು ಉದರವನ್ನು ರಕ್ಷಿಸಬೇಕು, ಕೈಕಾಲುಗಳನ್ನು ಕಣ್ಣಿನಿಂದ, ಕಣ್ಣುಕಿವಿಗಳನ್ನು ಮನಸ್ಸಿನಿಂದ, ಮನಸ್ಸು ವಾಕ್‌ಗಳನ್ನು ಕರ್ಮದಿಂದ ರಕ್ಷಿಸಬೇಕು ॥

ಮಾರ್ಗದಲ್ಲಿ ಯಾರಿಗೆ ದಾರಿಯನ್ನು ಬಿಡಬೇಕು

೪೨ ಅಂಧಸ್ಯ ಪಂಥಾ ಬಧಿರಸ್ಯ ಪಂಥಾಃ ಸ್ತ್ರಿಯಃ ಪಂಥಾಃ ಭಾರವಾಹಸ್ಯ ಪಂಥಾಃ । ರಾಜ್ಞಃ ಪಂಥಾ ಬ್ರಾಹ್ಮಣೇನಾ ಸಮೇತ್ಯ ಸಮೇತ್ಯತು ಬ್ರಾಹ್ಮಣಸ್ಯೇವ ಪಂಥಾಃ ॥

ಮಾರ್ಗದಲ್ಲಿ ಹೋಗುವಾಗ – ಕುರುಡನಿಗೆ, ಕಿವುಡನಿಗೆ, ಮಹಿಳೆಗೆ, ಭಾರವಾದ ಹೊರೆ ಹೊತ್ತವರಿಗೆ, ರಾಜನಿಗೆ, ಬ್ರಾಹ್ಮಣನಿಗೆ, ರಾಜನೂ ಬ್ರಾಹ್ಮಣನೂ ಒಟ್ಟಿಗೆ ಬಂದರೆ ಬ್ರಾಹ್ಮಣನಿಗೆ ಇವರುಗಳಿಗೆ ಮೊದಲು ದಾರಿ ಬಿಡಬೇಕು ॥

ಕಲಿಯುಗದ ಕಡೆಯ ಹಂತದಲ್ಲಿ ಜೀವನಶೈಲಿ

೪೩ ಸಪ್ತ ವರ್ಷಾಷ್ಟ ವರ್ಷಶ್ಚ ಸ್ತ್ರೀಯೋ ಗರ್ಭಧರಾ ನೃಪ । ದಶ ದ್ವಾದಶ ವರ್ಷಾಣಾಂ ಪುಂಸಾಂ ಪುತ್ರಃ ಪ್ರಜಾಯತೇ । ಭವಂತಿ ಷೋಡಶೀ ವರ್ಷೇ ನರಾ ಫಲಿತಿನಃ ಸದಾ । ಪರಮಾಯುಷ್ಯ ಭವಿತಾತದಾ ವರ್ಷಾಣಿ ಷೋಡಶ ॥

ಕಲಿಯುಗದ ಕಡೆಕಡೆಗೆ, ೭–೮ ವರ್ಷಗಳಲ್ಲಿ ಸ್ತ್ರೀಯರು ಗರ್ಭವನ್ನು ಧರಿಸುವರು, ೧೦–೧೨ ವರ್ಷಗಳಲ್ಲಿ ಗಂಡಸರಿಗೆ ಮಕ್ಕಳು ಹುಟ್ಟುವರು, ೧೬ನೇ ವರ್ಷಕ್ಕೆ ಗಂಡಸರು ಮುದುಕರಾಗುವರು, ಆ ಸಮಯದಲ್ಲಿ ಮನುಷ್ಯರ ಪರಮಾಯುಷ್ಯವೇ ೧೬ ವರ್ಷಗಳು ! ॥

ಬ್ರಾಹ್ಮಣ್ಯ ಲಕ್ಷಣ

೪೪ ಯಸ್ತು ಶೂದ್ರೇ ದಮೇ ಸತ್ಯೇ ಧರ್ಮೇ ಚ ಸತತೋತ್ಥಿತಃ । ತಂ ಬ್ರಾಹ್ಮಣಮಹಂ ಮನ್ಯೇ ವೃತ್ತೇನಹಿ ಭವೇದ್ದ್ವಿಜಃ ॥

ಯಾರಲ್ಲಿ ಇಂದ್ರಿಯ ನಿಗ್ರಹ, ಶಕ್ತಿ, ಸತ್ಯವಾದಿತ್ವ, ಧರ್ಮನಿಷ್ಠೆ, ಸಾತ್ವಿಕತೆ ಮುಂತಾದ ಸದ್ಗುಣಗಳು ಇರುವಪ್ಪೋ ಅವನನ್ನೇ ಬ್ರಾಹ್ಮಣನೆಂದು ತಿಳಿಯಬೇಕು । ನಡತೆಯಿಂದಲೇ ಬ್ರಾಹ್ಮಣನೇ ಹೊರತು ಜಾತಿಯಿಂದಲ್ಲ, ಬ್ರಾಹ್ಮಣ್ಯವೆಂಬುದು ನಡವಳಿಕೆಯ ಸೂಚಕವೇ ಹೊರತು ದೇಹ ಸಂಬಂಧಿತ ಜಾತಿ ಸೂಚಕವಲ್ಲ । ಒಂದು ವೇಳೆ ಶೂದ್ರನಲ್ಲಿಯೇ ಈ ಗುಣಗಳಿದ್ದರೆ ಅವನೇ ಬ್ರಾಹ್ಮಣನು ॥

ಆತ್ಮಹತ್ಯಾ ದೋಷವಿಲ್ಲದವರು

೪೫ ಅನುಷ್ಠಾನಾಸಮರ್ಥಸ್ಯ ವಾನಪ್ರಸ್ಥಸ್ಯ ಜೀರ್ಯತಃ । ಭೃಗ್ವಗ್ನಿ ಜಲ ಸಂಪಾತೈರ್ದೇಹ ತ್ಯಾಗೋ ವಿಧೀಯತೇ ॥

ಅನುಷ್ಠಾನ ಮಾಡಲು ಸಾಧ್ಯವಿಲ್ಲದಿರುವಾಗ, ವಾನಪ್ರಸ್ಥಾಶ್ರಮವನ್ನು ಹೊಂದಿದವನು, ಪ್ರಪಾತ, ಜಲ, ಅಗ್ನಿಗಳಲ್ಲಿ ದೇಹತ್ಯಾಗ ಮಾಡಿದರೆ ಆತ್ಮಹತ್ಯಾ ದೋಷವಿಲ್ಲ ॥

ಧರ್ಮದ ಲಕ್ಷಣ

೪೬ ವೇದೋಕ್ತಃ ಪ್ರಥಮೋ ಧರ್ಮೋ ಧರ್ಮಶಾಸ್ತ್ರೇಷು ಚಾಪರಃ । ಶಿಷ್ಟಾಚಾರ ಸ್ತೃತೀಯಸ್ತು ತ್ರಿವಿಧಂ ಧರ್ಮಲಕ್ಷಣಂ ॥

ವೇದಗಳಲ್ಲಿ ಹೇಳಿದ ಧರ್ಮವೇ ಮುಖ್ಯ, ಅದಕ್ಕೇ ಮೊದಲ ಪ್ರಾಶಸ್ತ್ಯ । ಧರ್ಮಶಾಸ್ತ್ರಗಳಲ್ಲಿ ಹೇಳಿರುವುದಕ್ಕೆ ೨ನೇ ಆದ್ಯತೆ । ಶಿಷ್ಟಾಚಾರಕ್ಕೆ ೩ನೇ ಆದ್ಯತೆ, ಅದೂ ಶಾಸ್ತ್ರ ಒಪ್ಪುವಂತಿದ್ದಾಗ ಮಾತ್ರ ॥

ಸಂಧ್ಯಾವಂದನೆಯನ್ನು ಯಾವಾಗ ಬಿಟ್ಟರೆ ದೋಷವಿಲ್ಲ

೪೭ ಅತ್ಯಂತ ರೋಗ ಸಂಯುಕ್ತೇ ರಾಜಚೋರ ಭಯಾದಿಷು । ಗುರ್ವಗ್ನಿ ದೇವ ಕೃತ್ಯೇಷು ನಿತ್ಯಹಾನೌನ ದೋಷಭಾಕ್ ॥

ದೊಡ್ಡ ಖಾಯಿಲೆಗೆ ತುತ್ತಾದಾಗ, ರಾಜ–ಕಳ್ಳರ ಭಯ ಇದ್ದಾಗ, ಗುರು–ಅಗ್ನಿ–ದೇವತಾ ಕಾರ್ಯಗಳಿದ್ದಾಗ ಸಂಧ್ಯಾದಿ ನಿತ್ಯಕರ್ಮಗಳನ್ನು ಕಡಿಮೆ ಮಾಡಬಹುದು, ಬಿಡುವಹಾಗಿಲ್ಲ ॥

ಯಾವಯಾವ ಆಸನಗಳಿಂದ ಎಂತಹ ಲಾಭ

ಳಲ ವಂಶಾಸನೇಷು ದಾರಿದ್ರ್ಯಂ ಪಾಷಾಣೇ ವ್ಯಾಧಿ ಸಂಭವಃ । ಧರಣ್ಯಾಂ ದುಃಖ ಸಂಭೂತಿಃ ದೌರ್ಭಾಗ್ಯಂ ಭಿನ್ನದಾರುಜೇ । ತೃಣಾಸನೇ ಯಶೋಹಾನಿ ಪಲ್ಲವೇ ಚಿತ್ತವಿಭ್ರಮಃ । ಕೃಷ್ಣಾಜಿನೇ ಜ್ಞಾನ ಸಿದ್ಧಿಃ ಮೋಕ್ಷಶ್ರೀಃ ವ್ಯಾಘ್ರಚರ್ಮಣಿ । ವಸ್ತ್ರಾಸನೇ ವ್ಯಾಧಿನಾಶಃ ಕಂಬಲೇ ದುಃಖ ಮೋಚನಮ್ ॥

ಬಿದಿರಿನಿಂದ ಮಾಡಿದ ಆಸನದಲ್ಲಿ ಕೂರುವುದರಿಂದ ದಾರಿದ್ರ್ಯವು ಬರುತ್ತದೆ, ಕಲ್ಲಿನ ಆಸನ ಉಪಯೋಗಿಸುವುದರಿಂದ ಖಾಯಿಲೆ ಉಂಟಾಗುತ್ತದೆ । ಭೂಮಿಯಲ್ಲಿ(ನೆಲ) ಕೂರುವುದರಿಂದ ದುಃಖವೂ, ಭಿನ್ನವಾದ ಮರದ ಆಸನವಾದರೆ ದೌರ್ಭಾಗ್ಯವು ಉಂಟಾಗುತ್ತದೆ । ಹುಲ್ಲಿನ ಆಸನವಾದರೆ ಯಶೋಹಾನಿಯು, ಎಲೆಗಳ ಆಸನವಾದರೆ ಮನಸ್ಸಿನ ಚಂಚಲತೆಯೂ । ಕೃಷ್ಣಾಜಿನದ ಆಸನವಾದರೆ ಜ್ಞಾನ ಸಿದ್ಧಿಯೂ, ಹುಲಿಯ ಚರ್ಮವಾದರೆ ಮೋಕ್ಷ ಸಿದ್ಧಿಯೂ । ಬಟ್ಟೆಯ ಆಸನವಾದರೆ ರೋಗ ನಾಶವೂ, ಕಂಬಳಿಯ ಆಸನವಾದರೆ ದುಃಖನಾಶವೂ ಆಗುತ್ತದೆ ॥

ಮೈಲಿಗೆಯ(ಅಸ್ಪೃಶ್ಯತ್ವ) ದೋಷವಿಲ್ಲದ ಸನ್ನಿವೇಶಗಳು

ಳ್ಳ ತೀರ್ಥೇ ವಿವಾಹೇ ಯಾತ್ರಾಯಾಂ ಸಂಗ್ರಾಮೇ ದೇಶವಿಪ್ಲವೇ । ನಗರ ಗ್ರಾಮ ದಾಹೇ ಚ ಅಸ್ಪೃಶ್ಯತ್ವಂ ನ ವಿದ್ಯತೇ । ದಾನೇ ವಿವಾಹೇ ಯಜ್ಞೇ ಚ ಮಹೋತ್ಪಾತೇ ರುಜಾಗಮೇ । ಆಪದ್ಯಪಿ ಚ ಕಷ್ಟಾಯಾಂ ಸದ್ಯಃ ಶೌಚಂ ವಿಧೀಯತೇ ॥

ತೀರ್ಥಕ್ಷೇತ್ರದಲ್ಲಿ, ವಿವಾಹದಲ್ಲಿ, ಯಾತ್ರೆಯಲ್ಲಿ, ಯುದ್ಧದಲ್ಲಿ, ದೇಶಕ್ಕೆ ತೊಂದರೆ ಬಂದಾಗ, ನಗರ – ಗ್ರಾಮದಲ್ಲಿ ಅಗ್ನಿ ಭಯ ಉಂಟಾದಾಗ, ಅಸ್ಪೃಶ್ಯತೆಯ ದೋಷವಿಲ್ಲ. ದಾನದಲ್ಲಿ, ವಿವಾಹ, ಯಜ್ಞ, ಮಹೋತ್ಪಾತ, ರೋಗ, ಆಪತ್ತು, ತೀವ್ರವಾದ ಕಷ್ಟ ಈ ಸಂದರ್ಭಗಳಲ್ಲಿ ಆಶೌಚವಿದ್ದರೂ ಮೇಲೆ ತಿಳಿಸಿರುವ ಕಾಲಕ್ಕೆ ಶುದ್ಧಿಯುಂಟಾಗುತ್ತದೆ.

ಹೂ ಪತ್ರೆಗಳು ಅಶುಚಿಯಾಗುವುದು ಹೇಗೆ ?

೫೦ ಅಧೋವಸ್ತ್ರ ಧೃತಂ ಯಚ್ಚ ಜಲಾಂತಃ ಕ್ಷಾಲಿತಂ ಚ ಯತ್ । ದೇವತಾಸ್ತನ್ನಿರ್ಗೃಹ್ಣಂತಿ ಪುಷ್ಪಂ ನಿರ್ಮಾಲ್ಯತಾಂ ಭವೇತ್ ॥

ಅಧೋ(ಕೆಳ)ವಸ್ತ್ರದಲ್ಲಿ ಹಾಕಿದ, ನೀರಿನಲ್ಲಿ ತೊಳೆದಿರುವ, ಹೂಪತ್ರೆಗಳು ಅಪವಿತ್ರವಾಗಿ ದೇವತಾರಾಧನೆಗೆ ಅಯೋಗ್ಯವಾಗುವುವು ॥

ದೀಪದ ಫಲ

೫೧ ದೇವಾಗಾರೇ ದ್ವಿಜಾತೀನಾಂ ದೀಪಂ ದತ್ವಾ ಚತುಷ್ಪಥೇ । ಮೇಧಾವೀ ಜ್ಞಾನ ಸಂಪನ್ನಶ್ಚಕ್ಷುಷ್ಮಾನ್ ಜಾಯತೇ ನರಃ ॥

ದೇವಾಲಯದಲ್ಲಿ, ಬ್ರಾಹ್ಮಣಬೀದಿಯಲ್ಲಿ, ೪ ರಸ್ತೆಗಳು ಕೂಡುವಲ್ಲಿ, ದೀಪವನ್ನು ಹಚ್ಚಿದರೆ ಒಳ್ಳೆಯ ದೃಷ್ಟಿಯುಳ್ಳವನೂ, ಜ್ಞಾನಿಯೂ ಆಗುವನು ॥

~~~~~~~~
~~~~~~~~

2004ರಲ್ಲಿ ಜಗದ್ಗುರು ಶ್ರೀ ಭಾರತೀತೀರ್ಥ ಮಹಾಸ್ವಾಮಿಗಳವರ ಸೂಚನೆಯಂತೆ ಶ್ರೀಯುತ ಶರ್ಮರನ್ನು ಬೆಂಗಳೂರಿನ ಶ್ರೀ ಸೀತಾರಾಮಾಂಜನೇಯ ವೇದಪಾಠಶಾಲೆ ವತಿಯಿಂದ 'ವೇದಭೂಷಣ' ಬಿರುದಿನೊಂದಿಗೆ ಸನ್ಮಾನಿಸುತ್ತಿರುವುದು

ೀಯುತ ಶರ್ಮರನ್ನು
012ರಲ್ಲಿ ಶಿವಮೊಗ್ಗದ
ದಿಕ ಪರಿಷತ್
ತಿಯಿಂದ ಕರ್ನಾಟಕ
ಬ್ರಹ್ಮಣ ಮಹಾಸಭಾದ
ಧ್ಯಕ್ಷರಾದ ಶ್ರೀ ಬಿ.ಎನ್.
. ಸುಬ್ರಹ್ಮಣ್ಯ,
ರ್ನಾಟಕ ರಾಜ್ಯದ
ಉಪಮುಖ್ಯಮಂತ್ರಿಗಳಾದ
ಈಶ್ವರಪ್ಪನವರು
ನ್ಮಾನಿಸುತ್ತಿರುವುದು

ಶ್ರೀಯುತ ಶರ್ಮರನ್ನು 2012ರಲ್ಲಿ ಶಿವಮೊಗ್ಗದಲ್ಲಿ ಕಾರ್ಯನಿರ್ವಹಿಸುತ್ತಿರುವ ದೆಹಲಿಯ 'ಭಾರತೀಯ ಜ್ಯೋತಿರ್ವಿಜ್ಞಾನ ಸಂಸ್ಥೆ'ಯ ವತಿಯಿಂದ ಸನ್ಮಾನಿಸುತ್ತಿರುವುದು

ಅನುವಾದಕ ಲೇಖಕರು ಮತ್ತು ಪ್ರಕಾಶಕರು
ವೇದ ಬ್ರಹ್ಮ ಶ್ರೀ ಎ.ಸಿ. ಶಕ್ತಿಧರ ಶರ್ಮಾ
ಚೈತನ್ಯ ಗುರುನಾಥ ಪ್ರಕಾಶನ
C/o. ಶ್ರೀಮಾನ್ ಸುಬ್ರಹ್ಮಣ್ಯ ಪ್ರಸಾದ್‌ರವರು
448 'ಸಂಹಿತಾ', 4ನೇ ತಿರುವು, ರವೀಂದ್ರನಗರ
ಶಿವಮೊಗ್ಗ, ಕರ್ನಾಟಕ
ಮೊ : 9686497982